ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಹರಕೆಯ ಕುರಿ



ಸಂಪುಟ 10 | ಸಂಚಿಕೆ 33 | ಪುಟ 16 | ಆಗಸ್ಟ್ 14, 2016 | ರೂ. 10/-

web: www.janashakthi.co.in e-mail : js_weekly@yahoo.com







ಮಹಾದಾಯಿ ದೌರ್ಜನ್ಯ





ಬೆಂಗಳೂರು ಕೃತಕ ನೆರೆ



ಪ. ಬಂಗಾಳ : ಪ್ರಜಾಪ್ರಭುತ್ವದ ಕೊಲೆ



ಸತ್ತ ಹಸು ಮುಟ್ಟೋದಿಲ್ಲ: ಗುಜರಾತ್ ದಲಿತರು

ಪಾಸಾಗಿದ್ದು ಜಿ.ಎಸ್.ಟಿ.ಅಲ್ಲ!

CITU 5ನೇ ತುಮಕೂರು ಜಿಲ್ಲಾ ಸಮ್ಮೇಳನ

ತುಮಕೂರು: ಕೈಗಾರಿಕೆ, ಕಾರ್ಮಿಕರ ಪರಿಸ್ಥಿತಿ

ಪ್ರವಾಹ ಸಂತ್ರಸ್ತರಿಗೆ ತಕ್ಷಣ ಪರಿಹಾರ ಒದಗಿಸುವ ಅಗತ್ಯವಿದೆ

* ಗೋರಕ್ಷಕ ಗುಂಪುಗಳ ಹೆಚ್ಚುತ್ತಿರುವ ಹಲ್ಲೆಗಳು
* ಕಾಶ್ಮೀರದಲ್ಲಿ ಗಂಭೀರ ಪರಿಸ್ಥಿತಿ
* ಶಿಕ್ಷಣ ವ್ಯವಸ್ಥೆಯ ಮೇಲೆ ಕೋಮುವಾದಿ ದಾಳಿ
* ಪಶ್ಚಿಮ ಬಂಗಾಲದಲ್ಲಿ ಪ್ರಜಾಪ್ರಭುತ್ವದ ಕೊಲೆಯ ವಿರುದ್ಧ ಪ್ರತಿಭಟನೆ
* ಪ್ಲೀನಮ್ ನಿರ್ಧಾರಗಳ ಜಾರಿ

– ಸಿಪಿಐ(ಎಂ) ಪೊಲಿಟ್‌ಬ್ಯುರೊ



ದೇಶದ ಹಲವೆಡೆಗಳಲ್ಲಿ, ವಿಶೇಷವಾಗಿ ಪೂರ್ವ ಮತ್ತು ಉತ್ತರ ಭಾಗದಲ್ಲಿ ಭಾರೀ ಮಳೆಯಿಂದಾಗಿ ಗಂಭೀರ ಪರಿಸ್ಥಿತಿ ನಿರ್ಮಾಣವಾಗಿದೆ. ಅಸ್ಸಾಂ ಮತ್ತು ಬಿಹಾರ್‌ನಲ್ಲಿ ಪ್ರವಾಹದಿಂದ ಅತಿ ಹೆಚ್ಚು ತೊಂದರೆ ಉಂಟಾಗಿದೆ ಎಂದು ವರದಿಯಾಗಿದೆ. ಸಾವಿರಾರು ಮಂದಿ ಮನೆಮಾರು ಕಳಕೊಂಡಿದ್ದಾರೆ. ಪ್ರವಾಹದಿಂದಾಗಿರುವ ಅನಾಹುತಗಳು ಅಭೂತಪೂರ್ವ ಎನ್ನಲಾಗಿದೆ. ಹಲವಾರು ಜಿಲ್ಲೆಗಳು ಜಲಾವೃತ್ತವಾಗಿ ಸಂಪರ್ಕಗಳು ಇಲ್ಲವಾದಂತಾಗಿದೆ. ಕೇಂದ್ರ ಸರಕಾರ ಎಲ್ಲ ಬಾಧಿತ ಜಿಕ್ಕೆಗಳ ಸರ್ವೆ ನಡೆಸಬೇಕು, ಅಗತ್ಯ ಪರಿಹಾರಗಳ ಅಂದಾಜು ನಡೆಸಿ ಬೇಗನೇ ಅವುಗಳನ್ನು ಸಂತ್ರಸ್ತತ ಪ್ರದೇಶಗಳಿಗೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಪ್ರವಾಹಕ್ಕೆ ಸಿಲುಕಿಕೊಂಡಿರುವವರನ್ನು ಅಲ್ಲಿಂದ ಸುರಕ್ಷತ ಸ್ಥಳಗಳಿಗೆ ಒಯ್ಯುವ ಕೆಲಸಕ್ಕೆ ಆದ್ಯತೆ ನೀಡಬೇಕಾಗಿದೆ ಎಂದು ಸಿಐ(ಎಂ) ಹೇಳಿದೆ.

ಜುಲೈ 31ರಂದು ದಿಲ್ಲಿಯಲ್ಲಿ ಸಭೆ ಸೇರಿದ ಪೊಲಿಟ್‌ಬ್ಯುರೊ ದೇಶದಲ್ಲಿನ ಪ್ರಸಕ್ತ ಪರಿಸ್ಥಿತಿಯ ಪರಿಶೀಲನೆ ನಡೆಸುತ್ತ ಈ ಆಗ್ರಹವನ್ನು ಮಾಡಿದೆ.

ಗೋರಕ್ಷಕ ಗುಂಪುಗಳ ಹಲ್ಲೆಗಳು ಹೆಚ್ಚುತ್ತಿವೆ ದಲಿತರು, ಮಹಿಳೆಯರ ಮೇಲೆ ದಾಳಿಗಳು ತೀವ್ರಗೊಳ್ಳುತ್ತಿವೆ

ದೇಶದ ವಿವಿಧ ಭಾಗಗಳಲ್ಲಿ ಗೋರಕ್ಷಕರು ಎಂದು ಹೇಳಿಕೊಳ್ಳುವ ಗುಂಪುಗಳ ಹಲ್ಲೆಗಳು ಹೆಚ್ಚುತ್ತಿವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ. ದಾದ್ರಿಯಲ್ಲಿ ಮಹಮ್ಮದ್ದ ಅಖ್ಲಾಕ್‌ನನ್ನು ಕೊಚ್ಚಿ ಹಾಕಿದ ನಂತರ ಇಂತಹ ಗೋರಕ್ಷಣೆಯ ಹೆಸರಿನ ಗುಂಪುಗಳು ದಲಿತರು ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಜನಗಳ ಮೇಲೆ ಹಲ್ಲೆಗಳನ್ನು ನಡೆಸಿರುವ ಹಲವಾರು ಘಟನೆಗಳು ಗುಜರಾತ, ಮಧ್ಯಪ್ರದೇಶ ಸೇರಿದಂತೆ ಹಲವು ಕಡೆಗಳಿಂದ ವರದಿಯಾಗಿವೆ. ಆಘಾತಕರ ಸಂಗತಿಯೆಂದರೆ ಆಡಳಿತ ಇದರಲ್ಲಿ ಮೂಕಪ್ರೇಕ್ಷಕರಂತಾಗಿದೆ, ಕೆಲವೊಮ್ಮೆ ಹಲ್ಲೆಕೋರರಿಗೇ ನೆರವಾಗಿ ಹಲ್ಲೆಗೊಳಗಾದವರ ಮೇಲೇಯೇ ಕೇಸುಗಳನ್ನು ಹಾಕಲಾಗಿದೆ ಎಂದು ಸಿಪಿಐ(ಎಂ) ಹೇಳಿದೆ.

ಕೇಂದ್ರದಲ್ಲಿ ಬಿಜೆಪಿ ಸರಕಾರ ಅಧಿಕಾರ ವಹಿಸಿಕೊಂಡಂದಿನಿಂದ ದಲಿತರ ಮೇಲಿನ ದಾಳಿಗಳು ಹೆಚ್ಚುತ್ತಿವೆ ಎಂದು ಹೇಳಿರುವ ಸಿಪಿಐ(ಎಂ), ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಇಂತಹ ಘಟನೆಗಳು ಆಘಾತಕಾರೀ ರೀತಿಯಲ್ಲಿ ಹೆಚ್ಚಲು ಬಿಡುತ್ತಿದೆ ಮಾತ್ರವಲ್ಲ, ಕೋಮುಧ್ರುವೀಕರಣ, ದಲಿತರು ಮತ್ತು ಮಹಿಳೆಯರ ಮೇಲೆ ದಾಳಿಗಳು ತೀವ್ರಗೊಳ್ಳುವಂತೆ ಮಾಡುತ್ತಿದೆ ಎಂದು ಪರಿಸ್ಥಿತಿಯ ವಿಶ್ಲೇಷಣೆ ಮಾಡುತ್ತ ಹೇಳಿದೆ.

ಕಾಶ್ಮೀರ: ರಾಜಕೀಯ ಸಂವಾದ ಆರಂಭಿಸಲು ಕರೆ

ಕಾಶ್ಮೀರದಲ್ಲಿ ಪರಿಸ್ಥಿತಿ ಹದಗೆಡುತ್ತಿದೆ ಎಂದು ಪೊಲಿಟ್ ಬ್ಯುರೊ ಮತ್ತೊಮ್ಮೆ ಆತಂಕ ವ್ಯಕ್ತಪಡಿಸಿದೆ. ಜನತೆ ಮತ್ತು ಸೇನೆಯ ನಡುವಿನ ತಿಕ್ಕಾಟ ಮುಂದುವರೆದಿದೆ. ಬುರ್ಹಾನ್ ವಾನಿ ಮತ್ತು ಆತನ ಸಹಯೋಗಿಗಳ ಎನ್‌ಕೌಂಟರ್ ಸಾವಿನ ನಂತರ ಎದ್ದ ಬೃಹತ್ ಸಾಮೂಹಿಕ ಅಸಂತುಷ್ಟಿಯಲ್ಲಿ ಮಾಧ್ಯಮ ವರದಿಗಳ ಪ್ರಕಾರ 42ಜನ ಸತ್ತಿದ್ದಾರೆ(ಈಗ ಇದು 49 ಕ್ಕೇರಿದೆ), ನೂರಾರು ಮಂದಿ ಗಾಯಗೊಂಡಿದ್ದಾರೆ.

ಈ ಸಂಖ್ಯೆಗಳು ಮತ್ತು ಗಾಯಗಳ ತೀವ್ರತೆ ಪ್ರತಿಭಟನೆಗಳನ್ನು ಎದುರಿಸಲು ಭದ್ರತಾ ಪಡೆಗಳು ಅಮಾನುಷವಾಗಿ ವರ್ತಿಸಿವೆ ಎಂಬ ಗಂಭೀರ ಪ್ರಶ್ನೆಗಳನ್ನು ಎತ್ತಿವೆ. ಕಲ್ಲು ತೂರುವ ಯುವಜನರ ಮೇಲೆ 'ಪ್ರಾಣಾಂತಿಕ'ವಲ್ಲ ಎನ್ನುವ ಪೆಲ್ಲೆಟ್ ಗನ್‌ಗಳ ಬಳಕೆಯಿಂದಾಗಿ ಹಲವಾರು ಪ್ರತಿಭಟನಾಕಾರರ ಕಣ್ಣುಗಳಿಗೆ ತೀವ್ರ ಗಾಯಗಳಾಗಿ ಹಲವರು ದೃಷ್ಟಿ ಕಳಕೊಳ್ಳುವಂತಾಗಿದೆ. ಬಹಳಷ್ಟು ಮಂದಿಗೆ ಗಾಯಗಳಾಗಿರುವುದು ಸೊಂಟಕ್ಕಿಂತ ಮೇಲ್ಭಾಗದಲ್ಲಿ. ಪೆಲ್ಲೆಟ್ ಗನ್‌ಗಳ ಬಳಕೆಯನ್ನು ತಕ್ಷಣವೇ ನಿಲ್ಲಿಸಬೇಕು ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಮಾಯಕ ನಿಶ್ಶಸ್ತ್ರ ಪ್ರತಿಭಟನಾಕಾರ ಹತ್ಯೆಗಳಿಗೆ ಕಾರಣರಾದವರನ್ನು ಹೊಣೆಗಾರರಾಗಿಸಬೇಕು ಎಂದು ಮತ್ತೊಮ್ಮೆ ಆಗ್ರಹ ಪಡಿಸಿದೆ.

ಸಾವುಗಳನ್ನು ಎದುರಿಸ ಬೇಕಾಗಿ ಬಂದಿರುವ ಕುಟುಂಬಗಳಿಗೆ ಸಾಕಷ್ಟು ಪರಿಹಾರಗಳನ್ನು ಒದಗಿಸಬೇಕು, ಅವರಿಗೆ ಮತ್ತು ಗಾಯಗೊಂಡವರಿಗೆ ಜೀವನಾಧಾರಗಳನ್ನು ಕಲ್ಪಿಸಿಕೊಡುವ ಕ್ರಮಗಳನ್ನು ತಕ್ಷಣವೇ ಕೈಗೆತ್ತಿಕೊಳ್ಳಬೇಕು ಎಂದು ಸಿಪಿಐ(ಎಂ) ಹೇಳಿದೆ.

ಗಡಿಗಳಲ್ಲಿ ನುಸುಳಿಕೆಯನ್ನು ತಪ್ಪಿಸಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ನಿಜ, ಆದರೆ ಅದು ನಾಗರಿಕ ಜನತೆಯ ಮೇಲೆ ಅನಗತ್ಯ ಬಲಪ್ರಯೋಗಕ್ಕೆ ನೆಪವಾಗಬಾರದು ಎಂದಿರುವ ಸಿಪಿಐ(ಎಂ) ಸಶಸ್ತ್ರ ಪಡೆಗಳ ವಿಶೇಷ ಅಧಿಕಾರಗಳ ಕಾಯ್ದೆ(ಆಫ್‌ಸ್ಪ) ಯನ್ನು ಗಡಿಪ್ರದೇಶಗಳಿಗಷ್ಟೇ ಸೀಮಿತಗೊಳಿಸಿ ರಾಜ್ಯದ ಇತರೆಡೆಗಳಲ್ಲಿ ಅದನ್ನು ಹಿಂತೆಗೆದುಕೊಳ್ಳಬೇಕು ಎಂದು ಸೂಚಿಸಿದೆ.

ಪ್ರಸಕ್ತ ಅಸಂತುಷ್ಟಿಯನ್ನು ನಿವಾರಿಸಲು ಮಾತ್ರವೇ ಅಲ್ಲ, ಕಾಶ್ಮೀರದಲ್ಲಿ ದೀರ್ಘಕಾಲ ಶಾಂತಿ ಮತ್ತು ಸಾಮಾನ್ಯ ಪರಿಸ್ಥಿತಿ ನೆಲೆಸುವಂತೆ ಮಾಡಲು ತಕ್ಷಣವೇ ಸಂವಾದವನ್ನು ಆರಂಭಿಸಬೇಕಾಗಿದೆ. ಈ ಪ್ರಶ್ನೆಯನ್ನು ಚರ್ಚಿಸಲು ಕೇಂದ್ರ ಸರಕಾರ ತಕ್ಷಣವೇ ಒಂದು ಸರ್ವಪಕ್ಷ ಸಭೆಯನ್ನು ಕರೆಯಬೇಕು, ಮತ್ತು ರಾಜ್ಯಮಟ್ಟದಲ್ಲಿ ಎಲ್ಲ ರಾಜಕೀಯ ಶಕ್ತಿಗಳೊಂದಿಗೆ ಹಾಗೂ ನಾಗರಿಕ ಗುಂಪುಗಳೊಂದಿಗೆ ಸಮಾಲೋಚನೆಗಳನ್ನು ತುರ್ತಾಗಿ ಆರಂಭಿಸಬೇಕು ಎಂಬ ಆಗ್ರಹವನ್ನು ಪುನರುಚ್ಚರಿಸುತ್ತಲೇ, ಭಾರತ ಸರಕಾರ ಎಲ್ಲ ಬಾಕಿ ಉಳಿದಿರುವ ಪ್ರಶ್ನೆಗಳ ಮೇಲೆ ಭಾರತ–ಪಾಕಿಸ್ತಾನ ಸಂವಾದವನ್ನು ಪುನರಾರಾಂಭಿಸಬೇಕು, ಇದು ಎಲ್ಲ ಅಂಶಗಳನ್ನೂ ಒಳಗೊಳ್ಳುವ ಸಂವಾದವಾಗಬೇಕು ಎಂದು ಸೂಚಿಸಿದೆ.

ಶಿಕ್ಷಣ ವ್ಯವಸ್ಥೆಯ ಮೇಲೆ ದಾಳಿ– ದೊಡ್ಡ ಪ್ರತಿರೋಧ ಆರಂಭವಾಗಲಿದೆ

ಕೇಂದ್ರ ಸರಕಾರ ಶಿಕ್ಷಣ ವ್ಯವಸ್ಥೆಯನ್ನು ಕೋಮುಗ್ರಸ್ತಗೊಳಿಸುವ ಪ್ರಯತ್ನಗಳನ್ನು ನಡೆಸಿದೆ ಎಂದು ಪೊಲಿಟ್‌ಬ್ಯುರೊ ಖಂಡಿಸಿದೆ. **ಹೊಸ ಶಿಕ್ಷಣ ಧೋರಣೆಯ ಹೆಸರಿನಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಿ ಸ್ವಲ್ಪವಾದರೂ ಉಳಿದಿರುವ ವೈಜ್ಞಾನಿಕ ಮತ್ತು ಪ್ರಜಾಸತ್ತಾತ್ಮಕ ಅಂಶಗಳನ್ನೂ ಬುಡಮೇಲು ಮಾಡುವ ಒಂದು ಪ್ರಯತ್ನ ನಡೆದಿದೆ.** ಶಿಕ್ಷಣ ವ್ಯವಸ್ಥೆಯನ್ನು, ಅದರಲ್ಲೂ ಉನ್ನತ ಶಿಕ್ಷಣ ಮತ್ತು ಸಂಶೋಧನೆಯನ್ನು ವ್ಯವಸ್ಥಿತವಾಗಿ ಕೋಮುಗ್ರಸ್ತಗೊಳಿಸುವ ಪ್ರಯತ್ನವಿದು ಎಂಬುದು ಸ್ಪಷ್ಟ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಶಿಕ್ಷಣದ ಮೇಲಿನ ಈ ಕೋಮುವಾದಿ ಆಕ್ರಮಣವನ್ನು ಪ್ರತಿರೋಧಿಸಲು ಪಕ್ಷ ಒಂದು ದೊಡ್ಡ ಆಂದೋಲನವನ್ನು ಶಿಕ್ಷಣವೇತ್ತರು ಹಾಗೂ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಸಂಘಟನೆಗಳೊಂದಿಗೆ ಸಮಾಲೋಚಿಸಿ ಆರಂಭಿಸಲಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಪಶ್ಚಿಮ ಬಂಗಾಲದಲ್ಲಿ ಪ್ರಜಾಪ್ರಭುತ್ವದ ಕೊಲೆಯ ವಿರುದ್ಧ ದೇಶಾದ್ಯಂತ ಪ್ರತಿಭಟನಾ ಕಾರ್ಯಾಚರಣೆಗಳು

ಪಶ್ಚಿಮ ಬಂಗಾಲದಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಮೇಲೆ ದಾಳಿಗಳು ಮುಂದುವರೆಯುತ್ತಿರುವ ಬಗ್ಗೆ ಪೊಲಿಟ್‌ಬ್ಯುರೊ ಗಂಭೀರ ಆತಂಕ ವ್ಯಕ್ತಪಡಿಸಿದೆ. ರಾಜ್ಯದಲ್ಲಿ ಚುನಾವಣೆಯ ಕೊನೆಯ ಹಂತ ಮುಗಿದ ಮೇ 19ರಿಂದ ಜುಲೈ29ರ ನಡುವೆ ಪಕ್ಷದ 19 ಸಂಗಾತಿಗಳ ಹತ್ಯೆಯಾಗಿದೆ, ಇದಕ್ಕೆ ಮೊದಲು ಕಳೆದ ಐದು ವರ್ಷಗಳಲ್ಲಿ ತೃಣಮೂಲ ಕಾಂಗ್ರೆಸಿನ ಸಶಸ್ತ್ರ ದಾಳಿಗಳಿಗೆ 176 ಜೀವಗಳು ಬಲಿಯಾಗಿವೆ. 60ಸಾವಿರಕ್ಕೂ ಹೆಚ್ಚು ಪಕ್ಷದ ಸದಸ್ಯರು ಮತ್ತು ಹಿತೈಷಿಗಳ ಕುಟುಂಬಗಳು ತಮ್ಮ ಹಳ್ಳಿಗಳಿಂದ ಮನೆ–ಮಾರು ಬಿಟ್ಟು ಹೋಗುವಂತಾಗಿದೆ. ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳ ಕಚೇರಿಗಳನ್ನು ಧ್ವಂಸ ಮಾಡಲಾಗಿದೆ. ಮಹಿಳೆಯರಿಗೆ ಕಿರುಕುಳಗಳನ್ನು ಕೊಡಲಾಗುತ್ತಿದೆ, ಲೈಂಗಿಕ ಹಲ್ಲೆಗಳಿಗೂ ಗುರಿ ಮಾಡಲಾಗುತ್ತಿದೆ. ಬೆದರಿಸಿ ಅಪಾರ ಮೊತ್ತಗಳ ಹಣವನ್ನು ಕಿತ್ತುಕೊಳ್ಳಲಾಗುತ್ತಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಕೇಂದ್ರ ಸಮಿತಿ ಕಳೆದ ತನ್ನ ಸಭೆಯಲ್ಲಿ ನೀಡಿದ ಕರೆಗೆ ಓಗೊಟ್ಟು ಪಶ್ಚಿಮ ಬಂಗಾಲದಲ್ಲಿ ಪ್ರಜಾಪ್ರಭುತ್ವದ ಕೊಲೆಯ ವಿರುದ್ಧ ಅಗಸ್ಟ್ ತಿಂಗಳ ಮೊದಲ ವಾರದಲ್ಲಿ ದೇಶಾದ್ಯಂತ ಪ್ರತಿಭಟನಾ ಕಾರ್ಯಾಚರಣೆಗಳು ನಡೆಯುತ್ತಿವೆ–ರ‍್ಯಾಲಿಗಳನ್ನು, ಧರಣಿಗಳನ್ನು ನಡೆಸಲಾಗುತ್ತಿದೆ. ಈ ಕಾರ್ಯಕ್ರಮಗಳಲ್ಲಿ ಪಶ್ಚಿಮ ಬಂಗಾಲದ ವಿವಿಧ ಮುಖಂಡರು ಭಾಗವಹಿಸುತ್ತಿದ್ದಾರೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಪ್ಲೀನಂ ನಿರ್ಧಾರಗಳ ಜಾರಿ

ಸಿಪಿಐ(ಎಂ)ನ ಸಂಘಟನೆ ಕುರಿತಾದ ಪ್ಲೀನಂ ಪಕ್ಷದ ಸ್ವತಂತ್ರ ಶಕ್ತಿ ಮತ್ತು ಅದರ ಮಧ್ಯಪ್ರವೇಶದ ಸಾಮರ್ಥ್ಯವನ್ನು ಹೆಚ್ಚಸಲು ಸಂಗಟನೆಯನ್ನು ಬಲಪಡಿಸಲಿಕ್ಕಾಗಿ ಹಲವು ನಿರ್ಧಾರಗಳನ್ನು ಮಾಡಿದೆ. ಪ್ರತಿಯೊಂದು ರಾಜ್ಯದ ನಿರ್ದಿಷ್ಟ ಸನ್ನಿವೇಶಗಳಲ್ಲಿ ಇವುಗಳ ಚರ್ಚೆ ಮತ್ತು ಜಾರಿ ಆರಂಭವಾಗಿದ್ದು, ಇತ್ತೀಚೆಗೆ ಚುನಾವಣೆಗಳು ನಡೆದ ರಾಜ್ಯಗಳಲ್ಲಿ ಇದನ್ನು ಆರಂಭಿಸಲಾಗಿರಲಿಲ್ಲ. ಪಕ್ಷದ ಕೇಂದ್ರ, ಪೊಲಿಟ್‌ಬ್ಯುರೊ ಮತ್ತು ಕೇಂದ್ರ ಸಮಿತಿ ಮಟ್ಟಗಳಲ್ಲಿ ಇವುಗಳ ಜಾರಿಯ ಬಗ್ಗೆ ಚರ್ಚೆ ನಡೆಸಿತು. ಸಪ್ಟಂಬರ್ 17ರಿಂದ 19ರ ವರೆಗೆ ನಡೆಯಲಿರುವ ಕೇಂದ್ರ ಸಮಿತಿಯ ಸಭೆಯಲ್ಲಿ ಇವುಗಳನ್ನು ಮಂಡಿಸಿ ಅದನ್ನುಸರಿಸಿ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಪೊಲಿಟ್‌ಬ್ಯುರೊ ಹೇಳಿದೆ.

---

aÀiÀvÉÀzÀgÉEzÀÀ

ಹಳೆಯ ರೀತಿಯಲ್ಲಿ ಕೆಳವರ್ಗಗಳು
ಬದುಕಲು ನಿರಾಕರಿಸಿದಾಗ ಮತ್ತು
ಮೇಲು ವರ್ಗಗಳಿಗೆ ಹಳೆಯ ರೀತಿಯಲ್ಲಿ
ಮುಂದುವರೆಯಲು ಸಾಧ್ಯವಾಗದಿದ್ದಾಗ
ಮಾತ್ರ ಕ್ರಾಂತಿ ಸಫಲವಾಗುತ್ತದೆ.. ...
ಬೇರೆ ಮಾತುಗಳಲ್ಲಿ ಹೇಳುವುದಾದರೆ
ಕ್ರಾಂತಿ ದೇಶವ್ಯಾಪಿ ಬಿಕ್ಕಟ್ಟು ಇಲ್ಲದೆ
ಸಾಧ್ಯವಿಲ್ಲ.

– ವಿ.ಐ. ಲೆನಿನ್



ಶಿಕ್ಷಣ ನೀಡುವ ಹೆಸರಲ್ಲಿ 'ಹಿಂದುತ್ವ' ದೀಕ್ಷೆಗಾಗಿ 31 ಬುಡಕಟ್ಟು ಬಾಲಕಿಯರ 'ಸಾಗಣೆ'

ಸಂಘಿಗಳ ವಿರುದ್ಧ ಕಾನೂನುಕ್ರಮ ಕೈಗೊಳ್ಳಲು ಎಐಡಿಡಬ್ಲ್ಯುಎಆಗ್ರಹ

ಅಸ್ಸಾಂನ ಕೋಕ್ರಾಜಾರ್ ಜಿಲ್ಲೆಯ ಬೋಡೋ ಮತ್ತು ಸಂತಾಲ್ ಬುಡಕಟ್ಟುಗಳಿಗೆ ಸೇರಿದ 31 ಬಾಲಕಿಯರನ್ನು ಶಿಕ್ಷಣದ ಹೆಸರಿನಲ್ಲಿ ಹಿಂದುತ್ವದ ದೀಕ್ಷೆ ಕೊಡಲು ಪಂಜಾಬ್ ಮತ್ತು ಗುಜರಾತಿನ ಆರೆಸ್ಸೆಸ್ ಶಿಬಿರಗಳಿಗೆ ಸಾಗಿಸಿರುವ ಸುದ್ದಿ ಕಳೆದ ವಾರ ಮಾಧ್ಯಮಗಳಲ್ಲಿ ಪ್ರಕಟವಾಗಿತ್ತು. ಈ ಬಗ್ಗೆ ಆಘಾತ ವ್ಯಕ್ತಪಡಿಸಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಅದನ್ನು ಬಲವಾಗಿ ಪ್ರತಿಭಟಿಸಿದೆ. ಇದು ಮಕ್ಕಳ ಕಳ್ಳ ಸಾಗಣೆಯನ್ನು ನಿಷೇಧಿಸುವ ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಕಾನೂನುಗಳನ್ನು ಉಲ್ಲಂಘಿಸಿದ ಘಟನೆ ಎಂದು ಅದು ಹೇಳಿದೆ.

ದಿಲ್ಲಿ ಕ್ರೈಮ್ ಬ್ರಾಂಚಿನ ಮಾನವ ಕಳ್ಳಸಾಗಣೆ–ವಿರೋಧಿ ಘಟಕದ ಮುಂದೆ ಚೈಲ್ಡ್‌ಲೈನ್ ಇಂಡಿಯಾ ಫೌಂಡೇಶನ್ ಸಲ್ಲಿಸಿದ ದೂರಿನಿಂದ ಇದು ಬೆಳಕಿಗೆ ಬಂದಿದೆ. 8ರಿಂದ 14 ವರ್ಷ ವಯಸ್ಸಿನ ಈ ಬಾಲಕಿಯರನ್ನು ಸಾಗಿಸಿದ ಒಂದು ವಾರದ ನಂತರ ಜೂನ್ 16ರಂದು ಅಸ್ಸಾಂ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣೆಯ ಆಯೋಗ ಅಸ್ಸಾಂ ಸಿಐಡಿಗೆ ಈ ಕುರಿತು ಪತ್ರ ಬರೆಯಿತು, ಅದರ ಪ್ರತಿಯನ್ನು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಕಳಿಸಿತು ಎಂದು 'ಔಟ್‌ಲುಕ್' ಪತ್ರಿಕೆ ವರದಿ ಮಾಡಿದೆ.

ಇದು ಕಾನೂನಿಗೆ ವಿರುದ್ಧವಾದ ಕ್ರಮವಾಗಿದ್ದು 'ಮಕ್ಕಳ ಕಳ್ಳ ಸಾಗಣೆ'ಯಾಗಿ ಬಿಡುತ್ತದೆ ಎಂದು ಈ ಪತ್ರದಲ್ಲಿ ಹೇಳಲಾಗಿತ್ತು. ಆದ್ದರಿಂದ ಈ ಬಗ್ಗೆ ಸರಿಯಾದ ತನಿಖೆ ನಡೆಸಿ ಆ 31 ಮಕ್ಕಳನ್ನು ಅವರ ಊರುಗಳಿಗೆ ವಾಪಾಸು ಕಳಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಅದು ಪೋಲೀಸರಿಗೆ ವಿನಂತಿ ಮಾಡಿತ್ತು, ಈ ಬಗ್ಗೆ ಅಸ್ಸಾಂ ಆಯೋಗಕ್ಕೆ ಐದು ದಿನಗಳೊಳಗೆ ವರದಿ ಕೊಡಬೇಕು ಎಂದೂ ಹೇಳಲಾಗಿತ್ತು.

ಆದರೆ ಬಿಜೆಪಿ ಆಳ್ವಿಕೆಯ ಕೇಂದ್ರ ಸರಕಾರದ ಉಸ್ತುವಾರಿಯಲ್ಲಿರುವ ರಾಷ್ಟ್ರೀಯ ಆಯೋಗ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ ಎಂದು ಔಟ್‌ಲುಕ್ ವರದಿ ಹೇಳಿದೆ. ಈ ಮಕ್ಕಳು ಎಲ್ಲಿದ್ದಾರೆಂದು ಅವರ ಪಾಲಕರಿಗೂ ತಿಳಿಸಿಲ್ಲ ಎಂದು ಅದು ಹೇಳಿದೆ.

ಅಸ್ಸಾಂ, ಪಂಜಾಬ್ ಮತ್ತು ಗುಜರಾತಿನ ಸಂಘ ಪರಿವಾರದವರು ಈ ಮಕ್ಕಳ ಕಾನೂನುಬಾಹಿರ ಸಾಗಣೆಯನ್ನು ನಡೆಸಿದ್ದು ಅವರನ್ನು ಶಿಕ್ಷಿಸಬೇಕು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ.

ಜುಲೈ 30ರಂದು ಹಲವು ಮಹಿಳಾ ಸಂಘಟನೆಗಳ ಕಾರ್ಯಕರ್ತೆಯರು ದಿಲ್ಲಿಯಲ್ಲಿ ಆರೆಸ್ಸೆಸ್ ಕೇಂದ್ರ ಕಚೇರಿಯೆದುರು ಪ್ರತಿಭಟನೆ ನಡೆಸಿ ಬಂಧನಕ್ಕೊಳಗಾದರು, ಸರಕಾರ ದೇಶದ ಕಾನೂನಿನ ಈ ಘೋರ ಉಲ್ಲಂಘನೆಯನ್ನು ಗಮನಕ್ಕೆ ತಗೊಂಡು ಅಪರಾಧಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಮತ್ತು ಆ ಬಾಲಕಿಯರನ್ನು ಅವರವರ ಕುಟುಂಬಗಳಿಗೆ ಒಪ್ಪಿಸಬೇಕು ಹಾಗೂ ಇಂತಹ ದುಷ್ಟ ಚಟುವಟಿಕೆಗಳು ಮತ್ತೆ ನಡೆಯದಂತೆ ಕ್ರಮ ವಹಿಸಬೇಕು ಎಂದು ಪ್ರದರ್ಶನಕಾರರು ಆಗ್ರಹಿಸಿದ್ದಾರೆ.

ಆಗಸ್ಟ್ 3 ರಂದು ಸಿಪಿಐ(ಎಂ) ಸಂಸತ್ ಸದಸ್ಯೆ ಝುರನಾ ದಾಸದದ ಬೈದ್ಯ ಈ ಪ್ರಶ್ನೆಯನ್ನು ರಾಜ್ಯಸಭೆಯಲ್ಲಿಯೂ ಎತ್ತಿದರು.



ಪಾಸಾಗಿದ್ದು ಜಿ.ಎಸ್.ಟಿ. ಅಲ್ಲ...!

ಸಂಪಾದಕೀಯ

ಕಾರ್ಪೋರೇಟ್ ಮಾಧ್ಯಮಗಳು ರಾಜ್ಯಸಭೆಯಲ್ಲಿ ಈ ವಾರ 'ದೀರ್ಘ ಕಾಲದಿಂದ ನೆನೆಗುದಿಗೆ ಬಿದ್ದಿದ್ದ ಪ್ರಮುಖ ಸುಧಾರಣೆ' ಜಿ.ಎಸ್.ಟಿ.(ಸರಕು ಮತ್ತು ಸೇವೆಗಳ ತೆರಿಗೆ) ಮಸೂದೆ ಪಾಸಾಯಿತು ಎಂದು ಸಂಭ್ರಮಿಸಿದವು. 'ಒಂದು ದೇಶ ಒಂದು ತೆರಿಗೆ' ಜಾರಿಯಾದ ಈ ದಿನ ಚಾರಿತ್ರಿಕ ಘಟನೆ ಎಂದವು. ಜಿ.ಎಸ್.ಟಿ.ಯಿಂದ ಜಿಡಿಪಿ ಜಾಸ್ತಿಯಾಗುತ್ತದೆ, ಸರಕುಗಳ ಬೆಲೆ ಕಡಿಮೆಯಾಗುತ್ತವೆ ಎಂದೆಲ್ಲಾ ಪ್ರಚಾರ ಮಾಡಿದವು. 'ಇದು ಭಾರತದ ಫೆಡರಲ್ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ವಿಜಯ' ಎಂಬ ಹಣಕಾಸು ಮಂತ್ರಿಗಳ ಹೇಳಿಕೆಯನ್ನು ನೂರು ಬಾರಿ ತೋರಿಸಿದ್ದೇ ತೋರಿಸಿದ್ದು. ಇವೆಲ್ಲಾ ನಿಜವಲ್ಲ. ಮಾತ್ರವಲ್ಲ, ಮೊದಲನೇಯದಾಗಿ ರಾಜ್ಯಸಭೆ ಪಾಸು ಮಾಡಿದ್ದು ಜಿ.ಎಸ್.ಟಿ. ಮಸೂದೆಯೇ ಅಲ್ಲ! ಕೇಂದ್ರ ಸರಕಾರ ಜಿ.ಎಸ್.ಟಿ. ಮಸೂದೆ ತರಲು ಅಗತ್ಯವಾದ ಸಂವಿಧಾನ ತಿದ್ದುಪಡಿ ಮಾತ್ರ! ಈ ಸರಳ ಸತ್ಯವನ್ನೂ ಯಾವ ಮಾಧ್ಯಮವೂ ಹೇಳಲಿಲ್ಲ. ಈಗ ಇರುವಂತೆ ಸಂವಿಧಾನದ ಪ್ರಕಾರ ಸರಕು ಮತ್ತು ಸೇವೆಗಳ ತೆರಿಗೆ ಬಗ್ಗೆ ಕೇಂದ್ರೀಯ ಕಾನೂನು ಮಾಡುವ ಅಧಿಕಾರ ಕೇಂದ್ರ ಸರಕಾರಕ್ಕೆ ಇಲ್ಲ. ಆಗಸ್ಟ್ 3ರಂದು ರಾಜ್ಯಸಭೆ ಈ ಅಧಿಕಾರವನ್ನು ಕೇಂದ್ರ ಸರಕಾರಕ್ಕೆ ಕೊಡುವ ಸಂವಿಧಾನದ ತಿದ್ದುಪಡಿ ಮಸೂದೆಯನ್ನಷ್ಟೇ ಪಾಸು ಮಾಡಿದ್ದು.

ಲೋಕಸಭೆ ಹಿಂದೆ ಸಂವಿಧಾನ ತಿದ್ದುಪಡಿ ಮಸೂದೆಯೊಂದನ್ನು ಪಾಸು ಮಾಡಿ ಅದನ್ನು ರಾಜ್ಯಸಭೆಗೆ ಕಳಿಸಿಕೊಟ್ಟಿತ್ತು. ದೇಶದ ಫೆಡರಲ್ ಸ್ವರೂಪ ಮತ್ತು ರಾಜ್ಯಗಳ ಅಧಿಕಾರ ಕಾಪಾಡಿಕೊಳ್ಳಲು ಈ ಸಂವಿಧಾನ ತಿದ್ದುಪಡಿ ಮಸೂದೆಯಲ್ಲಿ ಹಲವು ಬದಲಾವಣೆಗಳು ಅಗತ್ಯ ಎಂದು ಮನಗಂಡ ರಾಜ್ಯಸಭೆ ಅದಕ್ಕಾಗಿ ಸೆಲೆಕ್ಟ್ ಸಮಿತಿಯೊಂದನ್ನು ರಚಿಸಿತು. ಸೆಲೆಕ್ಟ್ ಸಮಿತಿ ಸಂವಿಧಾನ ತಿದ್ದುಪಡಿ ಮಸೂದೆಗೆ ಹಲವು ತಿದ್ದುಪಡಿಗಳನ್ನು ಸೂಚಿಸಿತು. ಯಾವುದೇ ತಿದ್ದುಪಡಿಗಳಿಲ್ಲದೆ ಹಾಗೇನೇ ರಾಜ್ಯಸಭೆಯಲ್ಲಿ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಪಾಸು ಮಾಡಲು ಸರಕಾರ ಪ್ರಯತ್ನಿಸಿತು. ಅದು ಸಾಧ್ಯವಾಗದಾಗ ಹೆಚ್ಚಿನ ತಿದ್ದುಪಡಿಗಳನ್ನು ಸರಕಾರ ಒಪ್ಪಿಕೊಂಡು ಈ ತಿದ್ದುಪಡಿಗಳೊಂದಿಗೆ ಮಸೂದೆಯನ್ನು ಮಂಡಿಸಿತು. ಆಗಸ್ಟ್ 3ರಂದು ಈ ಮಸೂದೆಯಷ್ಟೇ ಅಂಗೀಕಾರವಾದದ್ದು. ಸೆಲೆಕ್ಟ್ ಸಮಿತಿಯಲ್ಲಿದ್ದ ಸಿಪಿಐ(ಎಂ) ಪ್ರತಿನಿಧಿ ಅದರ ಬಹುಮತದ ವರದಿಗೆ ಭಿನ್ನಮತದ ಟಿಪ್ಪಣಿ ಕೊಟ್ಟು ಇನ್ನಷ್ಟು ಬದಲಾವಣೆಗಳನ್ನು ಸೂಚಿಸಿದ್ದರು.

ಭಾರತದ ಆಳುವ ಬಂಡವಾಳಶಾಹಿ ವರ್ಗ ತನ್ನ ಲಾಭ ಗರಿಷ್ಠಗೊಳಿಸಲು ಒಂದು ಪೂರ್ಣ ಸಮಗ್ರೀಕೃತ ಮಾರುಕಟ್ಟೆ ಮತ್ತು ಕೇಂದ್ರೀಕೃತ ಸರಳೀಕೃತ ತೆರಿಗೆ ವ್ಯವಸ್ಥೆ ಬಯಸಿತ್ತು. 1991ರಲ್ಲಿ ನವ-ಉದಾರವಾದಿ ವ್ಯವಸ್ಥೆಗೆ ಬದಲಾವಣೆಗಳೊಂದಿಗೆ ಇಂತಹ ವ್ಯವಸ್ಥೆಗೆ ಕೂಗು ಜೋರಾಗುತ್ತಾ ಹೋಯಿತು. ಇದರ ಫಲವಾಗಿ ತೆರಿಗೆ ಹಾಕುವ ರಾಜ್ಯಗಳ ಅಧಿಕಾರದ ಮೇಲೆ ಮೊದಲ ದಾಳಿಯಾಗಿ ವ್ಯಾಟ್ ಜಾರಿಗೆ ಬಂತು. ಇದನ್ನೇ ವಿಸ್ತರಿಸಿ ಎಲ್ಲಾ ಸರಕು ಮತ್ತು ಸೇವೆಗಳ ತೆರಿಗೆಗಳನ್ನು ಕೇಂದ್ರೀಕೃತ ವ್ಯವಸ್ಥೆಯೊಳಗೆ ತರುವ ಜಿ.ಎಸ್.ಟಿ.ಗೆ ಒತ್ತು ಆರಂಭವಾಯಿತು. ಕಳೆದ ಎರಡು ದಶಕಗಳಲ್ಲಿ ರಾಜ್ಯ ಹಣಕಾಸು ಮಂತ್ರಿಗಳ ಸಮಿತಿ ಇಂತಹ ವ್ಯವಸ್ಥೆ ಬಗ್ಗೆ ಚರ್ಚಿಸುತ್ತಿದೆ. ಇನ್ನೂ ಜಿ.ಎಸ್.ಟಿ. ಕರಡು ಮಸೂದೆ ಸಹ ಸಿದ್ಧವಾಗಿಲ್ಲ. ಇಂತಹ ಮಸೂದೆಯಲ್ಲಿ ಬರಬಹುದಾದ ಪ್ರಮುಖ ವಿವಾದಾಸ್ಪದವಾದ ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತಿದೆ, ಅಷ್ಟೇ.

ಜಿ.ಎಸ್.ಟಿ. ವ್ಯವಸ್ಥೆ ತರಲು ಇನ್ನೂ ಹಲವು ಹಂತಗಳನ್ನು ಹಾದು ಹೋಗಬೇಕು. ಈಗ ರಾಜ್ಯಸಭೆ ಪಾಸು ಮಾಡಿದ ತಿದ್ದುಪಡಿಗೊಂಡ ಸಂವಿಧಾನ ತಿದ್ದುಪಡಿ ಮಸೂದೆ ಅಧ್ಯಕ್ಷರ ಮೂಲಕ ಲೋಕಸಭೆಗೆ ವಾಪಸು ಹೋಗಬೇಕು. ಅದನ್ನು ಲೋಕಸಭೆ ಅಂಗೀಕರಿಸಬೇಕು. ಅದರ ನಂತರ ಅಧ್ಯಕ್ಷರ ಮೂಲಕ ಎಲ್ಲಾ ವಿಧಾನಸಭೆಗಳಿಗೆ ಹೋಗಬೇಕು. ಕನಿಷ್ಠ ಅರ್ಧದಷ್ಟು ರಾಜ್ಯ ವಿಧಾನಸಭೆಗಳು ಅದನ್ನು ಮೂರನೇ ಎರಡರಷ್ಟು ಬಹುಮತದೊಂದಿಗೆ ಮಂಜೂರು ಮಾಡಬೇಕು. ಈ ಪ್ರಕ್ರಿಯೆ ಮುಗಿದ ಮೇಲೆ ಅಧ್ಯಕ್ಷರು ಈ ಸಂವಿಧಾನ ತಿದ್ದುಪಡಿಯನ್ನು ಅಧಿಕೃತವಾಗಿ ಪ್ರಕಟಿಸುತ್ತಾರೆ. ಅದರ ನಂತರವೇ ಕೇಂದ್ರ ಸರಕಾರ ಜಿ.ಎಸ್.ಟಿ. ಮಸೂದೆಯನ್ನು ಪಾರ್ಲಿಮೆಂಟಿನ ಮುಂದೆ ಮಂಡಿಸಲು ಸಾಧ್ಯ.

ಮುಂದೆ ಬರಲಿರುವ ಜಿ.ಎಸ್.ಟಿ. ಮಸೂದೆಯಲ್ಲಿ ಏಳಲಿರುವ ಹಲವು ವಿಷಯಗಳ ಬಗ್ಗೆ ಸಿಪಿಐ(ಎಂ) ಮತ್ತು ಎಡ ಪಕ್ಷಗಳು, ಪ್ರಗತಿಪರ ಜನ-ಪರ ಹಾಗೂ ಸಾಮೂಹಿಕ ಸಂಘಟನೆಗಳು ಜಾಗರೂಕರಾಗಿರಬೇಕು. ಇವುಗಳಲ್ಲಿ ಜನತೆಯ ಹಿತಾಸಕ್ತಿಗಳನ್ನು ಕಾಪಾಡುವ ದೃಷ್ಟಿಯಿಂದ ಮತ್ತು ಅದು ಆಳುವ ಬಂಡವಾಳಶಾಹಿ ವರ್ಗದ ತೊತ್ತಾಗದಂತೆ ತಡೆಯಲು ಮೂರು ಪ್ರಮುಖವಾದ ವಿಷಯಗಳನ್ನು ಗಮನವಿಟ್ಟು ಪರಿಶೀಲಿಸಬೇಕಾಗಿದೆ. ಈ ಬಗ್ಗೆ ಪ್ರಚಾರ-ಪ್ರಕ್ಷೋಭೆ ನಡೆಸಿ ಸಾರ್ವಜನಿಕ ಚರ್ಚೆಯಾಗಿ ಜನ-ಪರ ನಿರ್ಧಾರ ಕೈಗೊಳ್ಳುವಂತೆ ನೋಡಿಕೊಳ್ಳಬೇಕಾಗಿದೆ.

ಮೊದಲನೇಯದು, ಜನತೆಯ ಕಲ್ಯಾಣ ಯೋಜನೆಗಳನ್ನು ಜಾರಿ ಮಾಡಲು ಅಗತ್ಯವಾದ ಸಂಪನ್ಮೂಲ ಸಂಗ್ರಹಿಸಲು ಬೇಕಾದ ತೆರಿಗೆ ಹಾಕುವ ರಾಜ್ಯ ಸರಕಾರಗಳ ಅಧಿಕಾರಕ್ಕೆ, ಕೇಂದ್ರೀಕರಣ ಏಕೀಕರಣ ಸರಳೀಕರಣಗಳ ಹೆಸರಲ್ಲಿ ಕಡಿವಾಣ ಬೀಳದಂತೆ ಎಚ್ಚರ ವಹಿಸಬೇಕಾಗಿದೆ. ವಿವಿಧ ಸರಕುಗಳ ಮತ್ತು ಸೇವೆಗಳಿಗೆ ಜನತೆಗೆ ಅವು ಜೀವನಾವಶ್ಯಕತೆಯೇ ಅಥವಾ ವಿಲಾಸಿ ಅಥವಾ ಹಾನಿಕಾರಕವೇ ಎಂಬುದ ಮೇಲೆ ಆಧರಿಸಿ ವಿವಿಧ ದರಗಳನ್ನು ವಿಧಿಸಲು ಅವಕಾಶ ಇರಬೇಕು. ಜೀವನಾವಶ್ಯಕ ಸರಕುಗಳಿಗೆ ಕಡಿಮೆ, ವಿಲಾಸಿ, ಹಾನಿಕಾರಕ ಸರಕು/ಸೇವೆಗಳ ಮೇಲೆ ಹೆಚ್ಚಿನ ದರ ತೆರಿಗೆ ವಿಧಿಸಲು ಅವಕಾಶ ಇರಬೇಕು. ಇತ್ತೀಚೆಗೆ ಕೇರಳದ ಎಲ್.ಡಿ.ಎಫ್. ಸರಕಾರ 'ಜಂಕ್ ಫುಡ್'ಗೆ ವಿಧಿಸಿದ ತೆರಿಗೆಯಂತಹ ತೆರಿಗೆ ವಿಧಿಸುವ ರಾಜ್ಯ ಸರಕಾರದ ಅಧಿಕಾರಗಳ ಮೇಲೆ ಜಿ.ಎಸ್.ಟಿ. ಕಡಿವಾಣ ಹಾಕಬಾರದು.

ಎರಡನೇಯದಾಗಿ ಜಿ.ಎಸ್.ಟಿ. ಮೂಲಕ ಪರೋಕ್ಷ ತೆರಿಗೆಗಳ ಹೊರೆ ಜನತೆಯ ಮೇಲೆ ಇನ್ನೂ ಹೆಚ್ಚಾಗದಂತೆ ನೋಡಿಕೊಳ್ಳಬೇಕು. ಎಲ್ಲಾ ಪರೋಕ್ಷ ತೆರಿಗೆಗಳು ಬಡವರ, ಸಾಮಾನ್ಯ ಜನತೆಯ ಮೇಲೆ ಹೆಚ್ಚಿನ ಹೊರೆ ಹೇರುತ್ತವೆ. ನೇರ ತೆರಿಗೆಗಳು ಶ್ರೀಮಂತರನ್ನು ಹೆಚ್ಚು ತಟ್ಟುತ್ತವೆ. ಈಗಾಗಲೇ ಭಾರತದಲ್ಲಿ ಸರಕಾರದ ಒಟ್ಟು ಸಂಪನ್ಮೂಲಗಳ ಶೇ. 62.3 ಪಾಲು ಪರೋಕ್ಷ ತೆರಿಗೆಗಳಿಂದ ಬರುತ್ತವೆ. ಕೇವಲ ಶೇ. 37.7 ನೇರ ತೆರಿಗೆಗಳಿಂದ ಬರುತ್ತದೆ. ಇದು ಮೂರನೇಯ ಜಗತ್ತಿನ ದೇಶಗಳಲ್ಲೇ ಅತಿ ಕಡಿಮೆ. ಇಂಡೋನೇಶ್ಯಾದಲ್ಲಿ ಶೇ. 55.8, ದಕ್ಷಿಣ ಆಫ್ರಿಕಾದಲ್ಲಿ ಶೇ. 57.5 ಪಾಲು ನೇರ ತೆರಿಗೆಗಳಿಂದ ಬರುತ್ತದೆ. ಭಾರತದಲ್ಲಿ ಜಿ.ಎಸ್.ಟಿ.ಯ ಹೆಸರಲ್ಲಿ ಇದು ಇನ್ನೂ ಕಡಿಮೆಯಾಗದಂತೆ ನೋಡಿಕೊಳ್ಳಬೇಕು. ಹೆಚ್ಚುತ್ತಿರುವ ಪರೋಕ್ಷ ತೆರಿಗೆಗಳು ಈಗಾಗಲೇ ಅಗಾಧವಾಗಿರುವ ಅಸಮಾನತೆಯನ್ನು ಇನ್ನಷ್ಟು ಹೆಚ್ಚಿಸುತ್ತವೆ.

ಮೂರನೇಯದಾಗಿ ಜಿ.ಎಸ್.ಟಿ. ವ್ಯವಸ್ಥೆಯಲ್ಲಿ ಬರಬಹುದಾದ ವಿವಾದ ಬಗೆಹರಿಸುವ ವ್ಯವಸ್ಥೆಯಲ್ಲೂ ಫೆಡರಲ್ ಸ್ವರೂಪ ಮತ್ತು ರಾಜ್ಯಗಳ ಅಧಿಕಾರ ಕಾಪಾಡಿಕೊಳ್ಳುವ ಬಗ್ಗೆ ಎಚ್ಚರವಹಿಸಬೇಕು.

ಸಾವನ್ನು ಸಂಭ್ರಮಿಸುವ ವಿಕೃತ ಮನಸ್ಸುಗಳು

ಎಸ್.ವೈ. ಗುರುಶಾಂತ್

'ಸಾವಿಲ್ಲದ ಮನೆಯ ಸಾಸಿವೆ ತಾ' ಎಂದು ಗೌತಮ ಬುದ್ಧ ಹೇಳಿದ್ದು ಜಗದೊಳಗೆ ಪ್ರತಿ ಜೀವಿಗೆ ಸಾವೆಂಬ ಒಂದು ಹಂತದ ಅಂತ್ಯ ಅನಿವಾರ್ಯ ಎಂದು ಮನವರಿಕೆ ಮಾಡಲು. ಹುಟ್ಟಿದ ಪ್ರತಿಯೊಬ್ಬರೂ ಸಾಯಲೇ ಬೇಕೆಂಬ ಸತ್ಯವನ್ನು ಯಾರೂ ನಿರಾಕರಿಸಲಾರರಾದರೂ ಸಾವನ್ನು ಅಷ್ಟು ಸಂತೋಷದಿಂದ ಸ್ವಾಗತಿಸುವವರು ಇಲ್ಲವೆಂದೇ ಹೇಳಬೇಕು. ಈಗಲೂ ಅನೇಕ ವೈಜ್ಞಾನಿಕ ಅವಿಷ್ಕಾರಗಳಿಂದ ಸಾವಿನ ಅವಧಿಯನ್ನು ಮುಂದೂಡಬಹುದೇ ಹೊರತು ಸಾವೇ ಇಲ್ಲದ ಸಂಗತಿ ಅಸಾಧ್ಯ. ಹೀಗಿದ್ದೂ ಸಾವು ಜಯಿಸುವ ಹುಚ್ಚು ಸಾಹಸಕ್ಕೆ ಕೊನೆಯಿಲ್ಲ. ಅಂತಹ ಹಂಬಲ, ಪ್ರಯತ್ನಗಳು ನಿಸರ್ಗ ವಿರೋಧಿ ಎಂಬುದರಲ್ಲೂ ಅನುಮಾನವಿಲ್ಲ.

ಸಾವು ಸಹಜವಾಗಿದ್ದರೂ ಆತ್ಮೀಯರ ಅಗಲಿಕೆ ದುಃಖದಾಯಕ. ಅದರಲ್ಲೂ ಅಕಾಲಿಕ, ಅನಿರೀಕ್ಷಿತವಾಗಿದ್ದರೆ ಭರಿಸಲಸಾಧ್ಯ. ತನ್ನ ಎಳೆಯ ಮುದ್ದಿನ ಕಂದ ಲೋಹಿತಾಶ್ವನನ್ನು ಕಳೆದುಕೊಂಡ ಚಂದ್ರಮತಿ ಪ್ರಲಾಪಿಸುವುದು 'ಹಡೆದೊಡಲು ಹುಡಿಯಾಯ್ತು ಮಗನೇ..' ಎಂದು. ಇಂತಹ ಸಾವಿನ ನೋವುಗಳು ತಾತ್ಕಾಲಿಕವೇನಲ್ಲ. ಅದಕ್ಕೆ ಅಲ್ಲವೇ 'ಪುತ್ರ ಶೋಕಂ ನಿರಂತರಂ' ಎನ್ನುವುದು.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹಿರಿಯ ಮಗ ರಾಕೇಶ್ ಸಿದ್ದರಾಮಯ್ಯ ಸಂಗೀತ ಉತ್ಸವಕ್ಕೆಂದು ಬೆಲ್ಜಿಯಂ ದೇಶಕ್ಕೆ ಹೋಗಿದ್ದಾಗ ಬಹು ಅಂಗ ವೈಫಲ್ಯದಿಂದ ಸಾವನ್ನಪ್ಪಿದರು. ಬಹುತೇಕ ತೆರೆ ಮರೆಯಲ್ಲಿದ್ದ 39 ವರುಷಗಳ ಈ ಕಾಂಗ್ರೆಸ್ ಯುವ ನಾಯಕ ತಂದೆಯ ಮತಕ್ಷೇತ್ರದಲ್ಲಿ ಕ್ರಿಯಾಶೀಲವಾಗಿದ್ದ. ಆತ ಅನಾರೋಗ್ಯಗೊಂಡು ಆಸ್ಪತ್ರೆ ಸೇರಿದಾಗ, ಬಳಿಕ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ನಮ್ಮ ರಾಜ್ಯದ ಬಹುತೇಕ ಪತ್ರಿಕೆ, ವಿದ್ಯುನ್ಮಾನ ಚಾನೆಲ್ ಗಳು ವಿಶೇಷವಾಗಿ ಶೋಕದ ಸುದ್ದಿ, ವರದಿಗಳನ್ನು ನಿರಂತರ ಭಿತ್ತರಿಸಿದವು.

'ಮಗನ ಸಾವಿನ ಭರಿಸಲಾಗದ ದುಃಖದ ಸಂದರ್ಭದಲ್ಲಿ ಸಾಂತ್ವನ ಹೇಳಿ ಬೆನ್ನಿಗೆ ನಿಂತ ಎಲ್ಲರಿಗೂ ಕೃತಜ್ಞತೆಗಳು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೇಳಿದ್ದಾರೆ. ನಿಜ, ಅವರ ಕುಟುಂಬ, ಸಂಬಂಧಿಕರು, ಗೆಳೆಯರು, ಹಿತೈಷಿಗಳು ಮಾತ್ರವಲ್ಲ ವಿಷಯ ತಿಳಿದ ಬಳಿಕ ಆ ಕುಟುಂಬಕ್ಕೆ ಮಿಡಿಯದವರಿಲ್ಲ. ನೆರವಿಗೆ ಧಾವಿಸುವ ಈ ಮಿಡಿತವೆಂಬುದು ಮಾನವ ಸಹಜ ಸ್ಪಂದನ, ನಾಗರೀಕ ಸಂಸ್ಕೃತಿಯ ರೂಢೀಗತ ಸನ್ನಡತೆಯ ಪ್ರತೀಕವೂ ಕೂಡ.

ಅವರು ಶತ್ರುವೇ ಆಗಿರಬಹುದು, ಅವರೊಂದಿಗೆ ಎಂತಹ ಹಗೆತನವೂ ಇರಬಹುದು ಸಾವಿನಂತಹ ಸಂದರ್ಭದಲ್ಲಿ ಸಂಭ್ರಮಿಸುವುದು ನಮ್ಮ ಜನರ ಸಂಸ್ಕೃತಿ ಅಲ್ಲ. ಎಷ್ಟೋ ಭಿನ್ನಾಭಿಪ್ರಾಯಗಳು, ತಾಮಸಗಳು ಇಂತಹ ಸಂದರ್ಭದಲ್ಲಿ ಮರೆಯಾಗಿ, ಬದಲಾದ ಸನ್ನಿವೇಶದಲ್ಲಿ ಮತ್ತೇ ಮಾನವೀಯ ಸಂಬಂಧಗಳು ಸುಧಾರಿಸುವುದು, ಬಲಗೊಳ್ಳುವುದು ಸಾಧ್ಯವಾದ ದೃಷ್ಟಾಂತಗಳು ಅಗಣಿತ. ಒಂದು ವೇಳೆ ಇಷ್ಟವಿಲ್ಲದಿದ್ದರೂ ಹಗೆತನದ ನೆಪದಲ್ಲಿ ಶೋಕತಪ್ತರಿಗೆ ಮತ್ತಷ್ಟೂ ನೋವು ಮಾಡುವ ಕೃತ್ಯಗಳನ್ನು ಮನುಷ್ಯರಾರೂ ಮಾಡ ಹೋಗುವುದಿಲ್ಲ. ಹಾಗೊಂದು ವೇಳೆ ಇದನ್ನು ಮೀರಿ ಸಾವಿನ ಸಂದರ್ಭವನ್ನು ಸಂಭ್ರಮಿಸಿ ಸೇಡು ತೀರಿಸಿಕೊಳ್ಳುತ್ತಿರುವ ಕೇಕೇ ಹಾಕಿದರೇ. .?

ಅಂತಹ ವಿಕೃತ, ಮನೋವಿಕಾರದ ಅಮಾನವೀಯ ವರ್ತನೆಗಳನ್ನು ಕೆಲವರು ರಾಕೇಶ್ ನ ಸಾವಿನ ಸಂದರ್ಭದಲ್ಲಿ ತೋರಿದ್ದು ಖಂಡನೀಯ ವಿಚಾರ. ರಾಜಕಾರಣದಲ್ಲಿ ಸಿದ್ದರಾಮಯ್ಯನವರೊಂದಿಗೆ ಭಿನ್ನಾಭಿಪ್ರಾಯ, ಕಡು ವಿರೋಧವೂ ಇರಬಹುದು. ಆದರೆ ಅವರ ಮಗನ ಸಾವಿನ ಸಂಧರ್ಭವನ್ನು ಸಂಭ್ರಮಿಸುವುದು ಅನಾಗರೀಕ ವರ್ತನೆ. ಇದಕ್ಕಾಗಿ ಅವರು ಬಳಸಿದ್ದು ಹೊಸ ಮಾಧ್ಯಮವಾಗಿರುವ ಸಾಮಾಜಿಕ ಜಾಲ ತಾಣವನ್ನು. ಅದೂ ನಮ್ಮ ಸಾಂಪ್ರದಾಯಿಕ ಮಾಧ್ಯಮಗಳಾದ ಪತ್ರಿಕೆ, ಟಿ.ವಿ ಯಂತಹವುಗಳು ಶೋಕದ ಸುದ್ದಿಗಳನ್ನು ಭಿತ್ತರಿಸುತ್ತಿರುವಾಗ ಅದಕ್ಕೆ ಎದುರಾಗಿ ಅಂತರ್ ಜಾಲವನ್ನು ತಮ್ಮ ವಿಕಾರಕ್ಕೆ ಬಳಸಿಕೊಂಡರು. ರಾಜ್ಯದ ಕಾಂಗ್ರೆಸ್ ಸರಕಾರ ಡಿ.ಕೆ.ರವಿ ಆತ್ಮಹತ್ಯೆಯ ಪ್ರಕರಣದಲ್ಲಿ ಅಥವಾ ಗಣಪತಿ ಮತ್ತಿತರ ಪ್ರಕರಣದಲ್ಲಿ ವಹಿಸಿದ ಕ್ರಮಗಳ ಬಗ್ಗೆ ಭಿನ್ನಾಭಿಪ್ರಾಯಗಳನ್ನು ಯಾರಿಗಾದರೂ ಇರಬಹುದು. ಅದಕ್ಕೆ ವಿರೋಧ ವ್ಯಕ್ತಪಡಿಸಲು ಹಲವು ನಾಗರೀಕ, ಪ್ರಜಾಪ್ರಭುತ್ವೀಯ ಮಾರ್ಗಗಳಿವೆ, ವಿಧಾನಗಳಿವೆ. ಅದನ್ನು ಬಿಟ್ಟು ಈ ಸಾವಿನ ಸಂದರ್ಭವನ್ನು ಬಳಸುವುದು ಎಂತಹ ಸಂಸ್ಕೃತಿಯನ್ನು ತೋರಿಸುತ್ತದೆ? ಫೇಸ್ ಬುಕ್, ಟ್ವಿಟರ್, ವೆಬ್ ಜಾಲದಲ್ಲಿ ಪ್ರಕಟನೆಗೊಂಡ ನಿಂದನಾತ್ಮಕ ಬರಹಗಳನ್ನು ಗಮನಿಸಿದರೆ ಈ ಸಾವಿಗೆ, ಸಿದ್ದರಾಮಯ್ಯನವರ ಸಾವಿಗೂ ಇಂತಹವರು ಕಾದು ಕುಳಿತಿದ್ದರೇನೋ ಎಂಬಂತೆ ಭಾಸವಾಗುತ್ತದೆ.

ಹಿಂದೆ ಇದೇ ಸಂತತಿ ಜ್ಞಾನಪೀಠ ಪುರಸ್ಕೃತ ಡಾ.

ಪುಟ 4 ಕ್ಕೆ

ಹಾವೇರಿ ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕಾಗಿ ರಾಷ್ಟ್ರೀಯ ಹೆದ್ದಾರಿ ತಡೆ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಹಾವೇರಿ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಅಗಸ್ಟ್ 4ರಂದು ವಿದ್ಯಾರ್ಥಿಗಳು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ, ಹೊಸಮನಿ ಸಿದ್ದಪ್ಪ ವೃತ್ತದಲ್ಲಿ ಅರ್ಧ ಗಂಟೆಗೂ ಹೆಚ್ಚು ಕಾಲ ರಾಷ್ಟ್ರಿಯ ಹೆದ್ದಾರಿ ತಡೆ ನಡೆಸಿ ಸರ್ಕಾರಿ-ಶಾಲಾ ಕಾಲೇಜುಗಳಿಗೆ ಮೂಲಭೂತ ಸೌಲಭ್ಯಗಲನ್ನು ಒದಗಿಸುವಂತೆ ಒತ್ತಾಯಿಸಿದರು. ನಗರದ ಮುನಿಸಿಪಲ್ ಕಾಲೇಜಿನಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆಯು ಜೆಪಿ ವೃತ್ತದ ಮೂಲಕ ಸಾಗಿ ಹೊಸಮನಿ ಸಿದ್ದಪ್ಪ ವೃತ್ತದಲ್ಲಿ ಸಮಾವೇಶಗೊಂಡು ಮಾನವ ಸರಪಳಿ ನಿರ್ಮಿಸಿ ರಸ್ತೆ ತಡೆ ನಡೆಸಿದರು. ನಂತರ ಬಂದ ತಹಶೀಲ್ದಾರ ಸಿ.ಎಸ್.ಬಂಗಿಯವರಿಗೆ ಮನವಿ ಪತ್ರ ನೀಡಿದರು.

ಈ ಸಂದರ್ಭದಲ್ಲಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷ ರೇಣುಕಾ ಕಹಾರ ಮತ್ತು ಕಾರ್ಯದರ್ಶಿ ಸುಭಾಸ ಎಂ, ಮಾತನಾಡಿದರು. ಪ್ರತಿಭಟನೆ ನಡೆಯುತ್ತಿದ್ದ ಹೊಸಮನಿ ಸಿದ್ದಪ್ಪ ವೃತ್ತದ ಬಳಿಯೇ ಜಿಲ್ಲಾ ಉಸ್ತುವಾರಿ ಸಚಿವರು ಕಾರ್‌ನ್ನು ತೆಗೆದು-ಕೊಂಡು ಹೋದರು ಕೂಡಾ ಪ್ರತಿಭಟನಾಕಾರರ ಸಮಸ್ಯೆಯನ್ನು ಆಲಿಸಲು ಸಚಿವರು ಬಾರದ್ದರಿಂದ ವಿದ್ಯಾರ್ಥಿಗಳು ಆಕ್ರೋಶಗೊಂಡು ಸಚಿವರಿಗೆ ಧಿಕ್ಕಾರ ಕೂಗಿದರು. ವಿದ್ಯಾರ್ಥಿಗಳನ್ನು ಬೀದಿಗಿಳಿಸಿ ತಮಾಷೆ ನೋಡುತ್ತಿದ್ದಾರೆ. ವಿದ್ಯಾರ್ಥಿಗಳ ಬೇಡಿಕೆಗಳನ್ನು ಈಡೇರಿಸಲು ಮುಂದಾಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಸಾವನ್ನು ಸಂಭ್ರಮಿಸುವ ವಿಕೃತ ಮನಸ್ಸುಗಳು....... ಪುಟ 3 ರಿಂದ

ಯು.ಆರ್. ಅನಂತಮೂರ್ತಿಯವರ ಸಾವಾದಾಗ, ಖ್ಯಾತ ಸಂಶೋಧಕ ಡಾ.ಎಂ.ಎಂ.ಕಲಬುರ್ಗಿಯವರ ಹತ್ಯೆಯಾಗಿದ್ದಾಗ ಪಟಾಕಿ ಸಿಡಿಸಿ ಸಂಭ್ರಮಿಸಿ ವಿಕೃತತೆಯನ್ನು ಖಾರಿಕೊಂಡಿದ್ದರು. ಈ ವರ್ತನೆಗಳು ಇಂದಿನವೇ ಮಾತ್ರವಲ್ಲ, ಅದಕ್ಕೆ ಇತಿಹಾಸವೇ ಇರುವುದು ಗೋಚರವಾಗುತ್ತದೆ. ಹಿಂದೆ ಭಾರತ ಸ್ವತಂತ್ರಗೊಂಡಾಗ 1947 ರಲ್ಲಿ ಹುಬ್ಬಳ್ಳಿ ಈದ್ಗಾ ಮೈದಾನದಲ್ಲಿ ಬಾಯಿ ಬಡಿದುಕೊಂಡು ಬಾವುಟ ಎಸೆದು ಶೋಕಾಚರಣೆ ಮಾಡಿದ್ದರು. ಮಹಾತ್ಮ ಗಾಂಧೀಜಿಯವರ ಹತ್ಯೆಯಾದಾಗ ಸಿಹಿ ಹಂಚಿ ಸಂಭ್ರಮಿಸಿದ್ದರು ಈ 'ರಾಷ್ಟ್ರಭಕ್ತ' ಸ್ವಯಂಸೇವಕರು. ಈಗಲೂ ಅದೇ ದುರ್ವರ್ತನೆಗಳನ್ನು ಹೊಸ ಪೀಳಿಗೆಗೂ ಧಾಟಿಸಿ ತರಬೇತಿ ನೀಡಿದ್ದಾರೆ. ನಮ್ಮ ನಾಡಿನ ಇಂತಹವರ ಜನ್ಮ- ಜಾತಕಗಳ ಜಾಡು ಹಿಡಿದರೆ ಭಾರತೀಯ ಸಂಸ್ಕೃತಿಯ ಗುತ್ತಿಗೆ ಹಿಡಿದವರೇ ಅಂತಹವರು ಎಂಬುದು ಗೋಚರಿಸುತ್ತದೆ. ಅಂದು ಕಲಬುರ್ಗಿಯವರ ಹತ್ಯೆಯನ್ನು ಸಂಭ್ರಮಿಸಿದ್ದವರಲ್ಲೊಬ್ಬನಾಗಿದ್ದ ಭುವಿತ್ ಶೆಟ್ಟಿ ಯೆಂಬಾತ ಇಂದು ಕ್ರಿಮಿನಲ್ ಪ್ರಕರಣದಲ್ಲಿ ಜೈಲು ಪಾಲಾಗಿರುವ ಸಂಘಪರಿವಾರಿ. ಒಂದೆಡೆ ಸುಸಂಸ್ಕೃತರನ್ನು ನಿರ್ಮಿಸುವುದೇ ತನ್ನ ಗುರಿ ಎಂದುಕೊಳ್ಳುವ ಸಂಘಪರಿವಾರ ತನ್ನ ಫ್ಯಾಶಿಸ್ಟ್ ಮಾದರಿ ಜಾರಿಯಲ್ಲಿ ಇಂತಹ ಪೀಳಿಗೆಯೊಂದನ್ನು ಸಿದ್ದಗೊಳಿಸಿದೆ. ನಮ್ಮ ನಾಗರೀಕ ಸಮಾಜದಲ್ಲಿ ಅಂತಹ ಮನೋ ವಿಕಾರಗಳನ್ನು, ಅದ-ಕ್ಕೆ ಸಮರ್ಥನೆಗಳನ್ನು ರೂಢಿಗೊಳಿಸುತ್ತಿದೆ. ಎಲ್ಲಾ ಪ್ರಕಾರದ ಮಾಧ್ಯಮಗಳನ್ನು ಬಳಸಿ ವಿರೋಧಿಗಳ ಮೇಲೆ, ಅವರ ವೈಚಾರಿಕತೆಯ ಮೇಲೆ ಧಾಳಿ ಮಾಡಲು ಅತ್ಯಂತ ಕ್ರೌರ್ಯ ಮನೋಭಾವದ ಸಾವಿರಾರು ಸ್ವಯಂಸೇವಕರನ್ನು ತೊಡಗಿಸಿದೆ. ಸಾಂಪ್ರದಾಯಿಕ ಮಾಧ್ಯಮಗಳಲ್ಲಿ ರಾಕೇಶ್ ಸಾವು ಶೋಕ ಸಂದೇಶವಾಗಿ ಭಿತ್ತರಗೊಳ್ಳುತ್ತಿದ್ದಂತೆ ಅದ-ಕ್ಕೆ ಎದುರಾಗಿ ಮುಕ್ತ ಅಭಿವ್ಯಕ್ತಿ ಸ್ವಾತಂತ್ರ್ಯವಿರುವ ಅಂತರ್ ಜಾಲದ ಮಾಧ್ಯಮವನ್ನು ಮನಸೋ ಇಚ್ಛೆ ದುರ್ಬಳಕೆ ಮಾಡಿದರು.

ಇದು ವಿನಾಶಕಾರಿ ಯುದ್ಧ ದಾಹೀ ಮನೋಭಾವ. ಕೋಮುವಾದಿಗಳು, ಮತೀಯ ಮೂಲಭೂತವಾದಿಗಳ ಇಂತಹ ಕಾರ್ಯಚರಣೆಯೇ ಅತ್ಯಂತ ಅಪಾಯಕಾರಿಯಾಗಿದೆ. ಇವರು ವಿಕಾರ ಮನೋಭಾವವನ್ನು ವ್ಯಕ್ತಪಡಿಸುವುದು ಮಾತ್ರವಲ್ಲ, ಜನರ ರುಂಡ ಚೆಂಡಾಡುವ ಭಿಭತ್ಸ ಘಟನೆಗಳನ್ನು, ದನದ ಸಾಗಾಣಿಕೆ, ಚರ್ಮ ಸುಲಿಯುತ್ತಾರೆ ಎಂಬಂತಹ ಗೋರಕ್ಷಣೆಯ ಹೆಸರಿನಲ್ಲಿ ಧಾಳಿ ನಡೆಸುವುದರ ವಿಡಿಯೋಗಳು ಜಾಲ ತಾಣದಲ್ಲಿ ಕಾಣ ಸಿಗುತ್ತವೆ. ಹಾಗೆ ಯಥೇಚ್ಛವಾಗಿ ವಿಚಾರ ವಿಧ್ವಂಸ ಕಾರ್ಯಗಳೂ ಕೂಡ.

ಇಂತಹುಗಳನ್ನು, ಮುಖ್ಯವಾಗಿ ರಾಕೇಶ್ ಸಿದ್ದರಾಮಯ್ಯನವರ ಸಾವಿನ ಕುರಿತ ವಿಕಾರಗಳನ್ನು ಪ್ರಜ್ಞಾವಂತರು ವ್ಯಾಪಕವಾಗಿ ಖಂಡಿಸಿದ್ದಾರೆ. ಇದು ಆರೋಗ್ಯಕರ ಮನಸ್ಸುಗಳ ಪ್ರತೀಕ ಮಾತ್ರವಲ್ಲ, ನಕಾರಾತ್ಮಕ ಶಕ್ತಿಗಳಿಗೆ ಒಡ್ಡಿದ ಪ್ರತಿರೋಧವಾಗಿದೆ. ಇದರಲ್ಲಿ ಬಿಜೆಪಿ-ಆರೆಸ್ಸೆಸ್ ನಾಯಕರೂ ಇರುವುದು ವಿಶೇಷ. ಅಂದ ಮಾತ್ರಕ್ಕೆ ಸಂಘಪರಿವಾರ ತನ್ನ ಸ್ವಯಂಸೇವಕರ ವಿಕಾರಗಳ ಅಪರಾಧಗಳ ಹೊಣೆಯಿಂದ ಮುಕ್ತವಾಗುವುದಿಲ್ಲ. ಯಾಕೆಂದರೆ ಅಂತಹ ಪ್ರವೃತ್ತಿಗಳನ್ನು, ಶಕ್ತಿಗಳನ್ನು ಅದು ಮಟ್ಟ ಹಾಕುವುದಿಲ್ಲ ಮಾತ್ರವಲ್ಲ, ಅದರ ಉತ್ಪಾದನೆ, ತರಬೇತಿಗಳ ನೀಡಿಕೆಯನ್ನೂ ನಿಲ್ಲಿಸುವುದಿಲ್ಲ. ಆದ್ದ-ರಿಂದ ಫ್ಯಾಶಿಸ್ಟ್‌ಮನೋಭಾವದ ಯುದ್ಧದಾಹಿಗಳ ಸಾಂದರ್ಭಿಕ ನಟನೆಗಳು ಭಾರತೀಯ ಸಂಸ್ಕೃತಿಯ ಪ್ರತೀಕವಾಗುವುದಿಲ್ಲ. ■



ಸುನಂದಾ ಎಚ್.ಎಸ್. ಮಾತನಾಡುತ್ತಿರುವುದು

ದುಡಿಯುವ ಮಹಿಳೆಯರಿಗೆ ರಕ್ಷಣೆ ಹಾಗೂ ಸಾಮಾಜಿಕ ಭದ್ರತೆ ಒದಗಿಸಲು ಸಿಐಟಿಯು ಒತ್ತಾಯ

ಸಿಐಟಿಯು ರಾಜ್ಯ ಮುಖಂಡರೂ, ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ರಾಜ್ಯ ಸಹಸಂಚಾಲಕಿಯಾದ ಸುನಂದಾ ಎಚ್.ಎಸ್.ರವರು 31 ಜುಲೈ 2016ರಂದು ನಗರದ ಬೋಳಾರದಲ್ಲಿ ಸಿಐಟಿಯು ನೇತೃತ್ವದಲ್ಲಿ ಜರುಗಿದ ದುಡಿಯುವ ಮಹಿಳೆಯರ ದ.ಕ. ಜಿಲ್ಲಾ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಾ, ಕಾರ್ಮಿಕ ವರ್ಗದ ಅವಿಭಾಜ್ಯ ಅಂಗವಾಗಿರುವ ದುಡಿಯುವ ಮಹಿಳೆಯರ ಪರಿಸ್ಥಿತಿ ಚಿಂತಾಜನಕವಾಗಿದೆ. ದುಡಿಯುವ ಮಹಿಳೆಯರಿಗೆ ಸೂಕ್ತ ರಕ್ಷಣೆ ಹಾಗೂ ಸಾಮಾಜಿಕ ಭದ್ರತೆಯನ್ನು ಒದಗಿಸಲು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಮುಂದಾಗಬೇಕು. ಈ ನಿಟ್ಟಿನಲ್ಲಿ ದುಡಿಯುವ ಮಹಿಳೆಯರು ಸಂಘಟಿತ ಶಕ್ತಿಯಾಗಿ ಮಹಿಳಾ ಶೋಷಣೆ, ಅಸಮಾನತೆ, ದೌರ್ಜನ್ಯಗಳ ವಿರುದ್ಧ ಪ್ರಬಲ ಹೋರಾಟ ನಡೆಸಬೇಕೆಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನೀಲ್‌ಕುಮಾರ್ ಬಜಾಲ್‌ರವರು ಮಾತನಾಡುತ್ತಾ ದುಡಿಯುವ ಮಹಿಳೆಯರ ಐಕ್ಯ ಚಳುವಳಿ ರೂಪುಗೊಂಡು, ಕಾರ್ಮಿಕರ ಐಕ್ಯತೆ-ಸೌಹಾರ್ದತೆಯನ್ನು ಉಳಿಸಿ ಬೆಳೆಸುವಲ್ಲಿ ದುಡಿಯುವ ಮಹಿಳೆಯರು ಮುಂಚೂಣಿಯಲ್ಲಿರಬೇಕೆಂದು ಹೇಳಿದರು.

ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿಯವರು ಮಾತನಾಡಿ, ದ.ಕ. ಜಿಲ್ಲೆಯಲ್ಲಿ ಮಹಿಳೆಯರೇ ಅತ್ಯಧಿಕ ಸಂಖ್ಯೆಯಲ್ಲಿರುವ ಬೀಡಿ ಕಾರ್ಮಿಕರು, ಕ್ಯಾಶ್ಯೂ ಗೋಡಂಬಿ ಕಾರ್ಮಿಕರು, ಅಂಗನವಾಡಿ, ಆಶಾ, ಬಿಸಿಯೂಟ ನೌಕರರು ತಮ್ಮ ಬೇಡಿಕೆಗಳನ್ನು ಮುಂದಿಟ್ಟು ಹಲವಾರು ಹೋರಾಟಗಳನ್ನು ನಡೆಸಿದ್ದಾರೆ. ಇಂತಹ ಹೋರಾಟದ ಪರಂಪರೆ ಮುಂದುವರಿಯಬೇಕು. ಹೊಸ ವಿಭಾಗದಲ್ಲಿ ದುಡಿಯುವ ಹಾಗೂ ಅತೀ ಶೋಷಣೆಗೆ ಒಳಗಾಗುವ ದುಡಿಯುವ ಮಹಿಳೆಯರನ್ನು ಸಂಘಟನಾ ತೆಕ್ಕೆಗೆ ತರುವಲ್ಲಿ ಈ ಸಮಾವೇಶವು ನಾಂದಿಯಾಗಲಿ, ಎಂದು ಆಶಯ ವ್ಯಕ್ತಪಡಿಸಿದರು.

ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಜಿಲ್ಲಾ ಸಂಚಾಲಕಿಯಾದ ಪದ್ಮಾವತಿ ಎಸ್. ಶೆಟ್ಟಿಯವರು 3 ವರ್ಷಗಳ ಅವಧಿಯ ಕರಡು ವರದಿಯನ್ನು ಮಂಡಿಸಿದರು. ಸಭೆಯ ಅಧ್ಯಕ್ಷತೆಯಲ್ಲಿ ಸಿಐಟಿಯು ಜಿಲ್ಲಾ ನಾಯಕರಾದ ಜಯಂತಿ ಬಿ. ಶೆಟ್ಟಿಯವರು ವಹಿಸಿದ್ದರು. ಸಮಾವೇಶಕ್ಕೆ ಜೆಎಂಎಸ್ ಜಿಲ್ಲಾಧ್ಯಕ್ಷರಾದ ಹೇಮಲತಾರವರು ಶುಭಕೋರಿ ಮಾತನಾಡಿದರು. ಎಲ್‌ಐಸಿ ವಿಮಾ ಪ್ರತಿನಿಧಿಗಳ ಸಂಘಟನೆಯ ಜಿಲ್ಲಾ ನಾಯಕಿಯಾದ ಶೋಭಾ ಅಡ್ಯಂತಾಯರವರು ಉಪಸ್ಥಿತರಿದ್ದರು. ಸಮಾವೇಶದಲ್ಲಿ ಬೀಡಿ, ಕಟ್ಟಡ, ಬಿಸಿಯೂಟ, ಅಂಗನವಾಡಿ, ಆಶಾ, ರೈಲ್ವೇ, ಬಿಎಸ್‌ಎನ್‌ಎಲ್, ವಿಮಾ, ಬೀದಿಬದಿ, ಹಮಾಲಿ, ಬ್ಯಾಂಕ್‌ಗಳಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರು, ನೌಕರರು ಭಾಗವಹಿಸಿದ್ದರು.

-ಎಸ್. ಪದ್ಮಾವತಿ ಶೆಟ್ಟಿ

ನಾಳಿನ ಕಾರ್ಯಕ್ರಮಗಳು

ಆಗಸ್ಟ್ 09	: ಹೊಸ ರಾಷ್ಟ್ರೀಯ ಶಿಕ್ಷಣ(ಎನ್‌ಇಪಿ) ನೀತಿಯ ಅಪಾಯಗಳ ಕುರಿತು ಎಸ್‌ಎಫ್‌ಐ ವತಿಯಿಂದ ಸಂವಾದ ಕಾರ್ಯಕ್ರಮ, ಬೆಳಿಗ್ಗೆ 11ಕ್ಕೆ ಶಾಸಕರ ಭವನ, ಬೆಂಗಳೂರು.
ಆಗಸ್ಟ್ 09	: ಕನಿಷ್ಠ ವೇತನ ಹಾಗೂ ತುಟ್ಟಿಭತ್ಯೆ ಜಾರಿಗಾಗಿ ಮತ್ತು ಇನ್ನಿತರೆ ಬೇಡಿಕೆಗಳನ್ನು ಈಡೇರಿಸಬೇಕೆಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘ(ಸಿಐಟಿಯು) ವತಿಯಿಂದ ಪ್ರತಿಭಟನೆ – ಮಂಡ್ಯ.
ಆಗಸ್ಟ್ 09	: ಜೆಸಿಟಿಯು ವತಿಯಿಂದ ರಾಜ್ಯ ಮಟ್ಟದ ಬೃಹತ್ ರ‍್ಯಾಲಿ, ಬೆಂಗಳೂರು.
ಆಗಸ್ಟ್ 14	: ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ ಬೆಂಗಳೂರು ಉತ್ತರ ಜಿಲ್ಲಾ ಸಮ್ಮೇಳನ, ರಾಜಾಜಿನಗರ, ಬೆಂಗಳೂರು.
ಆಗಸ್ಟ್ 20-21	: ದುಡಿಯುವ ಮಹಿಳೆಯರ ಸಮನ್ವಯ ಸಮಿತಿ(ಸಿಐಟಿಯು) ರಾಜ್ಯ ಸಮಾವೇಶ, ಮೈಸೂರು.
ಆಗಸ್ಟ್ 26-28	: ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ರಾಜ್ಯ ಸಮ್ಮೇಳನ, ಕೋಲಾರ.
ಸೆಪ್ಟಂಬರ್ 02	: ಅಖಿಲ ಭಾರತ ಸಾರ್ವತ್ರಿಕ ಮುಷ್ಕರ

ಸಿಐಟಿಯು ಜಿಲ್ಲಾ ಸಮ್ಮೇಳನಗಳು

ಆಗಸ್ಟ್ 06-07	: ಬೆಳಗಾವಿ	**ಆಗಸ್ಟ್ 13**	: ಬೀದರ್ ಜಿಲ್ಲೆ
ಆಗಸ್ಟ್ 6-7	: ತುಮಕೂರು ಜಿಲ್ಲೆ	**ಆಗಸ್ಟ್ 13-14**	: ಹಾಸನ ಜಿಲ್ಲೆ
ಆಗಸ್ಟ್ 11-12	: ವಿಜಯಪುರ ಜಿಲ್ಲೆ		

ಬೆಂಗಳೂರಿನಲ್ಲಿ ಕೃತಕ ನೆರೆ





ಲಿಂಗರಾಜು, ಬೆಂಗಳೂರು

ಬೆಂಗಳೂರಿನಲ್ಲಿ ಇತ್ತೀಚಿಗೆ ಸುರಿದ ಭಾರಿ ಮಳೆ ರಾಜಧಾನಿಯ ನಿಜ ದರ್ಶನ ಮಾಡಿಸಿತು. ದಿನವಿಡೀ ಸುರಿದ ಮಳೆಯಿಂದಾಗಿ ಮಡಿವಾಳ ಕೆರೆ, ಬೇಗೂರು ಕೆರೆ, ಸಾರಕ್ಕಿ ಕೆರೆ, ಕೋಡಿಚಿಕ್ಕನಹಳ್ಳಿ ಕೆರೆ ಇನ್ನು ಹಲವು ಕೆರೆಗಳು ತುಂಬಿ, ಹೆಚ್ಚಾದ ನೀರು ಕೋಡಿ ಬಿದ್ದು ತಗ್ಗು ಪ್ರದೇಶಗಳ ಮನೆಗಳಿಗೆ ನೀರು ನುಗ್ಗಿ ಭಾರಿ ಅವಾಂತರವನ್ನೇ ಸೃಷ್ಟಿಸಿತು. ನಗರದ ಬೊಮ್ಮನಹಳ್ಳಿ ಪ್ರದೇಶದ ಗಾರ್ವೆಬಾವಿಪಾಳ್ಯ, ಮೈಕೋ ಲೇಔಟ್, ಕೋಡಿಚಿಕ್ಕನಹಳ್ಳಿ, ಬನ್ನೇರುಘಟ್ಟ ರಸ್ತೆಯ ಡಿಯೋ ಲೇಔಟ್, ಕಸ್ಟಮ್ಸ್ ಅಪಾರ್ಟ್‌ಮೆಂಟ್, ಅನುಗ್ರಹ ಲೇಔಟ್, ಬಿಟಿಎಂ ಲೇಔಟ್, ಕೆಎಎಸ್ ಅಧಿಕಾರಿಗಳ ಬಡಾವಣೆ, ಪ್ರತಿಷ್ಠಿತ ಹೆಚ್‌ಎಸ್‌ಆರ್ ಬಡಾವಣೆ, ಸರ್ಜಾಪುರ ರಸ್ತೆಯ ಹಲವು ಬಡಾವಣೆಗಳು ಹೀಗೆ ಹಲವಾರು ಪ್ರದೇಶಗಳು ಜಲಾವೃತಗೊಂಡು ಇಲ್ಲಿನ ನಿವಾಸಿಗಳು ನರಕಯಾತನೆ ಅನುಭವಿಸಬೇಕಾಯಿತು. ಬಹುತೇಕರು ತಮ್ಮ ಆಸ್ತಿಪಾಸ್ತಿ ಕಳೆದುಕೊಳ್ಳಬೇಕಾಯಿತು. ಆಹಾರ, ನೀರು ಇಲ್ಲದೇ ಪರದಾಡಬೇಕಾಯಿತು. ಮಕ್ಕಳಿಗೆ ಹಾಲು ಸಿಗದೇ ಅವುಗಳ ಗೋಳಾಟ ಕೇಳತೀರದಾಗಿತ್ತು. ಬಟ್ಟೆಬರೆ, ಪಾತ್ರೆ ಪಗಡೆಗಳು, ದಿನಸಿ ಸಾಮಾನುಗಳು ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದವು. ಮಳೆ ನೀರಿನ ಜತೆ ಚರಂಡಿ ನೀರೂ ಸೇರಿ ಮನೆಗೆ ನುಗ್ಗಿದ್ದರಿಂದ ಅಸಾಧ್ಯ ದುರ್ವಾಸನೆಯ ನಡುವೆ ರಾತ್ರಿಯಿಡೀ ಜಾಗರಣೆ ಮಾಡಬೇಕಾಯಿತು.

ಮಳೆ ಇಲ್ಲದೆಯೂ ಪವರ್ ಕಟ್ ಆಗುವಾಗ ಪ್ರಳಯಸ್ವರೂಪಿ ಮಳೆಯಲ್ಲಿ ಪವರ್ ಕಟ್ ಆಗದಿದ್ದರೆ ಹೇಗೆ? ಕತ್ತಲೋ ಕತ್ತಲು, ಮಳೆಯಿಂದಾಗಿ ಮರಗಳು ಧರೆಗುರುಳಿದವು. ಇಡೀ ಬೆಂಗಳೂರೇ ಟ್ರಾಫಿಕ್ ಜಾಮ್‌ನಲ್ಲಿ ಸಿಕ್ಕಿ ಹಾಕಿಕೊಂಡಿತು. ವಾಹನ ಸವಾರರು ಹಿಂದಕ್ಕೂ ಹೋಗಲಾರದೆ, ಮುಂದಕ್ಕೂ ಚಲಿಸಲಾಗದೇ ಧಾರಾಕಾರವಾಗಿ ಸುರಿಯುವ ಮಳೆಯಲ್ಲೇ ನಿಲ್ಲಬೇಕಾಯಿತು. ಐದಾರು ಗಂಟೆ ವಾಹನಗಳು ರಸ್ತೆಯಲ್ಲಿ ನಿಲ್ಲಬೇಕಾಯಿತು. ಒಟ್ಟು ಬೆಂಗಳೂರಿಗರಿಗೆ, ನರಕದ ದರ್ಶನವಾಗಿದ್ದರಲ್ಲಿ ಯಾವುದೇ ಉತ್ಪ್ರೇಕ್ಷೆ ಇಲ್ಲ. ಹಾಗೆಯೇ ಕೆಲಸ ನಿಮಿತ್ತ ಬೆಂಗಳೂರಿಗೆ ಬಂದವರಿಗೆ ಸಾಕಪ್ಪ ಸಾಕು ಬೆಂಗ್ಳೂರ್ ಸಹವಾಸ ಅನ್ನಿಸಿದ್ದರೆ ಆಶ್ಚರ್ಯವಿಲ್ಲ.

ಯುದ್ಧಕಾಲದಲ್ಲಿ ಶಸ್ತ್ರಾಭ್ಯಾಸ ನಡೆಸುವ ಬಿಬಿಎಂಪಿ ಈ ಬಾರಿಯೂ 24*7 ಆನ್ ಇನ್ ಲೈನ್ ವ್ಯವಸ್ಥೆ ಮಾಡಿ ಸಂತ್ರಸ್ಥರಿಂದ ಸಮಸ್ಯೆಗಳನ್ನು ಆಲಿಸಿತು. ವಿಪತ್ತು ದಳವನ್ನು ಕಳುಹಿಸಲಾಗಿದೆ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಲಾಯಿತು. ತಕ್ಷಣವೇ ಕಾರ್ಯಪ್ರವೃತ್ತರಾಗುವಂತೆ ಮೇಯರ್ ಮತ್ತು ಆಯುಕ್ತರು, ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಆದೇಶ ನೀಡಿದರು. ಅದೇ ರೀತಿ ಪಾಲಿಕೆಯ ಸಿಬ್ಬಂದಿಯೂ ತಕ್ಷಣವೇ ಮುಳುಗಡೆಯಾದ ಪ್ರದೇಶಗಳಿಗೆ ತೆರಳಿ ಸ್ಥಳ ಪರಿಶೀಲನೆ ನಡೆಸಿದರು. ಆದರೆ ಅವರೂ ಏನೂ ಮಾಡದ ಸ್ಥಿತಿಯಲ್ಲಿ ಅಸಹಾಯಕರಾಗಿ ನಿಂತು ನೋಡುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಎದೆ-ಯುದ್ದ ನೀರು ಮನೆಯೊಳಗೆ ನುಗ್ಗಿದರೆ ಬರಿಗೈಯಲ್ಲಿ ಬಂದ ಸಿಬ್ಬಂದಿ ಏನು ತಾನೆ ಏನು ಮಾಡಿಯಾರು!? ಅಗ್ನಿಶಾಮಕ ದಳದವರು ಬಂದು ನೀರು ಹೊರ ಹಾಕುವ ಪ್ರಯತ್ನ ಮಾಡಿ ಒಂದಿಷ್ಟು ನೆರವಾಗಿದ್ದಾರೆ. ಮಹಡಿಯ ಮೇಲೆ ಆಶ್ರಯ ಪಡೆದಿದ್ದ ಸಂತ್ರಸ್ತರನ್ನು ಬೋಟ್‌ಗಳನ್ನು ಬಳಸಿ ಸುರಕ್ಷಿತ ಸ್ಥಳಗಳಿಗೆ ತಂದು ಬಿಟ್ಟಿದ್ದಾರೆ.

ಮೂರು ದಿನಗಳ ನಂತರ...

ಮಳೆ ನಿಂತು ಮೂರು ದಿನವಾಗಿದೆ. ಆದರೆ ಮಳೆ ನೀರು ಮನೆಗಳಿಂದ ಇನ್ನೂ ಖಾಲಿಯಾಗಿಲ್ಲ. ಮ್ಯಾನ್ ಹೋಲ್‌ಗಳು ತುಂಬಿ ಹರಿಯುತ್ತಿವೆ. ಶೌಚಕ್ಕೂ ಜಾಗವಿಲ್ಲ, ಕೆಲ ರಸ್ತೆಗಳಲ್ಲಿ ನೀರು ಖಾಲಿಯಾಗಿದೆ ಆದರೆ ಕೆಸರು ತುಂಬಿಕೊಂಡಿದೆ. ಇನ್ನೂ ಕೆಲವು ರಸ್ತೆಗಳಲ್ಲಿ ನೀರು ಹಾಗೆ ನಿಂತಿದೆ. ದುರ್ವಾಸನೆ ಕಡಿಮೆಯಾಗಿಲ್ಲ. ಸೊಳ್ಳೆಗಳ ಹಿಂಡು ಲಗ್ಗೆ ಇಟ್ಟಿವೆ. ಜ್ವರ, ಕೆಮ್ಮು, ವಾಂತಿ-ಬೇದಿ ಇತ್ಯಾದಿ ರೋಗಗಳು ಕಾಣಿಸಿಕೊಂಡು ಜನ ಆಸ್ಪತ್ರೆ ಸೇರುತ್ತಿದ್ದಾರೆ. ಕೆಲವರು ಮನೆ ತೊರೆದು ಸಂಬಂಧಿಕರ, ಗೆಳೆಯರ ಮನೆಗಳಿಗೆ ತೆರಳಿದ್ದಾರೆ. ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲಾಗದವರು ಕೊಚ್ಚೆ ನೀರಿನ ನಡುವೆಯೇ ದಿನ ಕಳೆಯುತ್ತಿದ್ದಾರೆ. ಮೊದಲೆರಡು ದಿನ ಊಟ, ಕುಡಿಯುವ ನೀರು ಒದಗಿಸಿದ್ದ ಬಿಬಿಎಂಪಿ ಈಗ ಅದನ್ನೂ ನಿಲ್ಲಿಸಿದೆ! ಅಧಿಕಾರಿಗಳು ಇನ್ನೆರಡು ದಿನದಲ್ಲಿ ಪೂರ್ತಿಯಾಗಿ ನೀರು ಹೊರ ಹಾಕಲಾಗುವುದೆಂದು ಭರವಸೆ ನೀಡಿದ್ದಾರೆ! ಮುಖ್ಯಮಂತ್ರಿಗಳು ಬಿಬಿಎಂಪಿ ಅಧಿಕಾರಿಗಳ ಸಭೆ ನಡೆಸಿ ಪರಿಹಾರ ಕಾರ್ಯಗಳಿಗೆ ಹಾಗು ತಕ್ಷಣದ ತುರ್ತು ಕಾಮಗಾರಿಗಳಿಗೆ 200 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದಾರೆ!

ಇದು ಹದಿನೈದನೇ ನೆರೆ...!

ಪತ್ರಕರ್ತರೊಬ್ಬರ ಪ್ರಶ್ನೆಗೆ ಉತ್ತರಿಸಿದ ಗೃಹಿಣಿಯೊಬ್ಬರು 'ಬೆಂಗಳೂರಿಗೆ ಬಂದ ಮೇಲೆ ಇದು ನಾನು ನೋಡುತ್ತಿರುವ ಹದಿನೈದನೇ ನೆರೆ' ಎಂದರು. ಈ ಮಾತು ಬೆಂಗಳೂರಿನ ವಾಸ್ತವ ಚಿತ್ರಣವನ್ನು ತೆರೆದಿಟ್ಟಿತ್ತು. ನಿಜ, ಪ್ರತೀ ಬಾರಿ ಮಳೆ ಬಂದಾಗಲೂ ನಗರದ ಕೆಲ ಪ್ರದೇಶಗಳಾದರೂ ಮುಳುಗಡೆಯಾಗಲೇಬೇಕು! ಮಳೆ ತುಸು ಹೆಚ್ಚಾದರಂತೂ ಪ್ರತಿಷ್ಠಿತ ಬಡಾವಣೆಗಳೂ, ಅಪಾರ್ಟ್‌ಮೆಂಟ್‌ಗಳು ನೆರೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಒಂದು ವೇಳೆ ಕರಾವಳಿಯಲ್ಲಿ ಬೀಳುವಂತೆ ಬಿದ್ದಲ್ಲಿ ಕಲ್ಪಿಸಿಕೊಳ್ಳುವುದಕ್ಕೂ ಭಯವಾಗುತ್ತದೆ. ಹಾಗೆಯೇ ಪ್ರತೀ ನೆರೆಯ ಸಂದರ್ಭದಲ್ಲಿ ಕಾಮಗಾರಿಗಾಗಿ ಹಣ ಬಿಡುಗಡೆ ಮಾಡುವುದು, ಮಂತ್ರಿ, ಶಾಸಕರು, ಅಧಿಕಾರಿಗಳು ನೆರೆಪೀಡಿತ ಪ್ರದೇಶಗಳಿಗೆ ಭೇಟಿ ನೀಡುವುದು ಮಾಮೂಲಾಗಿ ಹೋಗಿದೆ. ಜನ ಕೂಡ ಪ್ರತೀ ಬಾರಿ ಮಂತ್ರಿ ಮಹೋದಯರ ಮೇಲೆ ವಿಶ್ವಾಸವಿಟ್ಟು ತಮ್ಮ ದುಃಖ-ದುಮ್ಮಾನಗಳನ್ನು ಹೇಳಿಕೊಳ್ಳುತ್ತಾರೆ! ಆದರೆ ನೆರೆ ಮಾತ್ರ ತಪ್ಪಿಲ್ಲ.



ಸಣ್ಣ ಮಳೆಗೂ ಸಿಲಿಕಾನ್ ಸಿಟಿ ಮುಳುಗುವುದು ಏಕೆ?

ಬೆಂಗಳೂರು ಕೆರೆಗಳ ಊರು. ನಗರವಾಗಿ ಬೆಳೆಯುವುದಕ್ಕೂ ಮೊದಲೂ ಇದು ಕೃಷಿ ಪ್ರದೇಶವಾಗಿತ್ತು. ಕೃಷಿಗೆ ನೀರು ಒದಗಿಸುತ್ತಿದ್ದುದು ಈ ಕೆರಗಳೇ ಆಗಿದ್ದವು. ಕೆರೆ ನೀರು ತುಂಬಿ ಕೋಡಿ ಬಿದ್ದ ನೀರು ಗುರುತ್ವ ಬಲವಿರುವ ಕಡೆಗೆ ಹರಿದು ಇನ್ನೊಂದು ಕೆರೆಯನ್ನು ಸೇರುತ್ತಿತ್ತು. ಹೀಗೆ ಕೆರೆಯಿಂದ ಕೆರೆಗೆ ನೈಸರ್ಗಿಕವಾದ ಕಾಲುವೆ ನಿರ್ಮಾಣವಾಗಿತ್ತು. ಮುಂದೆ ಅದು ರಾಜಕಾಲುವೆ ಆಯಿತು. ಬೆಂಗಳೂರು ನಗರವಾಗಿ ಪರಿವರ್ತನೆಯಾದಂತೆಲ್ಲಾ ಕೃಷಿ ಇಳಿಮುಖವಾಗುತ್ತಾ ಕಾಂಕ್ರಿಟ್ ಕಾಡು ನಿಧಾನವಾಗಿ ಹಬ್ಬಲು ಶುರುವಿಟ್ಟುಕೊಂಡಿತ್ತು. ನಗರಕ್ಕೆ ದಾಂಗುಡಿ ಇಟ್ಟ ಬೃಹತ್ ಸಾರ್ವಜನಿಕ ಉದ್ದಿಮೆಗಳು ಅಪಾರ ಪ್ರಮಾಣದ ಉದ್ಯೋಗವಕಾಶಗಳನ್ನು ಸೃಷ್ಟಿಸಿದ್ದರಿಂದ ನಗರ ವಿಸ್ತರಣೆಯಾಗುತ್ತಲೇ ಬಂತು. ಇಲ್ಲಿನ ಹಿತವಾದ ಹವಾಗುಣವೂ ಕೈಬೀಸಿ ಕರೆಯುವಂತಿತ್ತು.

ಆದರೆ ಅಂದಿನಿಂದಲೂ ಬೆಳೆಯುತ್ತಿರುವ ನಗರಕ್ಕೆ ಬೇಕಾದ ಮೂಲ ಸೌಕರ್ಯಗಳನ್ನು ಒದಗಿಸಲು ಯೋಜಿತ ಪ್ರಯತ್ನ ಆಗಲಿಲ್ಲ. ಹಾಗು ಭವಿಷ್ಯದಲ್ಲಿ ನಗರ ಬೆಳೆಯಬಹುದಾದ ಅಂದಾಜನ್ನು ಮಾಡುವಲ್ಲಿಯೂ ಕಾಳಜಿ ವಹಿಸಲಿಲ್ಲ. 90 ನಂತರ ದಿಢೀರನೆ ಲಗ್ಗೆ ಇಟ್ಟ ಐಟಿ ಕಂಪನಿಗಳು ಬೆಂಗಳೂರಿನ ಚಿತ್ರಣವನ್ನೇ ಬದಲಾಯಿಸಿದವು. ಇಲ್ಲಿನ ಭೂಮಿ ಚಿನ್ನವಾಯಿತು. ರಿಯಲ್ ಎಸ್ಟೇಟ್ ತಲೆ ಎತ್ತಿತು. ಇದರ ಬೆನ್ನ ಹಿಂದೆಯೇ ಅಕ್ರಮ ಚಟುವಟಿಕೆಗಳು ಗರಿಗೆದರಿದವು. ಯಾವುದೇ ವೈಜ್ಞಾನಿಕ ನಗರ ಯೋಜನೆ ಇಲ್ಲದೇ ಬೆಂಗಳೂರು ದಿಢೀರನೆ ಬೆಳೆಯಿತು. ಭೂಮಿಗೆ ಚಿನ್ನದ ಬೆಲೆ ಬಂದಿದ್ದರಿಂದ ಕೆರೆ, ರಾಜಕಾಲುವೆಗಳು ಒತ್ತುವರಿಯಾದವು. ಕೆಲವೆಡೆ ಕೆರೆಗಳೇ ಮಾಯವಾಗಿ ಲೇಔಟ್‌ಗಳಾದವು.

ಭ್ರಷ್ಟಾಚಾರವೂ... ಬದಲಾದ ನೀತಿಗಳೂ...!

ಕಂದಾಯ, ಅರಣ್ಯ, ಪರಿಸರ ಇಲಾಖೆಗಳು ಜತೆಯಲ್ಲಿ ಬಿಡಿಎ, ಬಿಬಿಎಂಪಿ ಮತ್ತು ಪೊಲೀಸ್. ಒಂದು ಸಣ್ಣ ಮನೆಯಿರಲಿ, ವಸತಿ ಸಂಕೀರ್ಣವಿರಲಿ, ವಾಣಿಜ್ಯ ಕಟ್ಟಡವಿರಲಿ ಅಥವಾ ಬಡಾವಣೆಯಿರಲಿ ಈ ಎಲ್ಲವುಗಳ ನಿರ್ಮಾಣಕ್ಕೆ ಮೇಲಿನ ಐದು ಸಂಸ್ಥೆಗಳ ಒಪ್ಪಿಗೆ ಇಲ್ಲದೇ ಒಂದು ಹುಲ್ಲು ಕಡ್ಡಿಯೂ ಅಲುಗಾಡಲು ಸಾಧ್ಯವಿಲ್ಲ. ಹೀಗಾಗಿಯೇ ಇವು ಬೆಂಗಳೂರು ನಗರದಲ್ಲಿ ಹಣ ಹರಿದಾಡುವ ತಾಣಗಳೆಂದೇ ಖ್ಯಾತಿ ಗಳಿಸಿವೆ. ಇವಿಷ್ಟು ಸರ್ಕಾರಿ ಸಂಸ್ಥೆಗಳನ್ನು ಬಳಸಿಯೇ ಬಹುತೇಕ ಅಕ್ರಮಗಳು ನಡೆಯುತ್ತವೆ. ಕೆರೆಯ ಸುತ್ತಲೂ 50 ಮೀಟರ್ ಬಫರ್ ಝೋನ್ ಬಿಡಬೇಕೆಂಬ ನಿಯಮವಿದ್ದರೂ ಪಾಲನೆಯಾಗುತ್ತಿಲ್ಲ. ನಗರದ ಹಲವೆಡೆ ವಾಣಿಜ್ಯ ಸಂಕೀರ್ಣಗಳನ್ನು ರಾಜಕಾಲುವೆಯ ಮೇಲೆಯೇ ಕಟ್ಟಲಾಗಿದೆ. 33 ಅಡಿಯ ರಾಜಕಾಲುವೆ ಕೆಲವೆಡೆ 5 ಅಡಿಗೆ ಬಂದು ನಿಂತಿದೆ. ಈ ಎಲ್ಲಾ ಕಾರಣಗಳಿಂದಾಗಿ ಇಂದು ಬೆಂಗಳೂರು ಪದೇ ಪದೇ ನೆರೆಗೆ ತುತ್ತಾಗುತ್ತಲೇ ಇದೆ. ರಾಜಕಾಲುವೆ ಒತ್ತುವರಿ ಮಾಡಿ ಅಕ್ರಮವಾಗಿ ಕಟ್ಟಲಾಗಿರುವ ಕಟ್ಟಡಗಳನ್ನು ತೆರವುಗೊಳಿಸಬೇಕೆಂದು ಆದೇಶ ಹೊರಡಿಸಲಾಗುತ್ತದೆಯಾದರೂ ಅದು ಅಲ್ಲಿಗೆ ಮಾತ್ರ ನಿಲ್ಲುತ್ತದೆ. ಕೆರೆ ಒತ್ತುವರಿ ಮಾಡಿ ಅಕ್ರಮವಾಗಿ ಬಡಾವಣೆಗಳನ್ನು ನಿರ್ಮಿಸಿರುವ ಪ್ರಕರಣಗಳು ಸಾಕಷ್ಟು ಪತ್ತೆಯಾಗಿವೆ, ಆದರೆ ಯಾರಿಗೂ ಶಿಕ್ಷೆಯಾದ ಉದಾಹರಣೆಗಳಿಲ್ಲ. ಸರ್ಕಾರವೂ ಕೂಡ ರಿಯಲ್ ಎಸ್ಟೇಟ್‌ಗೆ ಸಹಕಾರಿಯಾಗುವಂತೆ ನೀತಿ ನಿಯಮಾವಳಿಗಳನ್ನು ಬದಲಾಯಿಸುತ್ತಲೇ ಬಂದಿದೆ. ಸರ್ಕಾರವೇ ಕೆಲವು ಕೆರೆಗಳನ್ನು ನಿರ್ಜೀವ ಕೆರೆಗಳೆಂದು ಕರೆದು ಖಾಸಗಿ ಲೇಔಟ್‌ಗಳಿಗೆ ದಾರಿ ಮಾಡಿಕೊಟ್ಟಿದೆ.

ಪರಿಹಾರವೇನು?

ಒತ್ತುವರಿಯಾಗಿರುವ ಕೆರೆ, ರಾಜಕಾಲುವೆಗಳನ್ನು ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸಬೇಕು. ಕೆರೆ ಮತ್ತು ಒಳಚರಂಡಿಯಲ್ಲಿ ತುಂಬಿರುವ ಹೂಳೆತ್ತಬೇಕು. ಬಿಬಿಎಂಪಿ, ಬೆಸ್ಕಾಂ. ಬಿಡಬ್ಲ್ಯೂಎಸ್‌ಎಸ್‌ಬಿ, ಬಿಡಿಎ ಇತರೆ ಸಂಸ್ಥೆಗಳ ನಡುವೆ ಇರುವ ಸಮನ್ವಯದ ಕೊರತೆ ಸರಿಪಡಿಸಬೇಕು. ವೈಜ್ಞಾನಿಕವಾದ ನಗರ ಯೋಜನೆಯನ್ನು ಜಾರಿಗೊಳಿಸಿ, ಯೋಜನೆಯ ಜಾರಿಯಲ್ಲಿ ಸಮುದಾಯವನ್ನು ಒಳಗೊಳ್ಳಬೇಕು, ಹಾಗೂ ಬಿಬಿಎಂಪಿಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರವನ್ನು ತಡಗಟ್ಟುವುದು ಸೇರಿದಂತೆ ಇತರೆ ಕ್ರಮಗಳನ್ನು ಕೈಗೊಂಡಲ್ಲಿ ಮಾತ್ರವೇ ನೆರೆ ಹಾವಳಿಯನ್ನು ತಪ್ಪಿಸಲು ಸಾಧ್ಯ. ಇಲ್ಲವಾದಲ್ಲಿ ಪ್ರತಿ ಮಳೆಯಲ್ಲೂ ಬೆಂಗಳೂರು ಮುಳುಗೇಳುವುದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ. ●

PÉÁ½ZÀÄÝ

ಇನ್ನು ಹಸುದನಗಳ ಹೆಣ ವಿಲೇವಾರಿ ಮಾಡೋದಿಲ್ಲ. ನಿಮ್ಮದೇ ಮಾತೆ. ನಿಮಗೆ ಹಾಲು ಕೊಟ್ಟ ದೇವತೆ. ಎತ್ಕೊಂಡ್ ಹೋಗಿ. ಸುಸಂಸ್ಕೃತ ಸಾಂಪ್ರದಾಯಿಕವಾಗಿ ಮಣ್ಣು ಮಾಡ್ಕೊಳ್ಳಿ.

– ಗುಜರಾತ್ ದಲಿತರು



ವಿದೇಶಗಳಲ್ಲಿ ಗಾಂಧಿ ಸ್ಮರಣೆ ಮತ್ತು ಸ್ವದೇಶದಲ್ಲಿ??

ಪ್ರೊ. ಟಿ.ಆರ್.ಚಂದ್ರಶೇಖರ

ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿ ಎಲ್ಲಿ ಅವಮಾನ ಅನುಭವಿಸಿದ್ದರೋ ಅಲ್ಲಿಗೆ ಭೇಟಿ ನೀಡುವ ನಮ್ಮ ಪ್ರಧಾನಮಂತ್ರಿಯವರು, ಕುಡಿಯುವ ನೀರಿನ ಮೇಲೆ ದಲಿತರಿಗೆ ವಿಧಿಸಿದ್ದ ನಿಷೇಧದ ವಿರುದ್ಧ ಭಾರತರತ್ನ ಬಿ. ಆರ್.ಅಂಬೇಡ್ಕರ್ 1927ರಲ್ಲಿ ಮಹಾ ಚಳುವಳಿ ನಡೆಸಿದ್ದ ಮಹಾಡ್‌ಗೆ ಮಾತ್ರ ಭೇಟಿ ನೀಡುವುದಿಲ್ಲ. ಜಾನುವಾರು ಮಾಂಸದ ಹೆಸರಿನಲ್ಲಿ ದಲಿತರ ಮೇಲೆ ಇಂದು ನಡೆಯುತ್ತಿರುವ ದೌರ್ಜನ್ಯ, ಹಿಂಸೆ, ಆಕ್ರಮಣಗಳ ಬಗ್ಗೆ ಚಕಾರವೆತ್ತುತ್ತಿಲ್ಲ.

ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿ ಅವರನ್ನು ರೈಲಿನ ಮೊದಲ ದರ್ಜೆ ಬೋಗಿಯಿಂದ ಮೊದಲ ದರ್ಜೆ ಟಿಕೆಟ್ ಇದ್ದರೂ ಕಪ್ಪು ವರ್ಣೀಯ ಅನ್ನುವ ಕಾರಣ-ಕ್ಕೆ ಹೊರಗೆ ದೂಡಲಾಗಿತ್ತು. ಬಿಳಿಯರ ಕೈಯಲ್ಲಿ ಅವರು ಅವಮಾನ ಅನುಭವಿಸಿದ್ದರು. ಇದನ್ನು ತಾನೆ ವರ್ಣಭೇದ ನೀತಿ ಎಂದು ಕರೆಯುವುದು! ಈ ಕರಾಳ ಶಾಸನದ ವಿರುದ್ಧ ಹೋರಾಟ ಮಾಡಿದ ಅಲ್ಲಿನ ನೆಲ್ಸನ್ ಮಂಡೇಲಾ 25 ವರ್ಷಗಳ ಕಾಲ ಸೆರೆಮನೆ ವಾಸ ಅನುಭವಿಸ ಬೇಕಾಯಿತು. ಅಲ್ಲಿನ ವರ್ಣಭೇದ ನೀತಿ ಮತ್ತು ನಮ್ಮ ಸಮಾಜದಲ್ಲಿನ ಅಸ್ಪೃಶ್ಯತೆಗಳ ನಡುವೆ ಗುಣಾತ್ಮಕ ಭಿನ್ನತೆಯೇನಿಲ್ಲ. ದಕ್ಷಿಣ ಆಫ್ರಿಕಾದ ಪ್ರಥಮ ದರ್ಜೆ ಬೋಗಿಯಿಂದ ಹೊರ ದೂಡಲ್ಪಟ್ಟ ಮೇಲೆ ರೈಲು ನಿಲ್ದಾಣದಲ್ಲಿ ಮೈ ನಡುಗಿಸುವ ಚಳಿಯನ್ನು ಗಾಂಧೀಜಿ ಸಹಿಸಿಕೊಳ್ಳಬೇಕಾಯಿತು. ಅಂತಹ ಉಗ್ರ ಪ್ರಭುತ್ವದ ವಿರುದ್ಧ ಅವರು ಹೋರಾಟ ನಡೆಸಿದರು. ಇದೆಲ್ಲ ಇಂದು ಇತಿಹಾಸ. ವರ್ಣಭೇದ ನೀತಿಯೂ ಇತಿಹಾಸವೇ: ಆದರೆ ಅಸ್ಪೃಶ್ಯತೆ ?!

ಇತ್ತೀಚಿಗೆ ನಮ್ಮ ಪ್ರಧಾನಮಂತ್ರಿ ದಕ್ಷಿಣ ಆಫ್ರಿಕಾ ದೇಶಕ್ಕೆ ಭೇಟಿ ನೀಡಿದ್ದಾಗ ಮರೆಯದೆ ಗಾಂಧೀಜಿಯವರನ್ನು ಯಾವ ರೈಲು ನಿಲ್ದಾಣದಲ್ಲಿ ಪ್ರಥಮ ದರ್ಜೆ ಬೋಗಿಯಿಂದ ಹೊರಹಾಕಲಾಗಿತ್ತೋ ಅಲ್ಲಿಗೆ ತೀರ್ಥಯಾತ್ರೆಯೋಪಾದಿಯಲ್ಲಿ ಭೇಟಿ ನೀಡಿದ್ದರು. ಅಲ್ಲಿ ಗಾಂಧೀಜಿಗೆ ಅವರು ಶ್ರದ್ಧಾಂಜಲಿ ಅರ್ಪಿಸಿದ್ದರು. ಅದೊಂದು ಭಾವನಾತ್ಮಕ ಸಂಗತಿಯಾಗಿತ್ತು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಾಂಧೀಜಿ ಮತ್ತು ಅವರ ಜೀವನದ ಘಟನೆಗಳು ಜನಜನಿತವಾಗಿರುವುದು ಸರಿಯಷ್ಟೆ! ಗಾಂಧೀಜಿ ದಕ್ಷಿಣ ಆಫ್ರಿಕದಲ್ಲಿ ವರ್ಣಭೇದ ನೀತಿಯ ವಿರುದ್ಧ ಹೋರಾಟ ನಡೆಸಿದರು ಮತ್ತು ಭಾರತದಲ್ಲಿ ಅಸ್ಪೃಶ್ಯತೆಯ ವಿರುದ್ಧ ಹೋರಾಟ ನಡೆಸಿದ್ದರು. ಅವರದ್ದು ಪ್ರಧಾನವಾಗಿ ಅಸಮಾನತೆಯ ವಿರುದ್ಧದ ಚಳುವಳಿಯಾಗಿತ್ತು. ಈ ಬಗೆಯಲ್ಲಿ ಗಾಂಧೀಜಿಗೆ ಸಂಬಂಧಿಸಿದ ವಿದೇಶಗಳಲ್ಲಿನ ಸ್ಥಳಗಳಿಗೆ ಭೇಟಿ ನೀಡುವುದರ ಮೂಲಕ ಜಾಗತಿಕ ಮಟ್ಟದಲ್ಲಿ ಜನರ ಮೆಚ್ಚುಗೆಯನ್ನು ಪಡೆದುಕೊಳ್ಳಬಹುದು.

ಆದರೆ ಇಂದು ಗಾಂಧೀಜಿ ಅವರನ್ನು ನಮ್ಮ ರಾಜಕೀಯ ನೇತಾರರು ವಿದೇಶಗಳಲ್ಲಿ ಹೇಗೆ ಗೌರವಿಸುತ್ತಾರೋ, ಅವರಿಗೆ ಹೇಗೆ ಶ್ರದ್ಧಾಂಜಲಿ ಅರ್ಪಿಸುತ್ತಾರೋ ಅದೇ ರೀತಿಯಲ್ಲಿ ಭಾರತದಲ್ಲಿ ಅವರಿಗೆ ಗೌರವ ಸಲ್ಲಿಸುತ್ತಿಲ್ಲ. ಅವರನ್ನು ಕೊಂದವರ ಹೆಸರಿನಲ್ಲಿ ಗುಡಿಗಳನ್ನು ಕಟ್ಟುವ ಪ್ರಯತ್ನ ನಡೆಯುತ್ತಿದೆ. ಗಾಂಧೀಜಿ ಬಗ್ಗೆ ನಮ್ಮದು ಯಾಂತ್ರಿಕ ಅಭಿಮಾನವಾಗಿದೆಯೆ? ಏಕೆಂದರೆ ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿ ಇಂದು ಇತಿಹಾಸದ ಭಾಗವಾಗಿ ಬಿಟ್ಟಿದೆ. ಅದರ ಆಚರಣೆ ಇಂದು ಅಲ್ಲಿ ಕಂಡು ಬರುವುದಿಲ್ಲ. ಅದನ್ನು ತೆ-ಊಡೆದು ಹಾಕುವುದು ಆಫ್ರಿಕನ್ನರಿಗೆ ಸಾಧ್ಯವಾಗಿದೆ. ಆದರೆ ನಮ್ಮ ಸಮಾಜವನ್ನು ಶತ-ಶತಮಾನಗಳಿಂದ ಕಾಡುತ್ತಿರುವ ಅಸ್ಪೃಶ್ಯತೆಯನ್ನು ತೊಡೆದು ಹಾಕುವುದು ನಮಗೆ ಸಾಧ್ಯವಾಗಿಲ್ಲ. ಅಸ್ಪೃಶ್ಯತೆ ಅನ್ನುವುದು ದಲಿತರ ಬಾಳನ್ನು ಮೂರಾಬಟ್ಟೆ ಮಾಡಿದೆ. ಆದ-ರೆ ನಮ್ಮ ಸನಾತನಿಗಳು 'ದಲಿತ' ಅನ್ನುವ ಪದದ ಬಳಕೆಯನ್ನು ವಿರೋಧಿಸುತ್ತಿದ್ದಾರೆ. ಅಮೇರಿಕೆಯ ಶಾಲಾ ಪಠ್ಯಗಳಲ್ಲಿ ಭಾರತ ಕುರಿತ ಪಾಠಗಳಲ್ಲಿ ಬಳಸಿರುವ ದಲಿತ ಪದವನ್ನು ತೆಗೆದು ಹಾಕಬೇಕೆಂದು ಅಲ್ಲಿನ ಸನಾತನಿಗಳ ಗುಂಪು ಪ್ರಯತ್ನ ನಡೆಸುತ್ತಿದೆ. ಅಲ್ಲಿ ಪ್ರಗತಿಪರ ಭಾರತೀಯರ ಗುಂಪು ಅದನ್ನು ವಿಫಲಗೊಳಿಸಿದೆ ಅನ್ನುವುದು ಸಮಾಧಾನದ ಸಂಗತಿಯಾಗಿದೆ.

ಮೋದಿ ಮಹಾಡ್ ಗೆ ಭೇಟಿ ನೀಡುವರೇ?

ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿ ಯಾವ ಬಗೆ-ಯ ಅವಮಾನವನ್ನು ಅನುಭವಿಸಿದ್ದರೋ ಆ ಸ್ಥಳಕ್ಕೆ ನಮ್ಮ ಪ್ರಧಾನಮಂತ್ರಿಯವರು ಭೇಟಿ ನೀಡಿ ಜಾಗತಿಕ ಮಟ್ಟದಲ್ಲಿ ಮೆಚ್ಚುಗೆಯನ್ನು ಗಳಿಸಿಕೊಳ್ಳುತ್ತಿದ್ದಾರೆ. ಆ ಮೂಲಕ ಗಾಂಧೀಜಿ ಬಗ್ಗೆ ತಮಗೆ ಇರುವ ಅಭಿಮಾನವನ್ನು ಪ್ರದರ್ಶಿಸುತ್ತಿದ್ದಾರೆ. ಇದೆಲ್ಲ ಅತ್ಯಂತ ಸ್ವಾಗತಾರ್ಹವಾದ ಸಂಗತಿಗಳಾಗಿವೆ. ಇದು ಒಂದು ರೀತಿಯಲ್ಲಿ ಸಾಮಾಜಿಕ ಅವಮಾನದ ವಿರುದ್ಧ ನಮ್ಮ ಪ್ರತಿಭಟನೆಯನ್ನು ತೋರಿಸುವ ಕ್ರಮದಂತೆ ಕಾಣುತ್ತದೆ. ಇದೆಲ್ಲ ಸರಿ. ಆದರೆ ಪ್ರಶ್ನೆ ಇದಲ್ಲ.

ವಿದೇಶಗಳಲ್ಲಿ ಸಮಾನತೆಯ ಬಗ್ಗೆ, ಸಾಮಾಜಿಕ ಅವಮಾನದ ವಿರುದ್ಧ, ಗಾಂಧೀಜಿ ಬಗ್ಗೆ ಅಭಿನಂದನೀಯ ರೀತಿಯಲ್ಲಿ ಪ್ರತಿಕ್ರಿಯಿಸುವ ನಾವು ನಮ್ಮದೇ ಸಮಾಜದಲ್ಲಿ ನಡೆಯುತ್ತಿರುವ ದಲಿತರ ಅವಮಾನದ ಬಗ್ಗೆ, ಅವರ ಮೇಲೆ ಸನಾತನವಾದಿಗಳಿಂದ ನಡೆಯುತ್ತಿರುವ ಹಿಂಸೆ, ದೌರ್ಜನ್ಯದ ಬಗ್ಗೆ, ಅಸಮಾನತೆಯ ಬಗ್ಗೆ, ದೈಹಿಕ ಆಕ್ರಮಣದ ಬಗ್ಗೆ ಮಾತ್ರ ಮೌನವಾಗಿದ್ದೇವೆ, ಏಕೆ? ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿ ಎಲ್ಲಿ ಅವಮಾನ ಅನುಭವಿಸಿದ್ದರೋ ಅಲ್ಲಿಗೆ ಭೇಟಿ ನೀಡುವ ನಮ್ಮ ಪ್ರಧಾನಮಂತ್ರಿಯವರು, ಕುಡಿಯುವ ನೀರಿನ ಮೇಲೆ ದಲಿತರಿಗೆ ವಿಧಿಸಿದ್ದ ನಿಷೇಧದ ವಿರುದ್ಧ ಭಾರತರತ್ನ ಬಿ. ಆರ್.ಅಂಬೇಡ್ಕರ್ 1927ರಲ್ಲಿ ಮಹಾ ಚಳುವಳಿ ನಡೆಸಿದ್ದ ಮಹಾಡ್‌ಗೆ ಮಾತ್ರ ಭೇಟಿ ನೀಡುವುದಿಲ್ಲ. ಜಾನುವಾರು ಮಾಂಸದ ಹೆಸರಿನಲ್ಲಿ ದಲಿತರ ಮೇಲೆ ಇಂದು ನಡೆಯುತ್ತಿರುವ ದೌರ್ಜನ್ಯ, ಹಿಂಸೆ, ಆಕ್ರಮಣಗಳ ಬಗ್ಗೆ ಚಕಾರವೆತ್ತುತ್ತಿಲ್ಲ. ಹೈದರಾಬಾದಿನ ಕೇಂದ್ರೀಯ ವಿಶ್ವವಿದ್ಯಾಲಯದ ದಲಿತ ವಿದ್ಯಾರ್ಥಿ ರೋಹಿತ್ ವೇಮುಲನ ಆತ್ಮಹತ್ಯೆ ಇರಬಹುದು, ದೆಹಲಿಯ ಜವಹರಲಾಲ್ ನೆಹರು ವಿಶ್ವವಿದ್ಯಾಲಯದ ಕನ್ನಯ್ಯನ ಪ್ರಕರಣ ಇರಬಹುದು, ಗುಜರಾತಿನಲ್ಲಿ ದಲಿತ ಯುವಕರ ಮೇಲೆ ಗೋರಕ್ಷಣಾ ಪಡೆ ನಡೆಸಿ ಪೈಶಾಚಿಕ ಕೃತ್ಯವಿರಬಹುದು--- ಇವೆಲ್ಲ ಏನನ್ನು ತೋರಿಸುತ್ತವೆ?

ಈಗಾಗಲೆ ಹೇಳಿದಂತೆ ಗಾಂಧೀಜಿ ಅವರ ಬದುಕು, ಬರಹ, ಸಂದೇಶ ಜಾಗತಿಕ ಸಂಗತಿಗಳಾಗಿವೆ. ಅವರ ಹೆಸರನ್ನು ಹೇಳಿದರೆ ಜಗತ್ತಿನಲ್ಲಿ ಎಲ್ಲರಿಗೂ ಅರ್ಥವಾಗುತ್ತದೆ. ಅದಕ್ಕಾಗಿ ನಮ್ಮ ರಾಜಕೀಯ ಧುರೀಣರು ವಿದೇಶಗಳಲ್ಲಿ ಗಾಂಧೀಜಿ ಹೆಸರನ್ನು ಪಠಿಸುತ್ತಾರೆ. ಆದರೆ ಇಂದಿನ ಭಾರತದಲ್ಲಿ ಆಳುವ ವರ್ಗವೇನಿದೆ ಅದು ಯಾರನ್ನು ತಮ್ಮ ಗುರುಗಳೆಂದು ಗುರುತಿಸಿಕೊಳ್ಳುತ್ತಿದೆಯೋ, ಯಾವ ಸಂಘಟನೆಯ ಜೊತೆಯಲ್ಲಿ ತಮ್ಮನ್ನು ಗುರುತಿಸಿಕೊಳ್ಳುತ್ತದೆಯೋ ಅದರ ಲೀಡರುಗಳು ವಿದೇಶಗಳಲ್ಲಿ ಅಪರಿಚಿತರು. ಅವರುಗಳ ಹೆಸರನ್ನು ವಿದೇಶಗಳಲ್ಲಿ ನಮ್ಮ ಸನಾತನಿಗಳೂ ಹೇಳುವುದು ಸಾಧ್ಯವಿಲ್ಲ. ಅನಿವಾರ್ಯವಾಗಿ ಅವರು ಗಾಂಧೀಜಿ ಹೆಸರನ್ನು ಬಳಸಿಕೊಳ್ಳುತ್ತಾರೆ. ಅವರಿಗೆ ಗಾಂಧೀಜಿ ಅವರ ಹೆಸರನ್ನು ಹೇಳದೆ ಅನ್ಯ ಮಾರ್ಗವಿಲ್ಲ. ಆದರೆ ವಿದೇಶಗಳಲ್ಲಿ ಅವರ ಹೆಸರನ್ನು ಜಪ ಮಾಡುವ, ಅವರ ಅವಮಾನ ಅನುಭವಿಸಿದ್ದ ಸ್ಥಳಗಳಿಗೆ ಭೇಟಿ ನೀಡುವ ಜನರು ದೇಶದಲ್ಲಿ ಗಾಂಧೀಜಿ ಮೌಲ್ಯಗಳ ಬಗ್ಗೆ ಮಾತನಾಡುವುದಿಲ್ಲ. ಇಂದು ಆಳುವ ವರ್ಗಕ್ಕೆ ಗಾಂಧೀಜಿ ಹೆಸರು ಮುಖ್ಯವೇ ವಿನಾ ಅವರು ಬಿತ್ತಿ ಹೋಗಿರುವ ಮೌಲ್ಯಗಳಲ್ಲ. ಅದರಲ್ಲೂ ಇವರಿಗೆ ಗಾಂಧೀಜಿ ಸ್ವದೇಶಕ್ಕಿಂತ ವಿದೇಶಗಳಲ್ಲಿ ಮಾತ್ರ ಮುಖ್ಯರಾಗಿರುವಂತೆ ಕಾಣುತ್ತಿದೆ. ಇಂದು ನಮ್ಮ ಸಮಾಜದಲ್ಲಿ ಅಸಮಾನತೆಗೆ ಪೋಷಣೆ ದೊರೆಯುತ್ತಿದೆಯೇ ವಿನಾ ಸಮಾನತೆಗಲ್ಲ. ಮಾನವೀಯತೆಯು ಕೂಡ ಸನಾತನತೆಯ ಮುಂದೆ ಅರ್ಥರಹಿತ ಸಂಗತಿಯಾಗಿ ಬಿಟ್ಟಿದೆ.

ದಲಿತರ ರಕ್ಷಣೆಗೆ ಮ್ಯಾಕ್ಸಿಮಮ್ ಗೌರ್ವನಮೆಂಟಿನ ಅಗತ್ಯವಿದೆ

ಗಾಂಧೀಜಿಗೆ ಯಾವುದು ಅತ್ಯಂತ ಅಭಿಮಾನದ ಸಂಗತಿಯಾಗಿತ್ತೋ ಆ ದಲಿತರ ಮೇಲೆ ನಮ್ಮ ಸಮಾಜದಲ್ಲಿ ಇಂದು ಅವ್ಯಾಹತವಾಗಿ ದೌರ್ಜನ್ಯ ಏನು ನಡೆಯುತ್ತಿದೆ ಅವುಗಳ ಬಗ್ಗೆ ಆಳುವ ವರ್ಗ ಚರ್ಚೆ ಮಾಡಲು ಸಿದ್ಧವಿಲ್ಲ ಮತ್ತು ಅಂತಹ ದೌರ್ಜನ್ಯವೆಸಗಿದವರ ವಿರುದ್ಧ ಕ್ರಮ ತೆಗೆದುಕೊಳ್ಳುವುದರಲ್ಲೂ ಮೀನಮೇಷ ಎಣಿಸಲಾಗುತ್ತಿದೆ. ಜಾನುವಾರುಗಳ ಪ್ರಾಣದ ಮುಂದೆ ದಲಿತರ ಜೀವಕ್ಕೆ ಯಾವುದೇ ಬೆಲೆಯಿಲ್ಲದಂತಾಗಿದೆ. ಮಹಾರಾಷ್ಟ್ರದಲ್ಲಿ ವಾಶಿಮ್ ಜಿಲ್ಲೆಯ ಕೂಲಂಬೇಶ್ವರ ಎಂಬ ಹಳ್ಳಿಯಲ್ಲಿ ದಲಿತ ಹೆಣ್ಣು ಮಗಳು ಅನುಭವಿಸಿದ್ದೇನು? ಆಕೆಗೆ ಊರಿನ ಬಾವಿಯಲ್ಲಿ ಕುಡಿಯುವ ನೀರನ್ನು ಸೇದಲು ಬಿಡಲಿಲ್ಲ. ಈ ಅವಮಾನವನ್ನು ಸಹಿಸಲಾಗದೆ ಆಕೆಯ ಗಂಡ ಏಕಾಂಗಿಯಾಗಿ ಬಾವಿಯನ್ನು ತೋಡಿ ದಲಿತರಿಗೆಲ್ಲ ನೀರನ್ನು ಒದಗಿಸುವ ಕೆಲಸ ಮಾಡಿದ. ಈ ಬಗೆಯಲ್ಲಿ ದಲಿತ ಹೆಣ್ಣು ಮಗಳಿಗೆ ನೀರನ್ನು ನಿಷೇಧಿಸಿದ ಗ್ರಾಮದ ಉನ್ನತ ವರ್ಗದ ಜನರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರತಿಯಾಗಿ ಜಿಲ್ಲಾಡಳಿತವು ಏಕಾಂಗಿಯಾಗಿ ಬಾವಿ ತೋಡಿದ ದಲಿತ ಯುವಕನಿಗೆ ಗೌರವ ಸಲ್ಲಿಸುವ ಕೆಲಸ ಮಾಡಿದೆ. ಇದರ ಒಳಾರ್ಥವೇನು? ಇದರ ಒಳಾರ್ಥವೆಂದರೆ ದಲಿತರು ತಮ್ಮ ಸಮಸ್ಯೆಗಳನ್ನು ಇನ್ನು ಮೇಲೆ ತಾವೇ ಬಗೆಹರಿಸಿಕೊಳ್ಳಬೇಕು ಎಂಬುದಾಗಿದೆ. ಅಸ್ಪೃಶ್ಯತೆಯು ಇಂದು ಶಿಕ್ಷಾರ್ಹವಾಗಿ ಉಳಿದಿಲ್ಲ. ಅದು ಶಾಸನದಲ್ಲಿ ಶಿಕ್ಷಾರ್ಹ. ಆದರೆ ಆಚರಣೆಯಲ್ಲಿ ಅದರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಆಳುವ ವರ್ಗ ಸಿದ್ಧವಿಲ್ಲ. ಈ ರೀತಿಯಲ್ಲಿ ಅಮಾನವೀಯ ಆಚರಣೆಯಾದ ಅಸ್ಪೃಶ್ಯತೆಗೆ ಒಂದು ರೀತಿಯಲ್ಲಿ ಕುಮ್ಮಕ್ಕು ಇಂದು ದೊರೆಯುತ್ತಿದೆ.

ಗೋವುಗಳ ರಕ್ಷಣೆಯು ಮುಖ್ಯ. ಆದ-ರೆ ಇಂದು ನಾವು ಒಪ್ಪಿಕೊಂಡಿರುವ ಅಭಿವೃದ್ಧಿ ಮಾದರಿಯಲ್ಲಿ ಗೋವುಗಳಿಗೆ ಎಲ್ಲಿದೆ ಸ್ಥಾನ! ನಮ್ಮ ಸರ್ಕಾರ ಇಂದು ಬೃಹತ್ ಪ್ರಮಾಣದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯನ್ನು ಜಾರಿಗೊಳಿಸಿದೆ. ಗಾಂಧೀಜಿ 'ಹಳ್ಳಿಗಳಿಗೆ ಹೋಗೋಣ' ಎಂದು ಕರೆ ನೀಡಿದ್ದರೆ ಇಂದು ನಮ್ಮ ಸರ್ಕಾರ 'ನಗರಗಳಿಗೆ ನಡೆಯಿರಿ' ಎಂದು ಕರೆ ಕೊಡುತ್ತಿರುವಂತೆ ಕಾಣುತ್ತದೆ. ನಮ್ಮ ಕೇಂದ್ರ ಸರ್ಕಾರವು ಅನುಸರಿಸುತ್ತಿರುವ 'ಮಿನಿಮಮ್ ಗೌರ್ವನಮೆಂಟ್: ಮ್ಯಾಕ್ಸಿಮಮ್ ಗೌರ್ವನೆನ್ಸ್' ನೀತಿಯಲ್ಲಿ ದಲಿತರ ರಕ್ಷಣೆ ಹೇಗೆ ಸಾಧ್ಯ? ಇಂದು ಸರ್ಕಾರವಿರುವುದು ಡಿಜಿಟಲ್ ಇಂಡಿ-ಯಾಕ್ಕೆ, ಸ್ಟಾರ್ಟ್ ಅಪ್‌ಗಳಿಗೆ, ಸ್ಟಾಂಡ್ ಅಪ್‌ಗಳಿಗೆ ಎಂಬುದು ರಹಸ್ಯವಾಗೇನು ಉಳಿದಿಲ್ಲ. ಇಂದು ನಾವು ಅತ್ಯಂತ ಹೆಮ್ಮೆಯಿಂದ ಕಟ್ಟುತ್ತಿರುವ ಸ್ಮಾರ್ಟ್ ಸಿಟಿಗಳಲ್ಲಿ ಗೋವುಗಳಿಗೆ ಎಲ್ಲಿದೆ ಸ್ಥಾನ? ಸದರಿ ಯೋಜನೆಯಲ್ಲಿ ಗೋವುಗಳ ಸಾಕಣಿಕೆಗೆ ಅವಕಾಶ ನೀಡಿದಂತೆ ಕಾಣುವುದಿಲ್ಲ. ಗೋರಕ್ಷಣೆ ಅನ್ನುವುದು ದಲಿತರನ್ನು, ಅಲ್ಪಸಂಖ್ಯಾತರನ್ನು ದಮನ ಮಾಡಲು ಇರುವ ಆಯುಧದಂತೆ ಮಾತ್ರ ಕಾಣುತ್ತಿದೆ. ಈ ಬಗೆಯ ದ್ವಂದವನ್ನು ನಾವು ತೊರೆಯಬೇಕಾಗಿದೆ. ವಿದೇಶಗಳಲ್ಲಿ ಒಂದು ಬಗೆಯ ಮಾತು, ಸ್ವದೇಶದಲ್ಲಿ ಮತ್ತೊಂದು ಬಗೆಯ ನಡೆ ಸರಿಯಲ್ಲ. ಈ ದೇಶದ ಸರಿಸುಮಾರು 25 ಕೋಟಿ ದಲಿತರನ್ನು ಕಡೆಗಣಿಸಿ, ಅವರನ್ನು ದಮನ ಮಾಡಿ ದೇಶವನ್ನು ಕಟ್ಟುವುದು ಸಾಧ್ಯವಿಲ್ಲ.

'ಸಬ್ ಕಾ ಸಾತ್: ಸಬ್ ಕಾ ವಿಕಾಸ್' ಅನ್ನುವುದು ಬರಿ ಘೋಷಣೆಯಾಗಬಾರದು. ಈ ಹಿಂದೆ ಇಂತಹ ಅದೆಷ್ಟೋ ಘೋಷಣೆಗಳನ್ನು ನಾವು ಕೇಳಿದ್ದೇವೆ. ಉದಾಹರಣೆಗೆ ಗರೀಬಿ ಹಟಾವೋ ಘೋಷಣೆ ಕೂಗಿ ನಲವತ್ತೈದು ವರ್ಷಗಳಾದವು. ಆದರೆ ಗರೀಬಿಯನ್ನು ಅಳಿಸಿ ಹಾಕುವುದು ನಮಗೆ ಸಾಧ್ಯವಾಗಿಲ್ಲ. ಘೋಷಣೆಗಳಿಂದ, ಉದ್ವೇಗದ-ಉನ್ಮಾದದ ಭಾಷಣಗಳಿಂದ, ಪಾರ್ಲಿಮೆಂಟಿನ ದ್ವಾರದ ಬಳಿ ಸಾಷ್ಟಾಂಗ ನಮಸ್ಕಾರ ಮಾಡುವುದರಿಂದ ಬಡತನದ ನಿವಾರಣೆ, ಅಸ್ಪೃಶ್ಯತೆಯ ನಿವಾರಣೆ, ದಲಿತರ ರಕ್ಷಣೆ ಸಾಧ್ಯವಿಲ್ಲ. ನಮ್ಮ ಸಮಾಜವು 'ಮಿನಿಮಮ್ ಗೌರ್ವನಮೆಂಟ್, ಮ್ಯಾಕ್ಸಿಮಮ್ ಗೌರ್ವನೆನ್ಸ್' ನೀತಿಯನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವ ಹಂತಕ್ಕೆ ಬಂದಿಲ್ಲ. ನಮ್ಮಲ್ಲಿ ದಲಿತರ ರಕ್ಷಣೆಗೆ ಮ್ಯಾಕ್ಸಿಮಮ್ ಗೌರ್ವನಮೆಂಟಿನ ಅಗತ್ಯವಿದೆ. ಸಾಮಾಜಿಕ ನ್ಯಾಯವು ನಮ್ಮ ಅಭಿವೃದ್ಧಿ ಮಾದರಿಯ ಮೂಲಾಧಾರವಾಗ ಬೇಕಾಗಿದೆ. ●

ನಮ್ಮ ಬಿರು-ಟ್ವೀಟ್

@PSainath_org

ಬೀರ್ ಕಾರ್ಖಾನೆಗಳು ಲೀಟರಿಗೆ ಬರಿಯ 4 ಪೈಸೆ ಕೊಡುತ್ತವೆ. ಔರಂಗಾಬಾದಿನ ಮಹಿಳೆ ಲೀಟರಿಗೆ 45 ಪೈಸೆಯಿಂದ 1 ರೂ. ವರೆಗೆ ತೆರಬೇಕು.

- ಪಿ ಸಾಯಿನಾಥ

ಪಶ್ಚಿಮ ಬಂಗಾಲದೊಂದಿಗೆ ಸೌಹಾರ್ದ

ಪ್ರಜಾಪ್ರಭುತ್ವದ ಮೇಲೆ ಹಿಂಸಾಚಾರಗಳು ನಿಲ್ಲಬೇಕು



ಪಶ್ಚಿಮ ಬಂಗಾಲದಲ್ಲಿ ಸಿಪಿಐ(ಎಂ) ಮತ್ತು ಎಡರಂಗ ಹಾಗೂ ಅವರನ್ನು ಬೆಂಬಲಿಸುವ ಜನತೆ ಮೇಲೆ ವಿಧಾನ ಸಭಾ ಚುನಾವಣೆಗಳು ಮುಗಿದ ನಂತರ ತೃಣಮೂಲ ಕಾಂಗ್ರೆಸಿನಿಂದ ಅಭೂತಪೂರ್ವ ಹಿಂಸಾಚಾರವನ್ನು ಮತ್ತು ದಾಳಿಗಳನ್ನು ಎದುರಿಸುತ್ತಿದ್ದಾರೆ. ಈ ವ್ಯಾಪಕ ಹಿಂಸಾಚಾರ ಮತ್ತು ಭಯೋತ್ಪಾದನೆಯ ಸ್ವರೂಪವನ್ನು ರಾಜ್ಯದ ಹೊರಗೆ ಪೂರ್ಣವಾಗಿ ಅರ್ಥೈಸಿಕೊಳ್ಳಲಾಗಿಲ್ಲ, ಏಕೆಂದರೆ ಟಿಎಂಸಿಯ ವಿಜಯದ ನಂತರ ಮುಖ್ಯಧಾರೆಯ ಮಾಧ್ಯಮಗಳು ಈ ಘಟನೆಗಳನ್ನು ವರದಿ ಮಾಡುವುದನ್ನು ನಿಲ್ಲಿಸಿವೆ.

> ಭಾರತದ ಬೇರಾವ ಭಾಗದಲ್ಲೂ ಒಂದು ರಾಜಕೀಯ ಸಂಘಟನೆಯನ್ನು ಮತ್ತು ಅದರ ಆಂದೋಲನವನ್ನು ನಿರ್ಮೂಲ ಮಾಡುವ ಇಂತಹ ಯೋಜಿತ ಮತ್ತು ವ್ಯವಸ್ಥಿತ ದಾಳಿ ನಡೆದಿಲ್ಲ. ಪಶ್ಚಿಮ ಬಂಗಾಲದಲ್ಲಿ ಈಗ ನಡೆಯುತ್ತಿರುವುದು ಪ್ರಜಾಪ್ರಭುತ್ವದ ಮೇಲೆ, ನಾಗರಿಕರ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಮತ್ತು ಘನತೆಯಿಂದ ಬದುಕು ನಡೆಸುವ ಅವರ ಹಕ್ಕಿನ ಮೇಲೆ ಒಂದು ಅಮಾನುಷ ಮತ್ತು ಪೂರ್ವಯೋಜಿತ ದಾಳಿ.
> ಸಿಪಿಐ(ಎಂ) ಮತ್ತು ಎಡರಂಗ ಮತ್ತು ಪಶ್ಚಿಮ ಬಂಗಾಲದ ಇತರ ಪ್ರಜಾಪ್ರಭುತ್ವವಾದಿ ಶಕ್ತಿಗಳು ಈ ದಾಳಿಯನ್ನು ಧೈರ್ಯದಿಂದ ಎದುರಿಸುತ್ತಿವೆ.
> ಅವರಿಗೆ ದೇಶದ ಎಡ, ಪ್ರಜಾಪ್ರಭುತ್ವವಾದಿ ಮತ್ತು ಪ್ರಗತಿಪರ ಶಕ್ತಿಗಳ ಪೂರ್ಣ ಬೆಂಬಲ ಮತ್ತು ಸೌಹಾರ್ದ ಬೇಕಾಗಿದೆ.

ಈ ಮುಂದುವರೆಯುತ್ತಿರುವ ಹಿಂಸಾಚಾರ ಮತ್ತು ಪ್ರಜಾಪ್ರಭುತ್ವದ ಮೇಲಿನ ನೇರ ದಾಳಿಯತ್ತ ಗಮನ ಸೆಳೆಯಲಿಕ್ಕಾಗಿ ಸಿಪಿಐ(ಎಂ) ಆಗಸ್ಟ್ 1ರಿಂದ 7 ರವರೆಗೆ ಪಶ್ಚಿಮ ಬಂಗಾಲದ ಪಕ್ಷ ಮತ್ತು ಎಡರಂಗದೊಡನೆ ಸೌಹಾರ್ದ ವ್ಯಕ್ತಪಡಿಸುವ ವಾರಾಚರಣೆಯನ್ನು ನಡೆಸುತ್ತಿದೆ.

ಐದು ವರ್ಷಗಳ ಹಿಂದೆ ಮೇ 2011ರಲ್ಲಿ ವಿಧಾನಸಭಾ ಚುನಾವಣೆಗಳಲ್ಲಿ ಎಡರಂಗ ಸರಕಾರ ಸೋತು ಮಮತಾ ಬ್ಯಾನರ್ಜಿ ಸರಕಾರ ಅಧಿಕಾರ ವಹಿಸಿಕೊಂಡಂದಿನಿಂದ ಪಶ್ಚಿಮ ಬಂಗಾಲ ಸತತ ಹಿಂಸಾಚಾರವನ್ನು ಮತ್ತು ಎಡ ಆಂದೋಲನವನ್ನು ದಮನ ಮಾಡುವ ಪ್ರಯತ್ನಗಳನ್ನು ಕಾಣುತ್ತಿದೆ. ಆ ಹಿಂಸಾಚಾರದ ಸರಣಿಯನ್ನು ಈ ಮೇ ತಿಂಗಳಲ್ಲಿ ವಿಧಾನ ಸಭಾ ಚುನಾವಣೆಗಳ ಫಲಿತಾಂಶಗಳ ನಂತರ ತೀವ್ರಗೊಳಿಸಲಾಗಿದೆ ಮತ್ತು ವಿಸ್ತರಿಸಲಾಗಿದೆ.

ಚುನಾವಣಾ ವಿಜಯದ ಪ್ರಯೋಜನ ಪಡೆದು ರಾಜ್ಯದಲ್ಲಿ ಸಿಪಿಐ(ಎಂ) ಮತ್ತು ಎಡ ಸಂಘಟನೆಗಳನ್ನು ನಿರ್ಮೂಲ ಮಾಡಲು ತೃಣಮೂಲ ಕಾಂಗ್ರೆಸ್ ಈ ಪ್ರಸಕ್ತ ದಾಳಿಯನ್ನು ಯೋಜಿಸಿದೆ. ಇತ್ತೀಚಿನ ದಾಳಿಗಳನ್ನು ಎರಡು ಸ್ಪಷ್ಟ ಉದ್ದೇಶಗಳೊಂದಿಗೆ ರೂಪಿಸಲಾಗಿದೆ–ಎಡರಂಗ ಒಳ್ಳೆಯ ಫಲಿತಾಂಶಗಳನ್ನು ತೋರಿಸಿದ ಕಡೆಗಳಲ್ಲಿ ಭಯೋತ್ಪಾದನೆಯ ಮೂಲಕ ಜನಗಳು ತಮಗೆ ಅಧೀನವಾಗುವಂತೆ ಮಾಡುವುದು, ಮತ್ತು ಎರಡನೆಯದಾಗಿ, ಪಕ್ಷವನ್ನು ಧ್ವಂಸ ಮಾಡಿ ಕಾರ್ಮಿಕ ಸಂಘಗಳನ್ನು ಮತ್ತು ಸಾಮೂಹಿಕ ಸಂಘಟನೆಗಳನ್ನು ವಶಪಡಿಸಿಕೊಳ್ಳುವುದು. ಈ ಉದ್ದೇಶದಿಂದಲೇ ಎಡಪಕ್ಷಗಳ ಮತ್ತು ಸಾಮೂಹಿಕ ಸಂಘಟನೆಗಳ 1000ಕ್ಕೂ ಹೆಚ್ಚು ಕಚೇರಿಗಳನ್ನು ಧ್ವಂಸ ಮಾಡಲಾಗಿದೆ, ಹಾಳುಗೆಡವಲಾಗಿದೆ ಅಥವ ವಶಪಡಿಸಿಕೊಳ್ಳಲಾಗಿದೆ.

12 ಸಿಪಿಐ(ಎಂ) ಮತ್ತು ಎಡರಂಗದ ಸದಸ್ಯರು ಹಾಗೂ ಬೆಂಬಲಿಗರನ್ನು ಚುನಾವಣೆಯ ವೇಳೆಯಲ್ಲಿ ಮತ್ತು ನಂತರ ಹತ್ಯೆ ಮಾಡಲಾಗಿದೆ. ಇದರೊಂದಿಗೆ 2011ರ ವಿಧಾನಸಭಾ ಚುನಾವಣೆಗಳ ಕಾಲದಿಂದ ಹತ್ಯೆಯಾದ ಕಾರ್ಯಕರ್ತರು ಮತ್ತು ಬೆಂಬಲಿಗರ ಸಂಖ್ಯೆ 186ಕ್ಕೆ ಏರಿದೆ. 3000ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಈ ದಾಳಿಗಳಲ್ಲಿ ಮಹಿಳೆಯರ ಮೇಲೆ ವಿಶೇಷ ಗುರಿಯಿಡಲಾಗಿದೆ, 31 ಅತ್ಯಾಚಾರಗಳು, 746 ದೈಹಿಕ ದಾಳಿ ಮತ್ತು ಲೈಂಗಿಕ ಕಿರುಕುಳದ ಘಟನೆಗಳು ವರದಿಯಾಗಿವೆ. ದೈಹಿಕ ದಾಳಿಗಳಲ್ಲಿ ಮಕ್ಕಳನ್ನೂ ಬಿಟ್ಟಿಲ್ಲ.

ಎಡಶಕ್ತಿಗಳ ಬೆಂಬಲಕ್ಕೆ ನಿಂತಿರುವ ಸಾಮಾನ್ಯ ಬೆಂಬಲಿಗರು ಮತ್ತು ದುಡಿಯುವ ಜನಗಳ ಮೇಲೆ ದಾಳಿಗಳನ್ನು ಗುರಿ ಮಾಡಲಾಗಿದೆ. ಸಾಮೂಹಿಕ ಸಂಘಟನೆಗಳ ಕಚೇರಿಗಳಲ್ಲಿ ಹಲವು ಜನಗಳ ಬೆಂಬಲದಿಂದ ನಿರ್ಮಾಣವಾದವುಗಳು. ಅವುಗಳನ್ನು ಧ್ವಂಸ ಮಾಡಿ ಅವರು ದಿಡಿಯುವ ಜನಗಳ ಹಕ್ಕುಗಳನ್ನು ದಮನ ಮಾಡುವ ಪ್ರಯತ್ನ ನಡೆಸಿದ್ದಾರೆ.

ಭಯೋತ್ಪಾದನೆ ಉಂಟು ಮಾಡುವ ಇನ್ನೊಂದು ವಿಧಾನವೆಂದರೆ ಕುಟುಂಬಗಳನ್ನು ಅವರ ಮನೆಗಳಿಂದ ಹೊಡೆದೋಡಿಸುವುದು. ಚುನಾವಣಾ ಫಲಿತಾಂಶಗಳ ನಂತರ ಕಳೆದ ಎರಡು ತಿಂಗಳಲ್ಲಿ 11000 ಜನ ತಮ್ಮ ವಾಸಸ್ಥಳಗಳನ್ನು ಬಿಟ್ಟು ಹೋಗುವಂತೆ ಮಾಡಲಾಗಿದೆ.

ಮತ್ತೊಂದು ಸಾಧನವೆಂದರೆ ಎಡ ಬೆಂಬಲಿಗರು ಮತ್ತು ಜನಸಾಮಾನ್ಯರ ಮೇಲೆ ದಂಡ ವಿಧಿಸುವುದು. ಹೀಗೆ ಕಿತ್ತುಕೊಂಡ ಹಣ ಮತ್ತು ಬಲವಂತದಿಂದ ದಂಡ ವಸೂಲಿಯ ಮೊತ್ತ ಜುಲೈ ಅಂತ್ಯದ ವೇಳೆಗೆ 3.5 ಕೋಟಿ ರೂ.ಗಳನ್ನು ದಾಟಿದೆ.

ಕಮ್ಯುನಿಸ್ಟರು ಮತ್ತು ಎಡಪಂಥೀಯರನ್ನು ಮೂಲೋತ್ಪಾಟನೆ ಮಾಡುವ ಫ್ಯಾಸಿಸ್ಟ್ ಮಾದರಿಯ ವಿಧಾನಗಳಲ್ಲಿ ಪಕ್ಷದ ಮತ್ತು ಎಡರಂಗದ ಬೆಂಬಲಿಗರಿಗೆ ಜೀವನಾಧಾರಗಳು ಇಲ್ಲದಂತೆ ಮಾಡುವುದೂ ಸೇರಿದೆ. ಎಡ ಬೆಂಬಲಿಗರಿಗೆ ಸೇರಿದ ಸಾವಿರಾರು ಅಂಗಡಿಗಳನ್ನು ಲೂಟಿ ಮಾಡಲಾಗಿದೆ ಅಥವ ಹಾಳುಗೆಡವಲಾಗಿದೆ. ಕೆಲವೆಡೆಗಳಲ್ಲಿ ರೈತರು ತಮ್ಮ ಸ್ವಂತ ಹೊಲಗಳಲ್ಲಿ ಬೇಸಾಯ ಮಾಡಲು ಅವಕಾಶವಾಗದಂತೆ ಮಾಡಲಾಗಿದೆ. ಕೆಲವು ಪ್ರದೇಶಗಳಲ್ಲಿ ಪಟ್ಟಾ ಹೊಂದಿದವರು ಮತ್ತು ಭಾಗ ಬೆಳೆಗಾರರನ್ನು ಒಕ್ಕಲೆಬ್ಬಿಸಲಾಗಿದೆ. ಇಡೀ–ಇಡೀ ಹಳ್ಳಿಗಳ ಮೇಲೆಯೇ ದಾಳಿ ಮಾಡಿ ಸುಟ್ಟು ಹಾಕಲಾಗಿದೆ. 70 ಹಳ್ಳಿಗಳು ಇಂತಹ ದಾಳಿಗಳಿಗೆ ತುತ್ತಾಗಿವೆ.

ಭಾರತದ ಬೇರಾವ ಭಾಗದಲ್ಲೂ ಒಂದು ರಾಜಕೀಯ ಸಂಘಟನೆಯನ್ನು ಮತ್ತು ಅದರ ಆಂದೋಲನವನ್ನು ನಿರ್ಮೂಲ ಮಾಡುವ ಇಂತಹ ಯೋಜಿತ ಮತ್ತು ವ್ಯವಸ್ಥಿತ ದಾಳಿ ನಡೆದಿಲ್ಲ. ಪಶ್ಚಿಮ ಬಂಗಾಲದಲ್ಲಿ ಈಗ ನಡೆಯುತ್ತಿರುವುದು ಪ್ರಜಾಪ್ರಭುತ್ವದ ಮೇಲೆ, ನಾಗರಿಕರ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಮತ್ತು ಘನತೆಯಿಂದ ಬದುಕು ನಡೆಸುವ ಅವರ ಹಕ್ಕಿನ ಮೇಲೆ ಒಂದು ಅಮಾನುಷ ಮತ್ತು ಪೂರ್ವಯೋಜಿತ ದಾಳಿ. ಪಶ್ಚಿಮ ಬಂಗಾಲದಲ್ಲಿ ಟಿಎಂಸಿ ಆಳ್ವಿಕೆಯಲ್ಲಿ ದೇಶದ ನಾಗರಿಕರಿಗೆ ಕೊಟ್ಟಿರುವ ಯಾವ ಮೂಲಭೂತ ಹಕ್ಕು ಕೂಡ ಸುರಕ್ಷಿತವಾಗಿಲ್ಲ.

ಸಿಪಿಐ(ಎಂ) ಮತ್ತು ಎಡರಂಗ ಮತ್ತು ಪಶ್ಚಿಮ ಬಂಗಾಲದ ಇತರ ಪ್ರಜಾಪ್ರಭುತ್ವವಾದಿ ಶಕ್ತಿಗಳು ಈ ದಾಳಿಯನ್ನು ಧೈರ್ಯದಿಂದ ಎದುರಿಸುತ್ತಿವೆ. ಮತ್ತು ಈ ದಾಳಿಯನ್ನು ಪ್ರತಿರೋಧಿಸಲು ಜನಗಳನ್ನು ಅಣಿನೆರೆಸುತ್ತಿವೆ. ಬಡ ರೈತರು, ಕೃಷಿಕೂಲಿಕಾರರು, ಆದಿವಾಸಿಗಳು ಮತ್ತು ಕಾರ್ಮಿಕ ವರ್ಗದ ಸಾವಿರಾರು ಮಂದಿ, ಮಹಿಳಾ, ವಿದ್ಯಾರ್ಥಿ ಮತ್ತು ಯುವಜನ ಕಾರ್ಯಕರ್ತರು ಈ ಕಷ್ಟಕೋಟಲೆಗಳಿಗೆ ಎದೆಗೊಟ್ಟು ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗೆ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಧ್ಯೇಯ ಸಾಧನೆಗಳಿಗೆ ಎದ್ದು ನಿಂತಿರುವ ಅಸಂಖ್ಯ ಉದಾಹರಣೆಗಳಿವೆ. ಅವರಿಗೆ ದೇಶದ ಎಡ, ಪ್ರಜಾಪ್ರಭುತ್ವವಾದಿ ಮತ್ತು ಪ್ರಗತಿಪರ ಶಕ್ತಿಗಳ ಪೂರ್ಣ ಬೆಂಬಲ ಮತ್ತು ಸೌಹಾರ್ದ ಬೇಕಾಗಿದೆ. ಈ ಸೌಹಾರ್ದ ಪ್ರಚಾರಾಂದೋಲನ ಈ ಸಂದೇಶವನ್ನು ದೇಶಾದ್ಯಂತ ಜನತೆಯ ಬಳಿ ಒಯ್ಯುತ್ತದೆ.



ಪ್ರಕಾಶ ಕಾರಟ್

ಪರ್‍ರಿಕರ್ ಮತ್ತು ಆತನ ಬಳಗ

> ದೇಶದ ರಕ್ಷಣಾ ಮಂತ್ರಿಯ ಸ್ಥಾನದಲ್ಲಿರುವಾತ ತನ್ನಂತವರ ಬ್ರಾಂಡಿನ ದೇಶಪ್ರೇಮ ಮತ್ತು ಹಿಂದುತ್ವವನ್ನು ಒಪ್ಪದವರಿಗೆ ಒಂದು ಪಾಠ ಕಲಿಸಬೇಕು ಎಂದು ಮತಾಂಧರಿಗೆ ಪ್ರೋತ್ಸಾಹ ಕೊಟ್ಟಿದ್ದಾರೆ. ಇದು ಬಾಯಿ ತಪ್ಪಿ ಬಂದ ಮಾತೇನೂ ಅಲ್ಲ. ಆತ ಏನೇ ಆಧುನಿಕತೆಯ ಪ್ರದರ್ಶನ ಮಾಡಿದರೂ ಮೂಲತಃ ಆತನ ದೃಷ್ಟಿಕೋನ ಮತಾಂಧತೆ, ಕೋಮುವಾದ ಮತ್ತು ಕುರುಡು ದೇಶಭಕ್ತಿಯಿಂದ ಕೂಡಿದೆ. ಇದರ ಜೊತೆಗೆ ಅಮೆರಿಕಾ ಮತ್ತು ಅದರ ಸಾಮ್ರಾಜ್ಯಶಾಹಿ ಯೋಜನೆಯ ಎದುರು ಹಲ್ಲುಗಿಂಜುವ ಒಂದು ನಿಲುವು. ಮೋದಿ ಸಂಪುಟದಲ್ಲಿ ಇಂತವರದ್ದೇ ಮೇಲುಗೈ.

ರಕ್ಷಣಾ ಮಂತ್ರಿ ಮನೋಹರ ಪರ್‍ರೀಕರ್ ಮೋದಿ ಸರಕಾರಕ್ಕೇನಾಗಿದೆ ಎಂಬುದರ ಪ್ರತೀಕವಾಗಿದ್ದಾರೆ. ರಕ್ಷಣಾ ಮಂತ್ರಿಯಾಗಿ ಆತ ಕೇಂದ್ರ ಸರಕಾರದಲ್ಲಿ ಒಂದು ಮಹತ್ವದ ಸ್ಥಾನದಲ್ಲಿದ್ದಾರೆ. ಆದರೆ ಇದು ಆತ ಅಸಹಿಷ್ಣುತೆ ಮತ್ತು ಮತಾಂಧತೆಯ ವಿಷ ಉಗುಳದಂತೆ ತಡೆದಿಲ್ಲ; ಪಾಕಿಸ್ತಾನದ ವಿರುದ್ಧ ಜಗಳಗಂಟ ಹೇಳಿಕೆಗಳನ್ನು ಕೊಟ್ಟು ಸಶಸ್ತ್ರ ಪಡೆಗಳ ಇಮೇಜಿಗೆ ಕಳಂಕ ತರದಂತೆ ತಡೆದಿಲ್ಲ. ಇನ್ನೂ ಬೇಸರದ ಸಂಗತಿಯೆಂದರೆ, ಆತ ಭಾರತೀಯ ಸಶಸ್ತ್ರ ಪಡೆಗಳನ್ನು ಪೆಂಟಗನ್‌ನ ಅಡಿಯಾಳು ಮಿತ್ರನಾಗಿ ಪರಿವರ್ತಿಸುವ ಹಟ ತೊಟ್ಟಿರುವಂತೆ ಕಾಣುತ್ತದೆ.

ಪರ್‍ರಿಕರ್ ಒಂದಾದ ಮೇಲೊಂದರಂತೆ ಭಾರೀ ಟಿಪ್ಪಣಿಗಳನ್ನು ಮಾಡಿದ್ದಾರೆ. ಇತ್ತೀಚಿನ ವಿವಾದವೆಂದರೆ ನಟ ಅಮೀರ್ ಖಾನ್ ಮೇಲಿನ ದಾಳಿ, ಆತ ಭಂಡ, ಆತನಿಗೆ ಒಂದು ಪಾಠ ಕಲಿಸಬೇಕಾಗಿದೆ ಎಂಬ ಟಿಪ್ಪಣಿ. ಇದು ಆಮೀರ್ ಖಾನ್ ಕೆಲವು ಸಮಯದ ಹಿಂದೆ ದೇಶದಲ್ಲಿನ ಅಸಹಿಷ್ಣುತೆಯ ವಾತಾವರಣದಲ್ಲಿ ಈ ದೇಶದಲ್ಲಿರಬೇಕೇ ಎಂದು ತನ್ನ ಪತ್ನಿ ಕೇಳುತ್ತಿದ್ದಾಳೆ ಎಂಬ ಮಾತಿಗೆ ಟೀಕೆಯಾಗಿತ್ತು. ಅಮೀರ್ ಖಾನ್‌ರನ್ನು ಪ್ರಾಯೋಜಿಸಿದ್ದ ಒಂದು ಖಾಸಗಿ ಆನ್‌ಲೈನ್ ವ್ಯಾಪಾರೀ ಕಂಪನಿ ಆತನ ಪ್ರಾಯೋಜಕತ್ವವನ್ನು ರದ್ದು ಮಾಡುವಂತೆ ಪ್ರಚಾರ ನಡೆಸಿದವರನ್ನು ಪರ್‍ರಿಕರ್ ಹೊಗಳಿದ್ದಾರೆ.

ಈ ಮೂಲಕ ಪರ್‍ರಿಕರ್ 'ರಾಷ್ಟ್ರ–ವಿರೋಧಿಗಳು' ಎನ್ನಲಾಗುವವರ ವಿರುದ್ಧ ಬಲಪ್ರಯೋಗದ ಕ್ರಿಯೆಯನ್ನು ಅನುಮೋದಿಸಿದ್ದಾರೆ, ಮಾತ್ರವಲ್ಲ, ಅವರಂತವರ ಬ್ರಾಂಡಿನ ದೇಶಪ್ರೇಮ ಮತ್ತು ಹಿಂದುತ್ವವನ್ನು ಒಪ್ಪದವರಿಗೆ ಒಂದು ಪಾಠ ಕಲಿಸಬೇಕು ಎಂದು ಮತಾಂಧರಿಗೆ ಪ್ರೋತ್ಸಾಹವನ್ನೂ ಕೊಟ್ಟಿದ್ದಾರೆ. ಇದು ಬಾಯಿ ತಪ್ಪಿ ಬಂದ ಮಾತೇನೂ ಅಲ್ಲ ಎಂಬುದು ಆತನ ಈ ಹಿಂದಿನ ಸಾರ್ವಜನಿಕ ಹೇಳಿಕೆಗಳಿಂದ ಸ್ಪಷ್ಟವಾಗುತ್ತದೆ.

ಕಳೆದ ವರ್ಷ ಮೇ ತಿಂಗಳಲ್ಲಿ ರಕ್ಷಣಾ ಮಂತ್ರಿ "ನೀವು ಭಯೋತ್ಪಾದಕರನ್ನು ಭಯೋತ್ಪಾದಕರಿಂದಲೇ ತಟಸ್ಥಗೊಳಿಸಬೇಕು" ಎಂದು ಸಾರಿದ್ದರು. ಅದಕ್ಕೆ 'ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು' ಎಂಬ ನಾಣ್ಣುಡಿಯನ್ನು ಉದಹರಿಸಿದ್ದರು. ಇದು ಪಾಕಿಸ್ತಾನಕ್ಕೆ ಭಾರತ ಪ್ರಭುತ್ವ–ಪ್ರಾಯೋಜಿತ ಭಯೋತ್ಪಾದನೆಯನ್ನು ಪ್ರೋತ್ಸಾಹಿಸುತ್ತದೆ ಎಂದು ಹೇಳಿಕೊಳ್ಳಲು ಆಧಾರವನ್ನು ಕಲ್ಪಿಸಿ ಕೊಟ್ಟಿತ್ತು.

ನಂತರ ಆ ವರ್ಷ ಜೂನ್ ತಿಂಗಳಲ್ಲಿ ಭಾರತೀಯ ಸೇನೆಯ ಬಗ್ಗೆ ಗೌರವದ ಕೊರತೆಗೆ ಅದು ಕಳೆದ 40–50 ವರ್ಷಗಳಲ್ಲಿ ಯಾವುದೇ ಯುದ್ಧ ನಡೆಸದಿರುವುದು ಕಾರಣ ಎಂಬ ಹೌಹಾರುವಂತ ಹೇಳಿಕೆಯನ್ನು ಕೊಟ್ಟಿದ್ದರು. ಒಬ್ಬ ಮಿಲಿಟರಿ ಕಮಾಂಡರ್‌ನಿಮದ ಬಂದ ಪತ್ರಕ್ಕೆ ಒಬ್ಬ ಐಎಎಸ್ ಅಥವ ಬೇರೆ ಅಧಿಕಾರಿಗಳು ಗಮನ ಕೊಡದಿರುವುದು ಅದಕ್ಕೆ ಸಾಕ್ಷಿ ಎಂದಿದ್ದರು. ನೋಡಿ, ಇಲ್ಲೊಬ್ಬ ರಕ್ಷಣಾ ಮಂತ್ರಿಯಿದ್ದಾನೆ, ಸೇನಾಪಡೆ ಯುದ್ಧಕ್ಕೆ ಹೋಗದೆ ಗೌರವ ಪಡೆಯುವುದಿಲ್ಲ ಎಂದು ಆತ ಯಾವುದೇ ಅಳುಕಿಲ್ಲದೆ ಹೇಳುತ್ತಾನೆ! ಈ ಕುರುಡು ದೇಶಭಕ್ತಿಯ ನಿಲುವು ಸೇನೆಯಿರುವುದು ಶಾಂತಿ ಕಾಪಾಡಲು ಮತ್ತು ದೇಶದ ಗಡಿಗಳನ್ನು ರಕ್ಷಿಸಲು ಎಂಬ ಸತ್ಯಕ್ಕೆ ವಿರುದ್ಧವಾದದ್ದು.

ಇಂತಹ ರಕ್ಷಣಾ ಮಂತ್ರಿಯ ನೇತೃತ್ವದಲ್ಲಿ ಭಾರತ ಸದ್ಯದಲ್ಲಿಯೇ ಅಮೆರಿಕಾದೊಂದಿಗೆ 'ಸಾಗಾಣಿಕೆ ವಿನಿಮಯ ಒಪ್ಪಂದ ಪತ್ರ'(ಎಲ್‌ಇಎಂಒಎ) ಕ್ಕೆ ಸಹಿ ಹಾಕಲಿದೆ. ಇದರ ಫಲಿತಾಂಶವಾಗಿ ಭಾರತೀಯ ಸಶಸ್ತ್ರ ಪಡೆಗಳು ಅಮೆರಿಕಾ ಸಂಯುಕ್ತ ಸಂಸ್ಥಾನದ ಭೌಗೋಳಿಕ–ರಾಜಕೀಯ ಸಮರತಂತ್ರದ ಭಾಗವಾಗಲಿವೆ.

ಮನೋಹರ ಪರ್‍ರಿಕರ್ ಒಬ್ಬ ಐಐಟಿ ಹಳೆ ವಿದ್ಯಾರ್ಥಿ. ಆತ ಬಿಜೆಪಿ ಕಣ್ಣೋಟದ ಒಬ್ಬ ಆಧುನಿಕ ಪ್ರತಿಪಾದಕ ಎಂದು ಬಗೆಯಲಾಗಿತ್ತು. ಆದರೆ ರಕ್ಷಣಾ ಮಂತ್ರಿಯಾಗಿ ಆತನ ವರ್ತನೆ ಹೇಳುತ್ತಿರುವುದೇ ಬೇರೆ. ಆತ ಏನೇ ಆಧುನಿಕತೆಯ ಪ್ರದರ್ಶನ ಮಾಡಿದರೂ ಮೂಲತಃ ಆತನ ದೃಷ್ಟಿಕೋನ ಮತಾಂಧತೆ, ಕೋಮುವಾದ ಮತ್ತು ಕುರುಡು ದೇಶಭಕ್ತಿಯಿಂದ ಕೂಡಿದೆ. ಇದರ ಜೊತೆಗೆ ಅಮೆರಿಕಾ ಸಂಯುಕ್ತ ಸಂಸ್ಥಾನ ಮತ್ತು ಅದರ ಸಾಮ್ರಾಜ್ಯಶಾಹಿ ಯೋಜನೆಯ ಎದುರು ಹಲ್ಲುಗಿಂಜುವ ಒಂದು ನಿಲುವು.

ಮನೋಹರ್ ಪರ್‍ರಿಕರ್ ಒಂದು ಅಪವಾದವೇನಲ್ಲ. ಸಂಪುಟದಲ್ಲಿ ಆತನ ಬಳಗದವರದ್ದೇ ಮೇಲುಗೈ. ಒಂದರ್ಥದಲ್ಲಿ ಆತ ನರೇಂದ್ರ ಮೋದಿಯ ಪಡಿ ನೆರಳು. ●



ಕೋಮುವಾದದ ಅಪಾಯ ಮತ್ತು ಕೇಂದ್ರದಲ್ಲಿ ಅಧಿಕಾರ ನಡೆಸುವ ಬಿಜೆಪಿಯ ಪ್ರತಿಗಾಮಿ ಲಕ್ಷಣವೇ ಎಡ-ಕಾಂಗ್ರೆಸ್ ಮೈತ್ರಿಯ ಅಗತ್ಯಕ್ಕೆ ಕಾರಣವಾಗಿವೆ ಎಂಬ ಅಭಿಪ್ರಾಯವನ್ನು ಸಿಪಿಐ(ಎಂ)ನ ಹಿರಿಯ ಮುಖಂಡರಾದ **ಪ್ರಕಾಶ ಕಾರಟ್** ಈ ದೀರ್ಘ ಲೇಖನದಲ್ಲಿ ಪರಿಶೀಲಿಸಿದ್ದಾರೆ. ಇದು ಆಳುವ ವರ್ಗಗಳ ಈ ಎರಡು ಪ್ರಮುಖ ಪಕ್ಷಗಳಿಂದ ಸಮಾನ ಅಂತರ ಕಾಯ್ದುಕೊಳ್ಳುವ ಒಂದು ಪ್ರಶ್ನೆಯಲ್ಲ. ಬಿಜೆಪಿಯನ್ನು ಜನರಿಂದ ಪ್ರತ್ಯೇಕಿಸುವುದು ಮತ್ತು ಅದನ್ನು ಸೋಲಿಸುವುದು ಪ್ರಸಕ್ತ ಕಾಲಘಟ್ಟದ ತನ್ನ ಪ್ರಧಾನ ಕಾರ್ಯಭಾರ ಎಂದು ಸಿಪಿಐ(ಎಂ) ಕೂಡ ನಿರ್ಧರಿಸಿದೆ. ಆದರೆ ಇದನ್ನು ನವ-ಉದಾರವಾದಿ ನೀತಿಗಳನ್ನು ಆರಂಭಿಸಿರುವ ಕಾಂಗ್ರೆಸ್‌ನೊಂದಿಗೆ ಸೇರಿಕೊಂಡು ಸಾಧಿಸಲು ಆಗುವುದಿಲ್ಲ ಎಂಬುದು ಸಿಪಿಐ(ಎಂ)ನ ಸ್ಪಷ್ಟ ನಿಲುವು ಎನ್ನುತ್ತಾರೆ ಪ್ರಕಾಶ ಕಾರಟ್ ಕಳೆದ ವಾರ ಪ್ರಕಟವಾಗಿರುವ ಈ ಲೇಖನದ ಮೊದಲ ಭಾಗದಲ್ಲಿ ಪ್ರಕಾಶ ಕಾರಟ್ ವಿವರಿಸಿದ್ದರು.

ಕಾಂಗ್ರೆಸ್‌ನೊಂದಿಗೆ ರಾಜಕೀಯ ಮೈತ್ರಿ ಏಕೆ ಸಾಧ್ಯವಿಲ್ಲ?

ಸಿಪಿಐ (ಎಂ)ನ ರಾಜಕೀಯ ಧೋರಣೆಯ ವಿಮರ್ಶಕರಿಗೆ ಒಂದು ಉತ್ತರ

ತಮಿಳುನಾಡಿನಲ್ಲಿ ಡಿಎಂಕೆ ಅಥವ ಎಐಡಿಎಂಕೆಯೊಂದಿಗೆ ರಾಜಕೀಯ ಮೈತ್ರಿಕೂಟ ರಚಿಸಿಕೊಳ್ಳುವ ಈ ಹಿಂದಿನ ಕಾರ್ಯತಂತ್ರವನ್ನು ಈ ಬಾರಿ ಅನುಸರಿಸದ ಬಗ್ಗೆಯೂ ಕೆಲವು ಹಿತೈಷಿಗಳೆನ್ನುವವರು ವಿಮರ್ಶೆ ಮಾಡಿದ್ದಾರೆ. ಆದರೆ ಪಕ್ಷ ಸ್ವತಂತ್ರ ಬಲವರ್ಧನೆ ಮಾಡಿಕೊಳ್ಳದೆ ಹಾಗೂ ಬಲಿಷ್ಟ ಎಡ-ಪ್ರಜಾಸತ್ತಾತ್ಮಕ ಚಳವಳಿಯನ್ನು ಕಟ್ಟದೆ ಬಹುಕಾಲ ಬಾಳುವ ಚುನಾವಣಾ ಗಳಿಕೆಗಳನ್ನು ಮಾಡಲು ಸಾಧ್ಯವಿಲ್ಲ ಎಂಬ ವಾಸ್ತವತೆಯನ್ನು ಇವರು ಅರಿಯ ಬೇಕಾಗಿದೆ, ಇದು ತಮಿಳುನಾಡು ಮಾತ್ರವಲ್ಲ, ಅಸ್ಸಾಂ, ಬಿಹಾರ, ಆಂಧ್ರಪ್ರದೇಶ ಮತ್ತು ಒಡಿಶಾಗಳಂತಹ ರಾಜ್ಯಗಳಿಗೂ ಅನ್ವಯಿಸುತ್ತದೆ ಎಂದು ವಿವರಿಸುವ ಲೇಖಕರು ಈ ಬಗ್ಗೆ ಪಕ್ಷದ ಸಂಘಟನಾ ಪ್ಲೀನಮ್ ನಿರ್ಧಾರಕ್ಕೆ ಬಂದಿದ್ದು ದುಡಿಯುವ ವರ್ಗದ ಎಲ್ಲ ವಿಭಾಗಗಳ ಹಿತಗಳನ್ನು ಪ್ರತಿನಿಧಿಸುವ ಒಂದು ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯಕ್ಕಾಗಿ ಶ್ರಮಿಸುವ ಸಿಪಿಐ (ಎಂ), ಯಾವುದೇ ಕಾರಣಕ್ಕೂ ಆಳುವ ವರ್ಗದ ಪಕ್ಷವೊಂದರ ಜತೆಗಿನ ಮೈತ್ರಿಕೂಟದ ಭಾಗವಾಗಿರಲು ಸಾಧ್ಯವೇ ಇಲ್ಲ ಎನ್ನುತ್ತಾರೆ.

II

ಪಕ್ಷದ ಒಳಗಡೆ ಮತ್ತು ಹೊರಗಡೆ ಚರ್ಚೆಗೆ ಬಂದ ಇನ್ನೊಂದು ವಿಷಯವೆಂದರೆ ತಮಿಳುನಾಡು ವಿಧಾನಸಭೆ ಚುನಾವಣೆಗಳಲ್ಲಿ ಪಕ್ಷದ ಕಳಪೆ ಸಾಧನೆ. ಎಡಪಕ್ಷಗಳ ಇಂಥ ಸಾಧನೆ ಬಗ್ಗೆ ಕಳವಳ ವ್ಯಕ್ತಪಡಿಸಿದ ಕೆಲವರು ಡಿಎಂಕೆ ಅಥವಾ ಎಐಎಡಿಎಂಕೆ ಜತೆ ಚುನಾವಣೆ ಹೊಂದಾಣಿಕೆ ಮಾಡಿಕೊಳ್ಳಲು ಸಿಪಿಐ(ಎಂ) ನಿರಾಕರಿಸಿದ್ದೇ ಇದಕ್ಕೆ ಕಾರಣ ಎಂದು ಹೇಳಿದ್ದಾರೆ. ಇಲ್ಲಿ ಕೂಡ ಮತ್ತೊಮ್ಮೆ ವಿಧಾನಸಭೆ ಚುನಾವಣೆಗಳಲ್ಲಿ ಸ್ಥಾನಗಳನ್ನು ಗೆಲ್ಲಲು ಆಗಿರುವ ವಿಫಲತೆ ಎಂದು ಮೇಲುಮೇಲಿನಲ್ಲಷ್ಟೇ ಕಾಣಲಾಗಿದೆ. ಆದರೆ ನಿಜವಾದ ಸಮಸ್ಯೆ ಇರುವುದು ಬೇರೆಲ್ಲೋ- ಅಂದರೆ ಪಕ್ಷದ ಸಾಮೂಹಿಕ ನೆಲೆ ಮತ್ತು ರಾಜಕೀಯ ಪ್ರಭಾವ ಇಳಿಮುಖಗೊಂಡಿರುವುದೇ ಆ ಸಮಸ್ಯೆ.

ಪಕ್ಷದ ಒಳಗಡೆ ಎಲ್ಲಾ ಹಂತಗಳಲ್ಲಿ ಚರ್ಚಿಸಿದ ನಂತರ ಪಕ್ಷದ 21ನೇ ಮಹಾಧಿವೇಶನದಲ್ಲಿ ಅಂಗೀಕರಿಸಲಾದ ರಾಜಕೀಯ-ಕಾರ್ಯತಂತ್ರ ಧೋರಣೆಯ ವಿಮರ್ಶೆಯಲ್ಲಿ ಈ ವಿಷಯವನ್ನು ಸಮಗ್ರವಾಗಿ ಪರಿಶೀಲಿಸಲಾಗಿದೆ. ಮೂರು ಬಲಿಷ್ಟ ರಾಜ್ಯಗಳಾದ ಪಶ್ಚಿಮ ಬಂಗಾಲ, ಕೇರಳ ಮತ್ತು ತ್ರಿಪುರಾದ ಹೊರಗಡೆ ಪಕ್ಷದ ಸ್ವತಂತ್ರ ಶಕ್ತಿ ಮತ್ತು ಸಾಮೂಹಿಕ ನೆಲೆ ಒಟ್ಟಾರೆಯಾಗಿ ಇಳಿದಿದೆ ಎನ್ನುವುದನ್ನು ಈ ವಿಮರ್ಶೆ ಗಮನಿಸಿದೆ. ಈ ಇಳಿಕೆ ಸಾಕಷ್ಟು ದೀರ್ಘ ಕಾಲದಿಂದ ನಡೆಯುತ್ತಿದೆ. ಇದಕ್ಕೆ ಕಾರಣಗಳನ್ನು ವಿಶ್ಲೇಷಿಸಿ ಪರಿಹಾರ ಕ್ರಮಗಳನ್ನೂ ಸೂಚಿಸಲಾಗಿದೆ. ಕಳೆದ ಎರಡುವರೆ ದಶಕಗಳಲ್ಲಿ ಉದಾರೀಕರಣದಿಂದ ಆದ ಸಾಮಾಜಿಕ-ಆರ್ಥಿಕ ಬದಲಾವಣೆಗಳು ಮತ್ತು ನಾನಾ ವರ್ಗಗಳ ಮೇಲೆ ಅದರಿಂದ ಆಗಿರುವ ಪರಿಣಾಮಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ. ಹಾಗೂ ಅದರ ಆಧಾರದಲ್ಲಿ, ವರ್ಗ ಹೋರಾಟಗಳು ಮತ್ತು ಸಾಮೂಹಿಕ ಚಳವಳಿಗಳನ್ನು ಬೆಳೆಸಲು ಸೂಕ್ತವಾದ ತಂತ್ರಗಳನ್ನು ಮತ್ತು ಘೋಷಣೆಗಳನ್ನು ರೂಪಿಸಬೇಕಾಗಿದೆ. ಇಂಥ ಹೋರಾಟಗಳು ಮತ್ತು ಚಳವಳಿಗಳನ್ನು ನಡೆಸಲು ಪಕ್ಷವನ್ನು ಸನ್ನದ್ಧಗೊಳಿಸಲು ಮತ್ತು ಪ್ರಭಾವವನ್ನು ಕ್ರೋಡೀಕರಿಸಲು ಪಕ್ಷದ ಸಂಘಟನೆಯಲ್ಲಿ ಸರಿಪಡಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು; ಪಕ್ಷದ ಸ್ವತಂತ್ರ ಶಕ್ತಿಯನ್ನು ಬೆಳೆಸುವ ಮತ್ತು ಬಂಡವಾಳಶಾಹಿ-ಭೂಮಾಲಿಕ ನೀತಿಗಳಿಗೆ ಪರ್ಯಾಯವಾಗುವ ಒಂದು ಎಡ, ಪ್ರಜಾಸತ್ತಾತ್ಮಕ ಮೈತ್ರಿಕೂಟದ ರಚನೆಗಾಗಿ ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಅಣಿನೆರೆಯಿಸಲು ರಾಜಕೀಯ-ಕಾರ್ಯತಂತ್ರ ಧೋರಣೆ ಒತ್ತು ನೀಡುತ್ತದೆ.

ತಮಿಳುನಾಡು, ಅಸ್ಸಾಂ, ಆಂಧ್ರಪ್ರದೇಶ, ಬಿಹಾರ ಮತ್ತು ಓಡಿಶಾದಂಥ ರಾಜ್ಯಗಳಲ್ಲಿ ಪಕ್ಷದ ಸ್ವತಂತ್ರ ಬಲವನ್ನು ಬೆಳೆಸಲು ವಿಫಲವಾಗಿರುವುದಕ್ಕೆ ಪ್ರಾದೇಶಿಕ ಬಂಡವಾಳಶಾಹಿ ಪಕ್ಷಗಳೊಂದಿಗೆ ದೀರ್ಘ ಕಾಲದಿಂದ ಮೈತ್ರಿಗಳನ್ನು ಮಾಡಿಕೊಂಡಿರುವುದೇ ಪ್ರಮುಖ ಕಾರಣಗಳಲ್ಲಿ ಒಂದು ಎಂದು ಗುರುತಿಸಲಾಗಿದೆ. ತಮಿಳುನಾಡು ರಾಜ್ಯದಲ್ಲಿ ಪ್ರಮುಖ ಪ್ರಾದೇಶಿಕ ಪಕ್ಷಗಳಾದ ಡಿಎಂಕೆ ಮತ್ತು ಎಐಎಡಿಎಂಕೆಗಳೊಂದಿಗೆ ಅತ್ಯಂತ ದೀರ್ಘ ಕಾಲ ಮೈತ್ರಿ ಮಾಡಿಕೊಳ್ಳಲಾಗಿದೆ. ಹಿಂದೆ ಅನುಸರಿಸಲಾಗುತ್ತಿದ್ದ ರಾಜಕೀಯ-ಕಾರ್ಯತಂತ್ರದ ಅಂಗವಾಗಿ ರಾಜ್ಯದಲ್ಲಿ ಅನುಸರಿಸಲಾದ ಚುನಾವಣಾ ತಂತ್ರಗಳ ಬಗ್ಗೆ 2016 ಫೆಬ್ರವರಿಯಲ್ಲಿ ನಡೆದ ಪಕ್ಷದ ರಾಜ್ಯ ಸಮ್ಮೇಳನ ಪರಾಮರ್ಶಿಸಿದೆ. ನವ-ಉದಾರವಾದಿ ನೀತಿಗಳನ್ನು ಅನುಸರಿಸಿದ ಹಾಗೂ ಭ್ರಷ್ಟಾಚಾರದಲ್ಲಿ ತೊಡಗಿದ ಡಿಎಂಕೆ ಮತ್ತು ಎಐಎಡಿಎಂಕೆ ಜತೆ ಪರ್ಯಾಯವಾಗಿ ಚುನಾವಣೆ ಮೈತ್ರಿ ಮಾಡಿಕೊಂಡಿದ್ದರಿಂದ ಜನರು ನಮ್ಮನ್ನು ಒಂದು ರಾಜಕೀಯ ಪರ್ಯಾಯವಾಗಿ ಕಾಣಲಿಲ್ಲ ಎಂದು ಅದು ಅಭಿಪ್ರಾಯಪಟ್ಟಿತು. “ಕಳೆದ 40 ವರ್ಷಗಳಿಂದ ಸತತವಾಗಿ ಡಿಎಂಕೆ ಮತ್ತು ಎಐಎಡಿಎಂಕೆ ಜತೆ ನಾವು ಚುನಾವಣೆ ಮೈತ್ರಿ ಮಾಡಿಕೊಂಡಿದ್ದು ಪಕ್ಷದ ಸ್ವತಂತ್ರ ಶಕ್ತಿ ಕುಸಿಯಲು ಒಂದು ಕಾರಣವಾಗಿದೆ” ಎಂದು ಆ ವಿಮರ್ಶೆ ಅಭಿಪ್ರಾಯಪಟ್ಟಿದೆ.

ಪ್ರಮುಖ ಪ್ರಾದೇಶಿಕ ಪಕ್ಷಗಳು, ಅದರಲ್ಲೂ ವಿಶೇಷವಾಗಿ ರಾಜ್ಯ ಸರಕಾರಗಳನ್ನು ನಡೆಸುವ ಇಂಥ ಪಕ್ಷಗಳ ನೀತಿಗಳು ಮತ್ತು ರಾಜಕೀಯದ ವಿರುದ್ಧ ಹೋರಾಟ ನಡೆಸಬೇಕು. ಯಾಕೆಂದರೆ ಅವುಗಳು ಕೂಡ ನವ-ಉದಾರವಾದಿ ನೀತಿಗಳನ್ನು ಅನುಸರಿಸುತ್ತವೆ ಮತ್ತು ಭ್ರಷ್ಟಾಚಾರದಲ್ಲಿ ಮುಳುಗಿರುತ್ತವೆ ಎಂದು ಪಕ್ಷದ 21ನೇ ಮಹಾಧಿವೇಶನ ಅಂಗೀಕರಿಸಿದ ರಾಜಕೀಯ-ಕಾರ್ಯತಂತ್ರ ಧೋರಣೆ ಹೇಳಿದೆ.

ಪಕ್ಷದ ಹಿತಗಳಿಗೆ ಅನುಕೂಲವಾಗಿದ್ದರೆ ಹಾಗೂ ರಾಜ್ಯದಲ್ಲಿ ಎಡ-ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿನೆರೆಯಿಸಲು ಅನುಕೂಲ ಆಗುವುದಾದರೆ ಮಾತ್ರವೇ ಪ್ರಾದೇಶಿಕ ಬಂಡವಾಳಶಾಹಿ ಪಕ್ಷಗಳೊಂದಿಗೆ ಚುನಾವಣೆ ಮೈತ್ರಿಯನ್ನು ಮಾಡಿಕೊಳ್ಳಬಹುದು ಎಂದೂ ಅದು ತಿಳಿಸಿದೆ. ಈ ದೋರಣೆಯಿಂದಾಗಿಯೇ ತಮಿಳುನಾಡಿನಲ್ಲಿ ಪಕ್ಷವು ಡಿಎಂಕೆ ಅಥವಾ ಎಐಎಡಿಎಂಕೆ ಜತೆ ಚುನಾವಣೆ ಮೈತ್ರಿಯನ್ನು ಮಾಡಿಕೊಳ್ಳಲಿಲ್ಲ. ಪಕ್ಷ ಮತ್ತು ಎಡಪಕ್ಷಗಳು ಮುನ್ನಡೆಯಬೇಕಾದರೆ ಹಾಗೂ ರಾಜ್ಯದಲ್ಲಿ ಎಡ-ಪ್ರಜಾಸತ್ತಾತ್ಮಕ ಮೈತ್ರಿಕೂಟ ರಚನೆಯತ್ತ ಸಾಗಬೇಕಾದರೆ ಡಿಎಂಕೆ ಮತ್ತು ಎಐಎಡಿಎಂಕೆ ಜತೆ ಸ್ನೇಹ ಬೆಳೆಸುವ ತಂತ್ರವು ಪ್ರಸಕ್ತ ಸನ್ನಿವೇಶದಲ್ಲಿ ಸಹಕಾರಿಯಲ್ಲ. ರಾಷ್ಟ್ರಮಟ್ಟದಲ್ಲಿ ಬಿಜೆಪಿಯನ್ನು ಹಣಿಯಲು ತಮಿಳುನಾಡಿನಲ್ಲಿ ಡಿಎಂಕೆಯನ್ನು ಚುನಾವಣಾ ಮಿತ್ರನನ್ನಾಗಿ ಕಾಣುವುದು ಪಕ್ಷದ ಭವಿಷ್ಯದ ಮುನ್ನಡೆಗೆ ಅಡ್ಡಿಯಾಗಲಿದೆ ಹಾಗೂ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿನೆರೆಯಿಸುವ ಗುರಿಸಾಧನೆಯಲ್ಲಿ ತದ್ವಿರುದ್ಧ ಪರಿಣಾಮ ಬೀರಬಹುದು.

ಇದು ತಮಿಳುನಾಡಿಗೆ ಮಾತ್ರ ಅನ್ವಯಿಸುವುದಿಲ್ಲ. ಅಸ್ಸಾಂ, ಬಿಹಾರ, ಆಂಧ್ರಪ್ರದೇಶ ಮತ್ತು ಓಡಿಶಾದಂಥ ರಾಜ್ಯಗಳಿಗೆ ಕೂಡ ಇದು ಅನ್ವಯವಾಗುತ್ತದೆ. ಈ ರಾಜ್ಯಗಳಲ್ಲಿ ಕೂಡ ಪ್ರಮುಖ ಪ್ರಾದೇಶಿಕ ಪಕ್ಷಗಳೊಂದಿಗೆ ದೀರ್ಘ ಅಥವಾ ಮತ್ತೆ-ಮತ್ತೆ ಮೈತ್ರಿ ಮಾಡಿಕೊಂಡ ಅನುಭವ ಪಕ್ಷಕ್ಕಿದೆ.

ತಮಿಳುನಾಡಿನಲ್ಲಿ ಎಡಪಕ್ಷಗಳ ಕಳಪೆ ಚುನಾವಣಾ ಸಾಧನೆ ಬಗ್ಗೆ ಕಳವಳ ವ್ಯಕ್ತಪಡಿಸುವ ಹಿತೈಷಿಗಳು ಈ ಮೂಲಭೂತ ವಾಸ್ತವಗಳ ಬಗ್ಗೆಯೂ ಸರಿಯಾಗಿ ಅರ್ಥಮಾಡಿಕೊಂಡರೆ ಒಳ್ಳೆಯದು. ಪಕ್ಷ ಸ್ವತಂತ್ರ ಬಲವರ್ಧನೆ ಮಾಡಿಕೊಳ್ಳದೆ ಹಾಗೂ ಬಲಿಷ್ಟ ಎಡ-ಪ್ರಜಾಸತ್ತಾತ್ಮಕ ಚಳವಳಿಯನ್ನು ಕಟ್ಟದೆ ಬಹುಕಾಲ ಬಾಳುವ ಚುನಾವಣಾ ಗಳಿಕೆಗಳನ್ನು ಮಾಡಲು ಸಾಧ್ಯವಿಲ್ಲ.

III

ಪಕ್ಷದ ಮಹಾಧಿವೇಶನದ ನಂತರ ಪಕ್ಷದ ಸಂಘಟನೆಯನ್ನು ಸಮರ್ಥಗೊಳಿಸಲು ಮತ್ತು ಬಲಪಡಿಸಲು ಪಕ್ಷವು ಸಂಘಟನೆಯ ಕುರಿತು ಒಂದು ಪ್ಲೀನಮ್ ನಡೆಸಿತು. ಸಾಮೂಹಿಕ ನೆಲೆಗಟ್ಟು ಆಧರಿತ ಮತ್ತು ಪಕ್ಷವನ್ನು ಕಟ್ಟಲು ಹಾಗೂ ರಾಜಕೀಯ-ಕಾರ್ಯತಂತ್ರ ಧೋರಣೆಯನ್ನು ಜಾರಿಗೊಳಿಸಲು ಪಕ್ಷವನ್ನು ಸನ್ನದ್ಧಗೊಳಿಸುವುದು ಇದರ ಉದ್ದೇಶ.

ನವ-ಉದಾರೀಕರಣ ನೀತಿಗಳು ಮತ್ತು ಕೋಮುವಾದದ ವಿರುದ್ಧದ ಹೋರಾಟದಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ಮಾತ್ರವೇ ದೃಢವಾದ ಶಕ್ತಿಯಾಗಿವೆ. ಕಾರ್ಮಿಕ ವರ್ಗದ ಐಕ್ಯ ಹೋರಾಟಗಳು ಎಡನೇತೃತ್ವದ ಕಾರ್ಮಿಕ ಸಂಘಗಳ ಮುತುವರ್ಜಿಯ ಫಲಿತಾಂಶ. ಮುಂಬರುವ ಸೆಪ್ಟೆಂಬರ್ 2 ’ರಂದು ನಡೆಯಲಿರುವ ಮುಷ್ಕರ ಇದೇ ಐಕ್ಯ ವೇದಿಕೆಯ ಒಂದು ಫಲವಾಗಿದೆ. ಭೂಸ್ವಾಧೀನ ಸುಗ್ರೀವಾಜ್ಞೆಯ ವಿರುದ್ಧ ಒಂದು ಚಳವಳಿ ನಡೆದಿದೆ, ಮತ್ತು ಐಕ್ಯ ವೇದಿಕೆ ಮೂಡಿ ಬಂದಿದೆ. ಇದು ಬಂದದ್ದು ಎಡ ನೇತೃತ್ವದ ರೈತ ಹಾಗೂ ಕೃಷಿಕೂಲಿಗಾರರ ಸಂಘಟನೆಗಳು ಪ್ರಮುಖ ಪಾತ್ರ ವಹಿಸಿದ್ದರಿಂದಾಗಿ.

ಮೂಲಭೂತ ಸೇವೆಗಳ ಖಾಸಗೀಕರಣದ ವಿರುದ್ಧ ಮತ್ತು ಜನತೆಯ ಜೀವನೋಪಾಯದ ಮೇಲಿನ ದಾಳಿಗಳ ವಿರುದ್ಧ ಅಸಂಖ್ಯಾತ ಹೋರಾಟಗಳು ನಡೆದಿವೆ. ಇಂಥ ಹೋರಾಟಗಳನ್ನು ವ್ಯಾಪಕಗೊಳಿಸುವುದು ಹಾಗೂ ತೀವ್ರಗೊಳಿಸುವುದು ಹೇಗೆ ಎಂಬುದನ್ನು ಪ್ಲೀನಮ್ ಚರ್ಚಿಸಿದೆ.

ದೇಶಾದ್ಯಂತ ತನ್ನ ಬಲ ಪರಿಮಿತವಾಗಿದ್ದರೂ ಕೋಮುವಾದ ವಿರೋಧಿ ಹೋರಾಟದಲ್ಲಿ, ಎಡಪಕ್ಷಗಳು ವಿಭಜನಕಾರಿ ಹಿಂದುತ್ವ ಶಕ್ತಿಗಳ ವಿರುದ್ಧ ಒಂದು ದೃಢವಾದ ಶಕ್ತಿಯಾಗಿದೆ. ಸಿಪಿಐ(ಎಂ) ಪ್ರಬಲವಾಗಿರುವ ರಾಜ್ಯಗಳಲ್ಲಿ ಬಿಜೆಪಿ-ಆರ್‌ಎಸ್‌ಎಸ್ ಕೂಟದ ವಿರುದ್ಧದ ಹೋರಾಟ ತೀಕ್ಷ್ಣಗೊಂಡಿದೆ. ಕೇರಳದಲ್ಲಿ ಸಿಪಿಐ(ಎಂ) ಮತ್ತು ಬಿಜೆಪಿ-ಆರ್‌ಎಸ್‌ಎಸ್ ನಡುವಿನ ಘರ್ಷಣೆಗಳು ಅದಕ್ಕೆ ಸಾಕ್ಷಿಯಾಗಿದೆ. ಹಿಂದುತ್ವ ಸಿದ್ಧಾಂತದ ವಿರುದ್ಧ ಸೈದ್ಧಾಂತಿಕ ಮತ್ತು ರಾಜಕೀಯ ಹೋರಾಟವನ್ನು ತೀವ್ರಗೊಳಿಸುವ ದಿಸೆಯಲ್ಲಿ ಪ್ಲೀನಮ್ ಯೋಜನೆಗಳನ್ನು ರೂಪಿಸಿದೆ.

ಮೋದಿ ಸರಕಾರದ ನವ-ಉದಾರವಾದಿ ನೀತಿಗಳ ವಿರುದ್ಧ ಸಂಯುಕ್ತ ಹೋರಾಟಗಳನ್ನು ಬೆಳೆಸಲು ಮತ್ತು ಬಿಜೆಪಿ-ಆರ್‌ಎಸ್‌ಎಸ್‌ನ ಕೋಮುವಾದಿ ಅಟ್ಟಹಾಸದ ವಿರುದ್ಧ ಹೋರಾಡಲು ಸಿಪಿಐ(ಎಂ) ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳೊಂದಿಗೆ ಸೇರುತ್ತದೆ. ಹಾಗೆ ಮಾಡುವಾಗ, ಕಾರ್ಮಿಕ ವರ್ಗ, ರೈತರು, ನಗರ ಮತ್ತು ಗ್ರಾಮೀಣ ಬಡವರು ಹಾಗೂ ದುಡಿಯುವ ವರ್ಗದ ಇತರ ವಿಭಾಗಗಳ ಹಿತಗಳನ್ನು ಪ್ರತಿನಿಧಿಸುವ ಒಂದು ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯಕ್ಕಾಗಿ ಶ್ರಮಿಸುವ ಸಿಪಿಐ(ಎಂ), ಯಾವುದೇ ಕಾರಣಕ್ಕೂ ಆಳುವ ವರ್ಗದ ಪಕ್ಷವೊಂದರ ಜತೆಗಿನ ಮೈತ್ರಿಕೂಟದ ಭಾಗವಾಗಿರಲು ಸಾಧ್ಯವೇ ಇಲ್ಲ.

ಪಕ್ಷದ ಒಳಗಿನ ಚರ್ಚೆಗಳು ವೈಯಕ್ತಿಕವಾಗಿ ನಾಯಕರ ನಡುವಿನ ಸಂಘರ್ಷ ಹಾಗೂ ನಾಯಕತ್ವದ ವಿರುದ್ಧದ ಬಂಡಾಯ ಎಂದು ಬಿಂಬಿಸಲು ಮಾಧ್ಯಮದ ಕೆಲವು ವಿಭಾಗಗಳಲ್ಲಿ ಸತತವಾದ ಪ್ರಯತ್ನಗಳು ನಡೆಯುತ್ತಿವೆ. ಇದು ವಿಶೇಷವಾಗಿ ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಸಾಂಪ್ರದಾಯಿಕ ಕಮ್ಯೂನಿಸ್ಟ್-ವಿರೋಧಿ ಪತ್ರಿಕೆಗಳು ಹಾಗೂ ಇಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಎದ್ದು ಕಾಣುತ್ತಿದೆ. ಕೆಲವರಂತೂ ಪಕ್ಷದ ಕಾರ್ಯತಂತ್ರ ಧೋರಣೆಯನ್ನು ಬದಲಾಯಿಸು ವಂತೆಯೂ ಕಾಂಗ್ರೆಸ್‌ನೊಂದಿಗೆ ಮೈತ್ರಿ ಮಾಡಿಕೊಳ್ಳುವಂತೆಯೂ ಸಲಹೆ ಮಾಡಿವೆ. ಪ್ರಜಾಸತ್ತಾತ್ಮಕ ಕೇಂದ್ರವಾದವನ್ನು ಕೈಬಿಡಬೇಕೆಂಬುದೂ ಅವರ ಬಯಕೆಯಾಗಿದೆ. ಇದು ಪಕ್ಷವನ್ನು ಒಂದು ಸೋಷಲ್ ಡೆಮಾಕ್ರಟಿಕ್ ಪಕ್ಷವನ್ನಾಗಿ ಪರಿವರ್ತಿಸುವ ಉದ್ದೇಶದಿಂದ ಪಕ್ಷದ ಮೇಲೆ ಮಾಡುವ ಸೈದ್ಧಾಂತಿಕ ದಾಳಿಯಾಗಿದೆ. ಸಿಪಿಐ(ಎಂ)ಗೆ ಅವರ ಆಶಯವನ್ನು ಈಡೇರಿಸುವ ಯಾವ ಯೋಚನೆಯೂ ಇಲ್ಲ.

ಅನು:ವಿಶ್ವ

ಮಾರುತಿ ಅಂಬಿಗೇರ



ಮಹಾದಾಯಿ ಮಹಾದೌರ್ಜನ್ಯ

ಕುರಹಟ್ಟಿಯಲ್ಲಿ 'ಕುರು'ವಾದ ಭಾಸುಂಡೆ, ಯಮನೂರಿನಲ್ಲಿ 'ಯಮ'ಯಾತನೆ, ಆಳಲು ತೋಡಿಕೊಂಡ ಆಳಗೋಡಿ

ಅರೆಕುರಹಟ್ಟಿಯಲ್ಲಿ 'ಕುರು'ವಾದ ಬಾಸುಂಡೆ:

'ಮಗಾನ ಹೋಗಿಬಿಟ್ನಾನ್ರಿ ಯಾರಬಂದ್ರ ಯೆನ್ ಮಾಡಬೇಕ್ರೀ.....ಮಗ ಕಾಲೇಜಿಗೆ ಹೋಗವಾ ಟೈಫಾಯಿಡ್ ಆಗೇತ್ರೀ ಎಣ್ಣಿ ಗುಳಿಗೆ ಹಾಕಬೇಕರೀ ಆಂದ್ರೂ ಬಿಡಲಿಲ್ಲರ್ರಿ....ಮಗನ ಮಾರಿ ನೋಡಿ 4 ದಿವಸ ಆಗೇತ್ರೀ..' ಎಂದು ಗೋಳಾಡುವ ಈರಪ್ಪನ ತಾಯಿ ಶಾಂತವ್ವ ತೆಗ್ಗಿನಮನಿ. 65 ವರ್ಷದ ಎಲ್ಲಮ್ಮ ನವಲಗುಂದ ಇವರ ಯಾತನೆ, 'ಮಧ್ಯರಾತ್ರಿ 1.00–1–.30ರ ಸುಮಾರಿಗೆ ಬೂಟ್ ಗಾಲಿನಿಂದ ಕದಕ್ಕ ಒದ್ದು ತೆಗಿಸಿ ಕಾಲಿಗೆ, ತೊಡೆಗೆ ಬಾಸುಂಡೆ ಬರುವಂತೆ ಬಾರಿಸಿ 'ಕುರು'ಮಾಡ್ಯಾರ, ಗಂಡ ಮಕ್ಕಳ್ನನ್ನ ಜೈಲಿಗೆ ಒಯ್ಯಾರ್ರೀ' ಎಂದು ಗೋಳಾಡುತ್ತಿದ್ದಳು. 'ಹೈಸ್ಕೂಲ್ ಮುಗಿಸಿ ಮಗ ಮನೆಗೆ ಬರಕತ್ನಾನ್ರಿ, ಬಂದವರ ಹೊಡೆದ ಯಳಕೊಂಡು ಹೋಗಿ ಜೈಲಿಗೆ ಅಟ್ಟಾರ್ರಿ' ಎನ್ನುವ ಶಿರಗುಪ್ಪಿ ಆಶೋಕ ನ ತಾಯಿ. 'ನೀರ ಬೇಕಾ ನೀರೂ..... ಉಚ್ಚಿ ಕುಡಿಯಿರಿ ಉಚ್ಚಿ ನಾವು ಉಚ್ಚಿ ಕುಡಿಸುತ್ತೆವೆ' ಎನ್ನುತ್ತಾ 80ರ ವೃದ್ಧೆಗೆ ಬೂಟ್‌ಗಾಲಿನಿಂದ ತಿವಿದು ನಾಯಗೊಳಿಸುವ ಗೂಂಡಾ ಪೋಲಿಸ್... 3 ವರ್ಷದ ಮಗುವಿನ ಮೇಲೆ ಲಾಠಿ ಬೀಸಿ ಮೂಗನ್ನು ಒಡೆಯುವ, 70 ವರ್ಷ ವಯಸ್ಸಿನ ವೃದ್ಧನ ಕೈ ಮುರಿದ ಆಮಾನವಿಯ ದೃಶ್ಯ ಕರಳು ಚುರುಕು ಎನ್ನುವಂತ್ತಿತ್ತು.

ಯಮನೂರಿನಲ್ಲಿ 'ಯಮ'ಯಾತನೆ

ತುಂಬು ಗರ್ಭಿಣಿ ಶಿಲ್ಪಾ ಜಾಲಿಕಾಯಿ ಹೊಟ್ಟೆಗೆ ಲಾಠಿಯಿಂದ ತಿವಿದು, ಅವಳ ಎದುರಲ್ಲಿ ಅವಳ ಗಂಡ ಕೃಷ್ಣಪ್ಪನನ್ನು ಹಿಗ್ಗಾಮುಗ್ಗಾ ಥಳಿಸಲಾಗಿದೆ. ಸುಮಾರು 65 ವಯಸ್ಸಿನ ಮಾದಮ್ಮ ಪಡೆಸೂರ ಅವರ ಯಾತನೆ ಹೇಳತೀರದು. ಬಲಬಾಗದ ಭುಜ ಹಾಗೂ ಎಡಗಾಲಿನ ತೊಡೆಯನ್ನು ಯಾವ ಅಳುಕಿಲ್ಲದೆ ಬಾತು ಹೋದ ಬಾಸುಂಡೆಗಳನ್ನು ತೋರಿಸಿ

ಪೋಲಿಸರಿಗೆ ಹಿಡಿಶಾಪ ಹಾಕುತ್ತಿದ್ದರು. 'ಲಾಠಿ ಏಟಿಗೆ ನರಕ ಕಂಡಂತೆ ಆಗೇತ್ರಿ' ಎನ್ನುವ ಈರಣ್ಣ ಭುಳಕಿ ಬಲ ಭಾಗದ ಸೊಂಟ ಹಾಗೂ ಎಡ ಬಾಗದ ತೊಡೆಗೆ ಆದ ಗಾಯಗಳನ್ನು ತೋರಿಸಿ, 'ನಮಗ ಯಮದರ್ಶನ ಮಾಡಿಸ್ಯಾರಿ ಈ ಪೋಲಿಸಿನವರು' ಎನ್ನುತ್ತಿದ್ದರು. 'ಜೀವ ಉಳಿಸಿಕೊಂಡ್ವೆನ್ರೀ' ಎನ್ನುವ ಶರಣಪ್ಪ ಹೂಗಾರ ಹುಡುಕಿದ ಮಾರ್ಗ – ಅಡುಗೆ ಹೊಗೆ ಹೋಗಲು ಮಾಡಿದ ಕೋಳವೆಯ ಒಳಗಡೆ ಎರಡು ಬದಿಗೆ ಕೈ–ಕಾಲು ಜೀಕಿ ಕೊಟ್ಟು ಉಸಿರು ಬಿಗಿಹಿಡಿದು ಪಾರಾದ ಬಗೆ... ಭಯಾನಕವಾಗಿತ್ತು. ಇನ್ನೆರಡು ನಿಮಿಷ ಪೋಲಿಸರು ಮನೆಯಲ್ಲಿ ಹುಡುಕಿದ್ದರೆ ನನ್ನ ಜೀವ ಅಬ್ಬಾ ಎನ್ನುತ್ತಿದ್ದ. 'ಚಿಪ್ಪಿ ಮುರಿಯುವ ಹಾಂಗ್ ಹೊಡೆದಾರ್ರಿ, ಭುಜದ ಎಲುಬು ಮುರಿದು ಹೋಗೇತ್ರೀ' ಎಂದ ಇಮಾಮಸಾಬ ಬುಡ್ನಾಸಾಬ ಯಲಿಗಾರ. '5 ಸಾವಿರ ರೂಪಾಯಿಯ ಅಂಗಡಿಯಲ್ಲಿನ ತಿನಸು ಹಾಗೂ ಸಾಮಗ್ರಿಗಳನ್ನ ತಿಂದು ಲೂಟಿ ಮಾಡ್ಯಾರ್ರಿ' ಎನ್ನುವ ಸಣ್ಣ ಬೀದಿ ಬದಿ ವ್ಯಾಪಾರಿ ಮುನ್ನಿ ಯಲಿಗಾರ, 'ನನಗ ಈಗ ಎನ್ ಮಾಡಬೇಕು ತಿಳಿವಲ್ಲದರ್ರಿ' ಎನ್ನುತ್ತಿದ್ದಳು.

ಅಳಲು ತೋಡಿಕೊಂಡ ಆಳಗೋಡಿ

ವಿಧವೆ ಮಹಿಳೆಯ ಅಳಲು ಇನ್ನೊಂದು ಥರದ್ದು. 'ಮನೆಯಲ್ಲಿ 4 ಜನ ಮಕ್ಕಳಾದ ಹನುಮಪ್ಪ, ಶಿವಪ್ಪ, ಕೃಷ್ಣಪ್ಪ ಮತ್ತು ರಾಜು ನಡುವಿನ ಮನೆಯವರನ್ನು ಎಳೆದುಕೊಂಡು ಹೋಗಿ ಜೈಲಿಗೆ ಹಾಕ್ಯಾರ್ರಿ, ನಮ್ಮ ಮಕ್ಕಳು ನಿರಪರಾಧಿಗಳು. ಅವರು ಯಾವುದೇ ತಪ್ಪು ಮಾಡಿಲ್ಲ. ಅವರ ಬಿಡುಗಡೆಯಾಗುವರೆಗೂ ನಾನೂ ಏನೂ ಊಟ ಮಾಡಿಲ್ಲ ಎಂದು ಗೋಳಾಡುತ್ತಿದ್ದಳು. ಕಳೆದ 4 ಧಿವಸಗಳು ನರಕದಂತ್ತಿದ್ದು, ಇದರ ಹಿಂದೆ ರಾಜಕೀಯ ಕೈವಾಡವಿದೆ ಎಂದು ಆರೋಪಿಸುತ್ತಿದ್ದಳು.

70 ವರ್ಷದ ಭರಮಪ್ಪ ರುದ್ರಪ್ಪ ನಾಯ್ಕರ ಆಳಲು ಹೇಳತಿರದು. ಲಾಠಿಯಿಂದ ಬೆನ್ನುಗಳಿಗೆ ಆದ ಗಾಯಗಳನ್ನು ತೋರಿಸಿ ಅಲ್ಲಿ ನಡೆದ ಭಯಾನಕ ದೃಶ್ಯವನ್ನು ನಮ್ಮ ಮುಂದೆ ಬಿಚ್ಚಿಡುತ್ತಿದ್ದರು. ಪೋಲಿಸರೇ ದೊಡ್ಡ ದುಂಡುಕಲ್ಲಿನಿಂದ ಹೊರಗಡೆಗೆ ಇದ್ದ ವಸ್ತುಗಳಿಗೆ ಹಾನಿ ಮಾಡಿ, 'ಇವನ್ನೆಲ್ಲ ಯಾರ ಮಾಡ್ಯಾರ ಹೇಳತಿರೋ ಇಲ್ಲೋ ಎಂದು ನಮ್ಮ ಮನೆಯ ಕಿಡಕಿಯ ಗ್ಲಾಸ್ ಒಡೆದು ಲಾಠಿಯಿಂದ ಟಿವಿ ದೂಡಿ ಒಡೆದು ಹಾಕ್ಯಾರ್ರಿ' ಎಂದು ಅಲ್ಲಿದ್ದ ಪುಡಿಪುಡಿಯಾದ ವಸ್ತುಗಳನ್ನು, ಕದದ ಮೇಲೆ ಆದ ಬೂಟಿನ ರಾಡಿಗಾಲಿನಿಂದ ಒದ್ದ ಬೂಟಿನ ಗುರುತನ್ನು ಸಾಕ್ಷ್ಯವಾಗಿ ತೋರಿಸಿದರು. 'ಕದ ತೆಗಿತಿರೋ ಇಲ್ಲಾ.. ಕದಮುರಿದು ಒಳಗಬಂದು ಬಂದೂಕಿನಿಂದ ಗುಂಡು ಹಾಕಬೇಕಾಗುತ್ತದೆ ಎಂದರು. ಆದಕ್ಕ ಗಟ್ಟಿ ಆಗಿ ಇದ್ದ ಹಳೆಕಾಲದ ಬಾಗಿಲ ತೆರದ ಮೇಲೆ ಈ ರೀತಿ ಥಳಿಸಿದ್ದಾರೆ ನೋಡ್ರೀ ಸರ್' ಎಂದು ಸೊಪ್ಪಿನ ಸರ್ ನೇತೃತ್ವದ ಎಡಪಕ್ಷಗಳ ಜಿಲ್ಲಾ ಸಮಿತಿ ನಿಯೋಗಕ್ಕೆ ತಮ್ಮ ಆಳಲನ್ನು ಹೇಳುತ್ತಿದ್ದರು. ರಾಜಕೀಯ ಕೆಸರಾಟಕ್ಕೆ ಬಲಿಯಾದ ಮುಗ್ದ ಆಮಾಯಕ ಜನರು, ಬಳ್ಳಾರಿ, ಧಾರವಾಡ ಹಾಗೂ ಚಿತ್ರದುರ್ಗದ ಜೈಲುಗಳಲ್ಲಿ ಇದ್ದರೆ ರಾಜಕೀಯ ಗೂಂಡಾ ಪುಡಾರಿಗಳು, ಕಾನೂನು ಕೈಗೆ ತೆಗೆದು–ಕೊಂಡ ರಾಜಕೀಯ ಪಕ್ಷಗಳ ಬಾಲಂಗೋಚಿಗಳು ಹಾಗೂ ರಾಕ್ಷಸಿ ಪ್ರವೃತ್ತಿಯ ಪೋಲಿಸರು ಏನು ನಡೆದೇ ಇಲ್ಲಾ ಎನ್ನುವ ರೀತಿಯಲ್ಲಿ ಆರಾಮವಾಗಿ ಓಡಾಡುತ್ತಿದ್ದಾರೆ.

ರಾಜ್ಯ ನಿಯೋಗದ ಭೇಟಿ

ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿಗಳ ಜಿ.ವಿ.ಶ್ರೀರಾಮರೆಡ್ಡಿ ನೇತೃತ್ವದ ತಂಡದಲ್ಲಿ ಮಾರುತಿ ಮಾನ್ಪಡೆ, ಬಿ.ಎಸ್ ಸೊಪ್ಪಿನ್ ಮತ್ತು ಅವರ ಜೊತೆಗೆ ಮಾರುತಿ ಅಂಬಿಗೇರ ಇದ್ದರು. ಯಮನೂರಿಗೆ ಭೇಟಿಕೊಟ್ಟ ನಿಯೋಗ ಪೋಲಿಸ್ ದೌರ್ಜನ್ಯಕ್ಕೆ ಒಳಗಾದ ಕುಟುಂಬಗಳನ್ನು ಹಾಗೂ ಸಂತ್ರಸ್ತರನ್ನು ನವಲಗುಂದದ ಸರಕಾರಿ ಆಸ್ಪತ್ರೆಯಲ್ಲಿ ಗಾಯಾಳುಗಳನ್ನು ಭೇಟಿಮಾಡಿತು. ಹಿಂದು ಮುಂದು ಗೊತ್ತಿಲ್ಲದೆ, ಕಾನೂನು ತಿಳಿಯದೆ ಹೆದರಿದ ನೊಂದು ಬೆಂದ ಮುಗ್ಧ ಅಮಾಯಕ ಬಡಜನರು ಕಣ್ಣೀರಲ್ಲಿ ಕೈ ತೊಳೆಯುತ್ತಾ ಮಾನಸಿಕವಾಗಿ ದೈಹಿಕವಾಗಿ ಅಶಕ್ತರಂತೆ, ಅವಮಾನವನ್ನು ಸಹಿಸುತ್ತಿರುವ ಮನಕಲುಕುವ ಸನ್ನಿವೇಶಗಳು – ಬಹುತೇಕ ಈ ಮೂರು ಗ್ರಾಮಗಳಲ್ಲಿ ಇಂತಹ ಅಮಾನುಷ ಕೃತ್ಯಗಳು ಪೋಲಿಸರ ಅಟ್ಟಹಾಸದ ಕುರುಹುಗಳು ಸರ್ವೇಸಾಮಾನ್ಯವಾಗಿ ನಮ್ಮ ನಿಯೋಗಕ್ಕೆ ಕಂಡ ದೃಶ್ಯಗಳು. ಆಸ್ಪತ್ರೆ ಆವರಣದಲ್ಲಿ ಅರೆಕುರಹಟ್ಟಿಯ ಸುಮಾರು 70 ವರ್ಷದ ಮಹಿಳೆ ಭಯಗೊಂಡು ನಡುಗುತ್ತಿದ್ದ ಸನ್ನವೇಶ ಅವರು ಮಾನಸಿಕವಾಗಿ ಜರ್ಝರಿತವಾದ ಕುರುಹಾಗಿ ನಮಗೆ ಕಾಣಿಸಿತು. ಮನಕಲುಕುವ ದೃಶ್ಯವಾಗಿತ್ತು. ಮಕ್ಕಳು, ಮಹಿಳೆಯರು, ವೃದ್ದರನ್ನು ಭೇಟಿಮಾಡಿತು, ಅವರ ಗೋಳನ್ನು ಆಲಿಸಿದ ನಿಯೋಗ ಅವರಿಗೆ ಧೈರ್ಯ ತುಂಬಿ ಅವರಿಗೆ ಕಾನೂನಿನ ಸಹಾಯ ಹಾಗೂ ಪರಿಹಾರಕ್ಕಾಗಿ ಹೋರಾಟ ಮಾಡಲಾಗುವದು ಎಂದು ತಿಳಿಸಿತು. ರಾಜ್ಯದ ನಿಯೋಗ ಆಸ್ಪತ್ರೆಯ ವಿವಿದ ವಾರ್ಡಗಳಿಗೆ ಹೋಗಿ ಗಾಯಾಳುಗಳಿಗೆ ಧೈರ್ಯ ತುಂಬಿ, ಡಾಕ್ಟರ, ನರ್ಸಗಳಿಗೆ ಗಾಯಾಳುಗಳನ್ನು ಸರಿಯಾದ ರೀತಿಯಲ್ಲಿ ಉಪಚರಿಸುವಂತೆ ಸಲಹೆ ನೀಡಿತು.

ಧಾರವಾಡ ಜಿಲ್ಲಾಧಿಕಾರಿ ಕಛೇರಿ ಮುಂದೆ ಪ್ರತಿಭಟನೆ:

ಧಾರವಾಡದ ಜಿಲ್ಲಾಧಿಕಾರಿ ಕಛೇರಿ ಮುಂದೆ ಪ್ರತಿಭಟನೆಯಲ್ಲಿ ಎಡಪಕ್ಷಗಳಾದ ಸಿಪಿಐ(ಎಂ), ಸಿಪಿಐ, ಎಸ್‌ಯುಸಿಐ ಜಂಟಿಯಾಗಿ ಧಾರವಾಡ ಜಿಲ್ಲಾಧಿಕಾರಿ ಕಛೇರಿ ಎದುರು ಆಗಸ್ಟ್ 1 ರಂದು ಪ್ರತಿಭಟನೆ ನಡೆಸಿದವು. ಎಸ್‌ಯುಸಿಐನ ಜಿಲ್ಲಾ ಕಾರ್ಯದರ್ಶಿ ರಾಮಾಂಜನಪ್ಪ ಆಲ್ದಳ್ಳಿ ಮಾತನಾಡಿ ಇದೊಂದು ರಾಜಕೀಯ ಪಿತೂರಿ, ಈ ಹೋರಾಟಕ್ಕೆ ಸರಿಯಾದ ನಾಯಕತ್ವದ ಕೊರತೆಯಿಂದ ಈ ಗೊಂದಲ ಸೃಷ್ಠಿಯಾಗಿದ್ದು ಎಡಪಕ್ಷಗಳ ನೇತೃತ್ವ ಮಾತ್ರ ಹೋರಾಟಕ್ಕೆ ಸರಿಯಾದ ದಾರಿ ತೋರುವದು ಎಂದರು. ಸಿಪಿಐನ ಖಾಜಿ ಮಾತನಾಡಿದರು. ನಂತರ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಮಾತನಾಡಿ ಯಮನೂರಿನ ಸುತ್ತಮುತ್ತಲಿನ ಗ್ರಾಮಗಳಲ್ಲಿ ನಡೆದ ಪೈಶಾಚಿಕ ಕೃತ್ಯ ಮೇಲಿನವರ ಆದೇಶವಿಲ್ಲದೆ ನಡೆದಿರುವುದಕ್ಕೆ ಸಾಧ್ಯವಿಲ್ಲವೆಂದು ಆರೋಪಿಸಿದರು. ಇಂತಹ ಕೃತ್ಯವನ್ನು ಸಿಪಿಐ(ಎಂ) ಖಂಡಿಸುತ್ತದೆ ಎಂದರು. ಕಳಸಾ–ಬಂಡೂರಿ ಜಾರಿಯಲ್ಲಿ ಕೇಂದ್ರ–ರಾಜ್ಯ ಸರ್ಕಾರಗಳ ಹೊಣೆಗೇಡಿತನವಿದ್ದು ಮತ್ತು ಬಿಜೆಪಿಯ ಕೀಳುಮಟ್ಟದ ರಾಜಕಾರಣವಿದೆ ಎಂದು ಕಿಡಿ–ಕಾರಿದರು. ರಾಜ್ಯ ಸರಕಾರದ ಹೊಣೆಗೇಡಿತನವನ್ನು ಬಿಚ್ಚಿಟ್ಟ ಅವರು ಟ್ರಿಬ್ಯುನಲ್ ರಚನೆಯಾದಾಗಲೇ 2003 ರಲ್ಲಿ ಕೂಡಲೇ ಮಧ್ಯಂತರ ಆದೇಶ ಕೇಳಬೇಕಾಗಿತ್ತು ಎಂದರು. ಆಗಿನ ರಾಜ್ಯ ಸರಕಾರ ಮಾಡಲಿಲ್ಲ. ಆದರೆ ಬಹಳ ತಡವಾಗಿ ಅದು ಅಂತಿಮ ತೀರ್ಮ ಬರುವ ಮುನ್ನ ಅವೈಜ್ಞಾನಿಕವಾಗಿ ಅರ್ಜಿ ಹಾಕಿರುವುದು ಕೂಡ ಹಿನ್ನಡೆಗೆ ಕಾರಣವಾಯಿತು ಎಂದರು. ಮೂರು ವರ್ಷಗಳಿಂದ ಹೋರಾಟ ನಡೆಯುತ್ತಿದ್ದು ಕೇಂದ್ರ ಸರ್ಕಾರ 3 ರಾಜ್ಯಗಳ ಮುಖ್ಯಮಂತ್ರಿಗಳ ಸಂಧಾನ ಮಾಡಿಸಿ 3–4 ಟಿಎಂಸಿ ನೀರು ಕೊಡಿಸಿದ್ದರೆ ಸಮಸ್ಯೆ ಬಗೆಹರಿಯತಿತ್ತು. ಆದರೆ ಇವರು ಚುನಾವಣಾ ರಾಜಕಾರಣ ಮಾಡುತ್ತಿದ್ದಾರೆ. ಗೋವಾದಲ್ಲಿ ಇನ್ನಾರು ತಿಂಗಳಿಗೆ ಚುನಾವಣೆ ಬರುತ್ತದೆ. ಅದರ ಮೇಲೆ ಕಣ್ಣಿಟ್ಟಿರುವ ಬಿಜೆಪಿಯು ಇಲ್ಲಿನ ಕುಡಿಯುವ ನೀರಿನ ಸಮಸ್ಯೆಯನ್ನು ನಿರ್ಲಕ್ಷಿಸಿದೆ ಎಂದು ಆರೋಪಿಸಿದರು. ಯಾರು ಸಮಸ್ಯೆ ಬಗೆಹರಿಸಬೇಕಿತ್ತೋ ಅವರು ಸಬೂಬು ಹೇಳುತ್ತಾ ಇರುವುದು ಖಂಡನೀಯವೆಂದರು. ಇಲ್ಲಿಂದ ಆರಿಸಿ ಹೋದ 17 ಲೋಕಸಭಾ ಮತ್ತು 4 ರಾಜ್ಯಸಭಾ ಸದ್ಯಸ್ಯರು ಬಿಜೆಪಿಯವರೇ ಆಗಿದ್ದಾರೆ ಎಂದು ಅವರ ಕಾರ್ಯವೈಖರಿಯನ್ನು ಟೀಕಿಸಿದರು. ನೀರು ಇರುವುದು ಕುಡಿಯುವುದಕ್ಕೆ ಹಾಗೂ ಕೃಷಿಗಾಗಿನೇ ಎಂದು ನ್ಯಾಯಾಂಗದ ಅವೈಜ್ಞಾನಿಕ ತೀರ್ಪಿಗೆ ಅಸಮಾಧಾನ ವ್ಯಕ್ತಪಡಿಸಿದರು.

ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಬಿ.ಎಸ್. ಸೊಪ್ಪಿನ ಪ್ರಾಸ್ತಾವಿಕವಾಗಿ ಮಾತನಾಡುತ್ತ ನ್ಯಾಯಾಧೀಕರಣದ ತೀರ್ಪಿನ ನಂತರ ಉಂಟಾದ ಜನರ ಬಾವೋದ್ರೇಕ್ ಹಾಗೂ ಪೋಲೀಸ್ ಅತಿರೇಖಗಳ ಬಗ್ಗೆ ವಿವರಿಸಿದರು. ಯಮನೂರಿನ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮಹಿಳೆಯರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಲಾಗಿದೆ. ಯಾವದೇ ನಾಗರಿಕ ಸಮಾಜ ನಾಚಿಕೆಯಿಂದ ತಲೆ ತಗ್ಗಿಸುವಂತೆ ಮಾಡುವ ಪದಗಳನ್ನು ಉಪಯೋಗಿಸಿ ಮಹಿಳೆಯರಿಗೆ ಅವಮಾನ ಮಾಡಿದ್ದಾರೆ. "ಆ ಪೋಲಿಸ್ರ ಮನಿಯ್ಯಾಗ್ಳ ಹೆಂಗಸರು, ಅಕ್ಕತಂಗ್ಯಾರು ತಾಯಿಯಂದಿರು ಇಲ್ಲೇನ್ರಿ" ಎಂದು ತಾಯಂದಿರು ಗೋಳಿಟ್ಟಿದ್ದು ಕನಿಕರ ತರುವಂತಹ

ಪುಟ 11 ಕ್ಕೆ



ಕುರಹಟ್ಟಿ, ಯಮನೂರ, ಆಳಗೋಡಿಯಲ್ಲಿ ಪೋಲೀಸ್ ದೌರ್ಜನ್ಯದ ವಿರುದ್ಧ ಸಿಪಿಐ(ಎಂ) ಪ್ರತಿಭಟನೆ




ಆಸ್ಪತ್ರೆಗೆ ಭೇಟಿ ನೀಡಿದ ಸಿಪಿಐ(ಎಂ)ನ ರಾಜ್ಯ ನಿಯೋಗದ ಭೇಟಿ

ದಲಿತ ಮಾನವ ಅಭಿವೃದ್ಧಿ ಜಿಲ್ಲೆಗಳಲ್ಲಿ ಯಾವ ಮಟ್ಟದಲ್ಲಿದೆ?

ದಲಿತ ಮಾನವ ಅಭಿವೃದ್ಧಿ ಸೂಚಿಯನ್ನು ಹೇಗೆ ಅಳೆಯಲಾಗುತ್ತದೆ ಮತ್ತು ಅದರ ಹಿಂದಿರುವ ಪರಿಕಲ್ಪನೆ ಬಗ್ಗೆ ಅದರ ರೂವಾರಿಯಾದ ಡಾ. ಚಂದ್ರ ಪೂಜಾರಿ ಈ ಲೇಖನಮಾಲೆಯ ಮೊದಲ ಭಾಗದಲ್ಲಿ ವಿವರಿಸಿದ್ದಾರೆ. ಲೇಖನ ಮಾಲೆಯ ಈ ಎರಡನೇ ಭಾಗದಲ್ಲಿ 2014ರ ವರದಿಯಲ್ಲಿ ವಿವಿಧ ಜಿಲ್ಲೆಗಳ ಸಮಗ್ರ ದಲಿತ ಅಭಿವೃದ್ಧಿ ಸೂಚಿಯ ನಿರೂಪಣೆ ಮತ್ತು ಸ್ಥೂಲ ವಿಶ್ಲೇಷಣೆ ಇದೆ. ಈ ಬಗ್ಗೆ ಡಾ. ಚಂದ್ರ ಪೂಜಾರಿ ಇತ್ತೀಚೆಗೆ ಪ್ರಕಟವಾದ ಪುಸ್ತಕದಲ್ಲಿ (ಪ್ರಕಟಣೆ : ದಲಿತ ಹಕ್ಕುಗಳ ಸಮಿತಿ) ಇನ್ನಷ್ಟು ವಿವರವಾಗಿ ಬರೆದಿದ್ದಾರೆ.

– ಡಾ. ಚಂದ್ರ ಪೂಜಾರಿ

2014ರಲ್ಲಿ ಕರ್ನಾಟಕ ಸರಕಾರದ ಯೋಜನೆ ಇಲಾಖೆ ಮಾನವ ಅಭಿವೃದ್ಧಿ ವರದಿ ರೂಪಿಸಲು ಸಿದ್ದತೆ ನಡೆಸುವ ಸಂದರ್ಭದಲ್ಲಿ ಶ್ರೀಮತಿ ಅನಿತಾ ಕೌಲ್ ಇಲಾಖೆಯ ಮುಖ್ಯ ಕಾರ್ಯದರ್ಶಿಗಳಾಗಿದ್ದರು. ಇವರ ಮುತುವರ್ಜಿಯಿಂದ ದಲಿತ ಮಾವನ ಅಭಿವೃದ್ಧಿ ಸೂಚಿ ಸರಕಾರದ ಮಾನವ ಅಭಿವೃದ್ಧಿ ವರದಿಯ ಭಾಗವಾಗಲು ಸಾಧ್ಯವಾಯಿತು. ಮಾನವ ಅಭಿವೃದ್ಧಿ ಇಂಡೆಕ್ಸ್ ದಲಿತ ಅಭಿವೃದ್ಧಿಯನ್ನು ಕಟ್ಟಿಕೊಡುವುದಿಲ್ಲ ಎನ್ನುವ ಅಂಶ ಇವರ ತಿಳುವಳಿಕೆಗೂ ಬಂದಿತ್ತು. ಅದಕ್ಕಾಗಿ ಪ್ರತ್ಯೇಕ ಇಂಡೆಕ್ಸ್ ರಚಿಸುವ ಕುರಿತು ಆಲೋಚಿಸುತ್ತಿದ್ದರು. ಆ ಸಂದರ್ಭದಲ್ಲಿ ನನ್ನ ಹಿರಿಯ ಸಹದ್ಯೋಗಿ ಡಾ.ಟಿ.ಆರ್. ಚಂದ್ರಶೇಖರ್ ಅವರು ನಾನು ಸಿದ್ದಪಡಿಸಿದ್ದ ದಲಿತ ಅಭಿವೃದ್ಧಿ ಇಂಡೆಕ್ಸ್‌ನ್ನು ಅವರ ಗಮನಕ್ಕೆ ತಂದರು. ಹೀಗೆ ಶ್ರೀಮತಿ ಅನಿತಾ ಕೌಲ್ ಅವರ ದೂರದೃಷ್ಟಿಯಿಂದ ದಲಿತ ಮಾನವ ಅಭಿವೃದ್ಧಿ ಇಂಡೆಕ್ಸ್ ಕರ್ನಾಟಕ ಸರಕಾರದ ಮಾನವ ಅಭಿವೃದ್ಧಿ ವರದಿಯ ಭಾಗವಾಗಲು ಸಾಧ್ಯವಾಯಿತು. ಇದಕ್ಕಾಗಿ ನಾನು ಶ್ರೀಮತಿ ಅನಿತಾ ಕೌಲ್ ಹಾಗು ಡಾ.ಟಿ.ಆರ್. ಚಂದ್ರಶೇಖರ್ ಅವರನ್ನು ವಂದಿಸಲೇ ಬೇಕು. ಇದೇ ರೀತಿ ಲೀಡ್ ಏಜನ್ಸಿಗಳು ರಾಜ್ಯದ ಮೂವತ್ತು ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯ ನಡೆಸಿ ದಲಿತ ಮಾನವ ಅಭಿವೃದ್ಧಿ ವರದಿಯನ್ನು ಸಿದ್ದಪಡಿಸಿದ್ದಾರೆ. ಇವರಿಗೂ ಕೃತಜ್ಞತೆಗಳು.



2014ರ ಕರ್ನಾಟಕ ಸರಕಾರದ ಮಾನವ ಅಭಿವೃದ್ಧಿ ವರದಿಯಲ್ಲಿ ದಲಿತ ಮಾನವ ಅಭಿವೃದ್ಧಿ ಕೂಡ ಸೇರಿದೆ. ವರದಿಯಲ್ಲಿ ಇದನ್ನು ಸಮಗ್ರ ದಲಿತ ಅಭಿವೃದ್ಧಿ ಸೂಚಿಯೆಂದು ಹೆಸರಿಸಲಾಗಿದೆ. ಈ ಸೂಚಿಯನ್ನು ಮಾನವ ಅಭಿವೃದ್ಧಿ ವರದಿಯ ದಲಿತಬುಡಕಟ್ಟುಗಳ ಅಧ್ಯಾಯದಲ್ಲಿ ನೋಡಬಹುದು. ಕರ್ನಾಟಕದ ಎಲ್ಲ ತಾಲ್ಲೂಕುಗಳ ಒಂದೊಂದು ಪಂಚಾಯಿತಿಯಲ್ಲಿ ದಲಿತರ ಅಧ್ಯಯನ ಮಾಡಿ ಈ ಸೂಚಿಯ ಸಿದ್ದಪಡಿಸುವ ಆಲೋಚನೆ ಮೊದಲಿತ್ತು. ಆದರೆ ಸಂಪನ್ಮೂಲ ಹಾಗು ಸಮಯದ ಕೊರತೆಯ ಕಾರಣಗಳನ್ನು ಮುಂದಿಟ್ಟು ಪ್ರತಿ ಜಿಲ್ಲೆಯಲ್ಲಿ ಒಂದು ಪಂಚಾಯಿತಿಯಲ್ಲಿರುವ ದಲಿತರನ್ನು ಅಧ್ಯಯನ ಮಾಡಿ ಈ ಸೂಚಿಯನ್ನು ಸಿದ್ದಪಡಿಸಲಾಗಿದೆ. ಎಲ್ಲ ಜಿಲ್ಲೆಗಳ ಲೀಡ್ ಏಜನ್ಸಿಗಳು ಸಿದ್ದಪಡಿಸಿ ಮಾನವ ಅಭಿವೃದ್ಧಿ ವರದಿಯಲ್ಲಿ ನೀಡಿರುವ ದಲಿತ ಅಭಿವೃದ್ಧಿ ಸೂಚಿಯನ್ನು ಸಂಗ್ರಹಿಸಿ ಕೆಳಗಿನ ಕೋಷ್ಟಕದಲ್ಲಿ ನೀಡಿದ್ದೇನೆ. ದಲಿತ ಮಾನವ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲ ಹತ್ತು ಸೂಚಿಗಳ ವಿವರಗಳನ್ನು ಕೋಷ್ಟಕದ ಮೊದಲ 10 ಕಾಲಮುಗಳಲ್ಲಿ ಇದೆ. ಕೊನೆಯ (ಅಂದರೆ 11ನೇ) ಕಾಲಮಿನಲ್ಲಿ ಮೊದಲ 10 ಸೂಚಿಗಳಿಂದ ಹೊಮ್ಮುವ ಸಮಗ್ರ ದಲಿತ ಅಭಿವೃದ್ಧಿ ಸೂಚಿ ಇದೆ.

ಕೋಷ್ಟಕದಲ್ಲಿರುವ ಅಂಕಿ–ಅಂಶಗಳ ಪ್ರಕಾರ ಕರ್ನಾಟಕದ ಒಂಬತ್ತು ಜಿಲ್ಲೆಗಳಲ್ಲಿ ದಲಿತ ಮಾನವ ಅಭಿವೃದ್ಧಿ ಸ್ಥಿತಿ ತುಂಬಾ 'ಕಳಪೆ'ಯಿದೆ ಅಥವಾ ದಲಿತೇತರರ ಅಭಿವೃದ್ಧಿಯ ಶೇ.40ರಷ್ಟು ಕೂಡ ದಲಿತರ. ಅಭಿವೃದ್ಧಿ ಸಾಧನೆಯಾಗಿಲ್ಲ. ಸಮಗ್ರ ಸೂಚಿ ಅರ್ಧಕ್ಕಿಂತ ಹೆಚ್ಚು (16) ಜಿಲ್ಲೆಗಳಲ್ಲಿ 'ಸಾಧಾರಣ' (0.4 ಮತ್ತು 0.6 ನಡುವೆ) ಮಟ್ಟದಲ್ಲಿ ಇದೆ. ಕೇವಲ 5 ಜಿಲ್ಲೆಗಳಲ್ಲಿ ಮಾತ್ರ ಸಮಗ್ರ ಸೂಚಿ 'ಉತ್ತಮ'(0.6 ಮತ್ತು 0.8 ನಡುವೆ) ಮಟ್ಟದಲ್ಲಿದೆ. ಹೆಚ್ಚಿನ ಜಿಲ್ಲೆಗಳಲ್ಲಿ ದಲಿತೇತರರ ಅಭಿವೃದ್ಧಿಗೆ ಹೋಲಿಸಿದರೆ ದಲಿತ ಅಭಿವೃದ್ಧಿ ಗಾವುದ ದೂರ ಇದೆ. ಕೆಲವು ಜಿಲ್ಲೆಗಳನ್ನು ಬಿಟ್ಟರೆ ರಾಜ್ಯದ ಯಾವ ಜಿಲ್ಲೆಯಲ್ಲೂ ದಲಿತೇತರರಿಗೆ ಹೋಲಿಸಿ ದಲಿತ ಅಭಿವೃದ್ಧಿ ಉತ್ತಮ ಅಥವಾ ಅತ್ಯುತ್ತಮ ಎನ್ನುವ ಸ್ಥಿತಿಯಲ್ಲಿಲ್ಲ.

ದಲಿತ ಮಾನವ ಅಭಿವೃದ್ಧಿ ಸೂಚಿ – 2014

ಜಿಲ್ಲೆಗಳು (ಸೂಚಿ*)	1	2	3	4	5	6	7	8	9	10	ಸಮಗ್ರ
ಕಳಪೆ ಮಟ್ಟ											
ಚಿಕ್ಕಬಳ್ಳಾಪುರ	0.21	0.10	0.15	0.00	0.15	0.10	0.00	0.30	0.25	0.33	**0.16**
ರಾಮನಗರ	0.33	0.20	0.20	0.00	0.20	0.20	0.00	0.40	0.33	0.33	**0.22**
ವಿಜಾಪುರ	0.40	0.20	0.50	0.00	0.50	0.30	0.30	0.20	0.30	0.30	**0.30**
ಬಾಗಲಕೋಟೆ	0.40	0.10	0.50	0.00	0.70	0.30	0.30	0.20	0.50	0.30	**0.33**
ರಾಯಚೂರು	0.25	0.70	1.00	0.00	0.00	0.60	0.20	0.40	0.16	0.33	**0.36**
ಬೀದರ್	0.30	0.50	0.30	0.40	0.10	0.30	0.40	0.40	0.50	0.40	**0.36**
ಚಿತ್ರದುರ್ಗ	0.29	0.28	0.49	0.36	0.39	0.28	0.23	0.37	0.47	0.44	**0.36**
ಕೊಪ್ಪಳ	0.57	0.20	0.40	0.00	0.00	0.50	0.70	0.70	0.33	0.30	**0.37**
ಬಳ್ಳಾರಿ	0.50	0.30	0.50	0.10	0.30	0.20	0.20	0.50	0.30	1.00	**0.39**
ಸಾಧಾರಣ ಮಟ್ಟ											
ಯಾದಗಿರಿ	0.50	0.00	0.50	0.00	0.00	0.80	0.20	0.70	0.83	0.50	**0.40**
ಗದಗ	0.58	0.60	0.50	0.20	0.30	0.20	0.50	0.30	0.33	0.67	**0.42**
ಬೆಳಗಾವಿ	0.33	0.40	0.40	0.40	0.40	0.10	0.80	0.60	0.33	0.66	**0.44**
ಕೋಲಾರ	0.67	0.60	0.70	0.10	0.40	0.10	0.80	0.40	0.17	0.50	**0.44**
ಹಾಸನ	0.20	0.10	0.50	0.50	0.50	0.40	0.70	0.90	0.16	0.83	**0.44**
ಕಲ್ಬುರ್ಗಿ	0.40	0.40	0.50	0.40	0.40	0.40	0.60	0.40	0.50	0.50	**0.45**
ಹಾವೇರಿ	0.50	0.70	0.40	0.20	0.30	0.60	0.20	0.30	0.83	0.50	**0.45**
ಶಿವಮೊಗ್ಗ	0.00	0.90	1.00	0.00	0.00	1.00	0.20	0.60	0.67	0.33	**0.47**
ದಾವಣಗೆರೆ	0.83	0.20	0.80	0.60	0.10	0.33	0.60	0.70	0.17	0.50	**0.48**
ತುಮಕೂರು	0.67	0.50	1.00	0.00	0.00	1.00	0.40	0.60	0.00	0.83	**0.50**
ಚಾಮರಾಜನಗರ	0.58	0.10	0.80	1.00	1.00	1.00	0.10	0.40	0.10	0.10	**0.51**
ಚಿಕ್ಕಮಗಳೂರು	0.40	0.50	0.90	0.30	0.40	0.20	0.50	0.80	0.30	1.00	**0.53**
ಬೆಂಗಳೂರು ನಗರ	0.50	0.50	0.60	0.10	0.80	1.00	0.50	0.70	0.16	0.50	**0.53**
ಧಾರವಾಡ	0.38	0.50	1.00	0.50	0.70	0.60	0.40	0.30	0.33	0.67	**0.53**
ಉತ್ತರ ಕನ್ನಡ	0.17	1.00	1.00	0.00	0.00	0.40	1.00	0.60	0.83	0.50	**0.55**
ಮಂಡ್ಯ	0.33	0.70	0.80	1.00	1.00	1.00	0.30	0.40	0.10	0.10	**0.57**
ಉತ್ತಮ ಮಟ್ಟ											
ಕೊಡಗು	0.42	1.00	1.00	0.40	0.40	0.20	1.00	0.60	0.50	0.50	**0.60**
ಮೈಸೂರು	0.50	0.60	0.60	0.70	0.30	0.30	0.60	0.80	0.67	1.00	**0.61**
ಬೆಂಗಳೂರು ಗ್ರಾ.	0.80	0.50	0.90	0.00	1.00	0.80	0.60	0.50	0.75	1.00	**0.68**
ಉಡುಪಿ	0.58	0.80	1.00	0.90	0.90	0.60	0.80	0.60	0.83	0.83	**0.78**
ದಕ್ಷಿಣ ಕನ್ನಡ	0.50	0.90	1.00	1.00	1.00	0.70	1.00	0.60	0.50	0.66	**0.78**

ಮೂಲ – ಕರ್ನಾಟಕದ ಜಿಲ್ಲೆಗಳ ಮಾನವ ಅಭಿವೃದ್ಧಿ ವರದಿ 2014

***ಸೂಚಿಗಳು:** 1= ಸಾಂಸ್ಥಿಕ ಒಳಗೊಳ್ಳುವಿಕೆ, 2= ಸಾಮಾಜಿಕ ಒಳಗೊಳ್ಳುವಿಕೆ, 3 = ತಾರತಮ್ಯದ ಅನುಭವ , 4 = ತಾರತಮ್ಯದ ವಿರುದ್ಧ ಪ್ರತಿಭಟನೆ, 5 = ಸಂಘರ್ಷ ಪರಿಹಾರ, 6 = ಸ್ವಾತಂತ್ರ್ಯದ ಅನುಭವ, 7 = ಬದುಕಿನ ಮಟ್ಟ, 8 = ಲಿಂಗ ಆಯಾಮ, 9 = ಮೂಲಸೌಕರ್ಯ ನಿಲುಕುವಿಕೆ, 10 = ಶಿಕ್ಷಣ ನಿಲುಕುವಿಕೆ ಮತ್ತು 11 = ಸಮಗ್ರ ದಲಿತ ಮಾನವ ಅಭಿವೃದ್ಧಿ ಸೂಚಿ

ವರದಿಯಲ್ಲಿರುವ ದಲಿತ ಮಾನವ ಅಭಿವೃದ್ಧಿ ಸೂಚಿಯ ನೆಲೆಯಲ್ಲಿ ಕರ್ನಾಟಕದ ದಲಿತರ ಅಭಿವೃದ್ಧಿ ಕುರಿತು ನಿರ್ದಿಷ್ಟ ತೀರ್ಮಾನಕ್ಕೆ ಬರುವುದು ಕಷ್ಟ. ಏಕೆಂದರೆ ದಲಿತ ಮಾನವ ಅಭಿವೃದ್ಧಿ ಸೂಚಿ ಸಿದ್ದಪಡಿಸಲು ವಿಸ್ತೃತವಾದ ಅಧ್ಯಯನ ಕೈಗೊಂಡಿಲ್ಲ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಒಂದೊಂದು ಪಂಚಾಯತಿಗಳನ್ನು ಅಧ್ಯಯನ ಮಾಡಿ ದಲಿತ ಮಾನವ ಅಭಿವೃದ್ಧಿ ಸೂಚಿಯನ್ನು ಸಿದ್ದಪಡಿಸಲಾಗಿದೆ. ಈ ಎಲ್ಲ ಕಾರಣಗಳಿಂದ ಮಾನವ ಅಭಿವೃದ್ಧಿಯಲ್ಲಿರುವ ದಲಿತ ಮಾನವ ಅಭಿವೃದ್ಧಿ ಸೂಚಿ ದಲಿತ ಅಭಿವೃದ್ಧಿ ಕುರಿತ ಒಂದು ಸ್ಥೂಲ ಚಿತ್ರಣ ನೀಡಬಹುದೇ ಹೊರತು ದಲಿತ ಅಭಿವೃದ್ಧಿಯ ವಿಸ್ತೃತ ರೂಪವನ್ನು ನೀಡಲು ಸಾಧ್ಯವಿಲ್ಲ. ಇದೇ ವಿಚಾರವನ್ನು ಸಿಗರೇಟು ಸೇದುವುದು ಆರೋಗ್ಯಕ್ಕೆ ಹಾನಿಕರವೆಂದು ಸಿಗರೇಟ್ ಪ್ಯಾಕ್ ಮೇಲೆ ದಪ್ಪಕ್ಷರಗಳಲ್ಲಿ ಪ್ರಕಟಿಸಿದಂತೆ, ದಲಿತ ಅಭಿವೃದ್ಧಿ ಸೂಚಿಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಡಿಯೆಂದು ಕೆಲವು ಜಿಲ್ಲೆಗಳ ಮಾನವ ಅಭಿವೃದ್ಧಿ ವರದಿಯಲ್ಲೂ ದಪ್ಪಕ್ಷರಗಳಲ್ಲಿ ಪ್ರಕಟಿಸಲಾಗಿದೆ! ದಲಿತರು ಈ ಸೂಚಿಯನ್ನು ಗಂಭೀರವಾಗಿ ತೆಗೆದುಕೊಂಡು ಎಲ್ಲಿ ತಮ್ಮ ಹಕ್ಕಿಗಾಗಿ ಹೋರಾಟ ಶುರು ಮಾಡುತ್ತಾರೋ ಎನ್ನುವ ಆಂತಕದಿಂದ ಮೇಲಿನ ಸೂಚನೆ ನೀಡಿದಂತಿದೆ.

ನಾನು ಕೂಡ ಇದನ್ನೊಂದು ಪ್ರಯೋಗವೆಂದೇ ಹೇಳುತ್ತಿದ್ದೇನೆ. ಯಾವುದೇ ಮಾಪಕ ಕೂಡ ಹಲವು ಅಧ್ಯಯನಗಳ ನಂತರವೇ ಪರಿಪೂರ್ಣತೆ ಪಡೆದುಕೊಳ್ಳುವುದು. ಇದು ಮೊದಲು ಪ್ರಯೋಗ. ಆದರೆ ಈ ಪ್ರಯೋಗ ಕೂಡ ಆಪೇಕ್ಷಿತ ಸ್ಥಾನಮಾನ ಪಡೆಯಲಿಲ್ಲ. ವರದಿಯಲ್ಲಿರುವ ಎಲ್ಲ ಸೂಚಿಗಳನ್ನು (ಇಂಡೆಕ್ಸ್‌ಗಳನ್ನು) ಪರಿಚಯಿಸಲು ಮಾನವ ಅಭಿವೃದ್ಧಿ ವರದಿಯ ಒಂದು ಅಧ್ಯಾಯವನ್ನು ಮೀಸಲಿಡಲಾಗಿದೆ. ಈ ಅಧ್ಯಾಯದಲ್ಲಿ ದಲಿತ ಮಾನವ ಅಭಿವೃದ್ಧಿ ಸೂಚಿಯ ದಾಖಲೆಯೇ ಇಲ್ಲ. ಹಾಗೆ ನೋಡಿದರೆ ಉಳಿದೆಲ್ಲ ಸೂಚಿಗಳು ಬೇರೆ ಬೇರೆ ವಿದ್ವಾಂಸರು ಬೇರೆ ಬೇರೆ ಸಂದರ್ಭಗಳಲ್ಲಿ ಅಭಿವೃದ್ಧಿ ಪಡಿಸಿದ ಸೂಚಿಗಳು. ಅವುಗಳನ್ನು ಸುಧಾರಿಸಿ ಅಥವಾ ಮಾರ್ಪಾಟು ಮಾಡಿ ನಾವಿಲ್ಲಿ ಬಳಸುತ್ತಿದ್ದೇವೆ. ಆದರೆ ದಲಿತ ಮಾನವ ಅಭಿವೃದ್ಧಿ ಸೂಚಿ ಹಾಗಲ್ಲ. ಇದನ್ನು ಕರ್ನಾಟಕದಲ್ಲಿ ಮಾತ್ರವಲ್ಲ ಇಡೀ ದೇಶದಲ್ಲೇ ಮೊದಲ ಬಾರಿಗೆ ಅಭಿವೃದ್ಧಿ ಪಡಿಸಲಾಗಿದೆ. ಆದರೂ ದಲಿತ ಮಾನವ ಅಭಿವೃದ್ಧಿ ಸೂಚಿ ಇತರ ಸೂಚಿಗಳ ಸ್ಥಾನಮಾನ ಪಡೆಯಲಿಲ್ಲ.

ಏಕೆ ದಲಿತ ಮಾನವ ಅಭಿವೃದ್ಧಿ ಸೂಚಿಯನ್ನು ಎಲ್ಲ ಸೂಚಿಗಳನ್ನು ಪರಿಚಯಿಸುವ ಅಧ್ಯಾಯದಲ್ಲಿ ತೋರಿಸದೆ ದಲಿತಬುಡಕಟ್ಟುಗಳ ಅಧ್ಯಾಯ–ಕ್ಕೆ ಸೀಮಿತಗೊಳಿಸಿದ್ದೀರೆಂದು ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದೆ. ನನ್ನ ಪ್ರಶ್ನೆಗೆ ಅವರು ನೀಡಿದ ಉತ್ತರ ಇನ್ನೂ ಹಾಸ್ಯಾಸ್ಪದವಾಗಿತ್ತು. 'ನೀವು ಮಾನವ ವರದಿ ಸಿದ್ದಪಡಿಸುವ ಎಲ್ಲ ಸಭೆಗಳಿಗೆ ಹಾಜರಾಗಲಿಲ್ಲ. ಆದುದರಿಂದ ದಲಿತ ಮಾನವ ಅಭಿವೃದ್ಧಿ ಇಂಡೆಕ್ಸ್‌ನ್ನು ಇಂಡೆಕ್ಸ್‌ಗಳನ್ನು ಪರಿಚಯಿಸುವ ಅಧ್ಯಾಯದಲ್ಲಿ ನೀಡಿಲ್ಲ' ಎನ್ನುವ ಉತ್ತರ ನೀಡಿದರು. ನಾನು ದಲಿತ ಮಾನವ ಅಭಿವೃದ್ಧಿ ಸೂಚಿ ಸಿದ್ದಪಡಿಸಿದ್ದೇನೆ. ನನ್ನ ವಿಶ್ವವಿದ್ಯಾಲಯದ ಕೆಲಸಗಳ ನಡುವೆ ಸರಕಾರದ ಮಾನವ ಅಭಿವೃದ್ಧಿ ವರದಿ ಸಿದ್ದಪಡಿಸುವ ಕೆಲಸದಲ್ಲಿ ಭಾಗಿಯಾಗಿದ್ದೇನೆ. ಜೊತೆಗೆ ಮಾನವ ಅಭಿವೃದ್ಧಿ

➞

➞ವರದಿ ಸಿದ್ದಪಡಿಸುವ ಸಂಪನ್ಮೂಲ ವ್ಯಕ್ತಿಗಳಿಗೆ ನಡೆಸಿದ ಎಲ್ಲ ತರಬೇತಿ ಕಮ್ಮಟಗಳಿಗೆ ಹಾಜರಾಗಿ ದಲಿತ ಅಭಿವೃದ್ಧಿ ಸೂಚಿ ಕುರಿತು ಉಪನ್ಯಾಸ ನೀಡಿದ್ದೇನೆ. ಅಷ್ಟು ಮಾತ್ರವಲ್ಲದೆ ದಲಿತ ಮಾನವ ಅಭಿವೃದ್ಧಿ ಸೂಚಿಯಲ್ಲಿರುವ ದೋಷಗಳ ತಿದ್ದುಪಡಿಗೆ ನಡೆಸಿದ ಸಭೆಗಳಲ್ಲೂ ಹಾಜರಾಗಿ ಸಂಪನ್ಮೂಲ ವ್ಯಕ್ತಿಗಳಿಗೆ ಮಾರ್ಗದರ್ಶನ ಮಾಡಿದ್ದೇನೆ. ಆದುದರಿಂದ ನಾನು ಸಭೆಗೆ ಬಾರದ ಕಾರಣ ಈ ಸೂಚಿಯನ್ನು ಇತರ ಸೂಚಿಯನ್ನು ಪರಿಚಯಿಸುವ ಅಧ್ಯಾಯದಲ್ಲಿ ದಾಖಲಿಸಿಲ್ಲ ಎನ್ನುವುದು ಸರಿಯಾದ ಕಾರಣವಾಗುವುದಿಲ್ಲ. ದಲಿತ ಮಾನವ ಅಭಿವೃದ್ಧಿ ಸೂಚಿಯನ್ನು ಇತರ ಇಂಡೆಕ್ಸ್‌ಗಳೊಂದಿಗೆ ದಾಖಲಿಸಲು ಇದೊಂದು ಇಂಡೆಕ್ಸ್‌ನ ಗುಣಲಕ್ಷಣಗಳನ್ನು ಹೊಂದಿದೆಯೋ ಇಲ್ಲವೇ ಎನ್ನುವುದು ಮುಖ್ಯವಾಗಬೇಕೇ ಹೊರತು ನಾನು ಸಭೆಗೆ ಬಂದಿದ್ದೇನೋ ಇಲ್ಲವೋ ಎನ್ನುವುದು ಮುಖ್ಯವಾಗಬಾರದು. ಇಂತಹ ಸಿಲ್ಲಿ ಕಾರಣ ಕೊಟ್ಟು ದಲಿತ ಮಾನವ ಅಭಿವೃದ್ಧಿ ಸೂಚಿಯನ್ನು ಅಂಚಿಗೆ ಸರಿಸಿದ್ದು ನೋಡಿದಾಗ ದಲಿತರು ಊರಲ್ಲಿ ಮಾತ್ರ ಎಲ್ಲರೊಂದಿಗಿರುವ ಅವಕಾಶದಿಂದ ವಂಚಿತರಲ್ಲ ಅವರ ಅಭಿವೃದ್ಧಿ ಬಗ್ಗೆ ಇರುವ ಸೂಚಿ ಕೂಡ ಎಲ್ಲ ಇಂಡೆಕ್ಸ್‌ಗಳೊಂದಿಗಿರುವ ಅವಕಾಶದಿಂದ ವಂಚಿತವಾಗಿದೆ.' ಎನ್ನುವ ಅಂಶವನ್ನು ಅವರ ಗಮನಕ್ಕೆ ತಂದಿದ್ದೇನೆ.

ತಲಾ ಆದಾಯ ಅಭಿವೃದ್ಧಿಯನ್ನು ಮಾಪನ ಮಾಡಲು ಸಮರ್ಥವಾದ ಮಾನದಂಡವಲ್ಲವೆಂದು ಮಾನವ ಅಭಿವೃದ್ಧಿ ಮುಂಚೂಣಿಗೆ ಬಂದಿದೆ. ಮಾನವ ಅಭಿವೃದ್ಧಿ ಆದಾಯದೊಂದಿಗೆ ಆರೋಗ್ಯ ಮತ್ತು ಶಿಕ್ಷಣಗಳನ್ನು ಕೂಡ ಮಾಪನ ಮಾಡುತ್ತದೆ. ಆದುದರಿಂದ ಇದು ಹೆಚ್ಚು ಸಮಗ್ರವಾದ ಅಭಿವೃದ್ಧಿ ಮಾಪಕವೆಂದು ಪರಿಗಣಿಸಲ್ಪಟ್ಟಿದೆ. ಎಲ್ಲ ದೇಶಗಳು ಹಾಗು ರಾಜ್ಯಗಳು ಮಾನವ ಅಭಿವೃದ್ಧಿ ವರದಿಯನ್ನು ಸಿದ್ದಪಡಿಸುತ್ತಿವೆ. ಹಾಗೆಂದು ಮಾನವ ಅಭಿವೃದ್ಧಿ ಇಂಡೆಕ್ಸ್ ಕೂಡ ಯಾವುದೇ ಕೊರತೆಗಳಿಲ್ಲದ ಮಾಪಕವಲ್ಲ. ಇದು ಕೂಡ ತಲಾ ಆದಾಯದಂತೆ ಪ್ರದೇಶದ ಅಭಿವೃದ್ಧಿಯನ್ನು ಮಾಪನ ಮಾಡುತ್ತಿದೆಯೇ ಹೊರತು ಪ್ರದೇಶದೊಳಗೆ ಬರುವ ವಿವಿಧ ಸಮಯದಾಯಗಳ ಅಭಿವೃದ್ಧಿಯನ್ನು ಮಾಪನ ಮಾಡುತ್ತಿಲ್ಲ. ಈ ಕೊರತೆಯ ಜೊತೆಗೆ ಇದು ಸಾಮಾಜಿಕ ಅಂಶಗಳೆಂದು ಪರಿಗಣಿಸುವ ಶಿಕ್ಷಣ ಮತ್ತು ಆರೋಗ್ಯಗಳು ವಾಸ್ತವದಲ್ಲಿ ಆರ್ಥಿಕ ಸ್ಥಿತಿಯ ಮತ್ತೊಂದು ರೂಪವೇ ಆಗಿದೆ. ಅಷ್ಟು ಮಾತ್ರವಲ್ಲ ನಿಜವಾದ ಸಾಮಾಜಿಕ ಅಂಶವಾದ ಜಾತಿ, ಮಾನವ ಅಭಿವೃದ್ಧಿ ಇಂಡೆಕ್ಸ್‌ನ ವ್ಯಾಪ್ತಿಯಿಂದ ಸಂಪೂರ್ಣ ಹೊರಗುಳಿದಿದೆ. ನಮ್ಮಂತಹ ಸಮಾಜದಲ್ಲಿ ಜಾತಿ ಮತ್ತು ಅಭಿವೃದ್ಧಿ ನಡುವೆ ಸಂಬಂಧ ಇದೆ. ಜಾತಿ ಮತ್ತು ಅಭಿವೃದ್ಧಿ ನಡುವಿನ ಸಂಬಂಧ ಅಸ್ಪೃಶ್ಯತೆಯಿಂದ ಇನ್ನೂ ಹೆಚ್ಚು ಸಂಕೀರ್ಣಗೊಂಡಿದೆ. ಈ ಸಂಕೀರ್ಣತೆಯನ್ನು ಮಾನವ ಅಭಿವೃದ್ಧಿ ಇಂಡೆಕ್ಸ್ ಹಿಡಿದಿಡಲು ವಿಫಲವಾಗಿದೆ. ಈ ಎಲ್ಲದರ ಹಿನ್ನೆಲೆಯಲ್ಲಿ ದಲಿತ ಮಾನವ ಅಭಿವೃದ್ಧಿ ಇಂಡೆಕ್ಸ್‌ನ್ನು ಅಭಿವೃದ್ಧಿ ಪಡಿಸಿದ್ದೇನೆ. ಇದು ಮಾನವ ಅಭಿವೃದ್ಧಿ ಇಂಡೆಕ್ಸ್‌ನ ಎಲ್ಲ ಕೊರತೆಗಳನ್ನು ತುಂಬುವುದರ ಜೊತೆಗೆ ಅಭಿವೃದ್ಧಿಯ ರಾಜಕೀಯ ಆಯಾಮವನ್ನು ಹಿಡಿದಿಡಲು ಪ್ರಯತ್ನಿಸುತ್ತಿದೆ. ಹಾಗೆಂದು ಇದೊಂದು ಪರಿಪೂರ್ಣವಾದ ಇಂಡೆಕ್ಸ್ ಎಂದು ನಾನು ಭಾವಿಸುವುದಿಲ್ಲ. ಹಲವು ಪ್ರಯೋಗಗಳ ನಂತರ ಈ ಇಂಡೆಕ್ಸ್ ಪರಿಪೂರ್ಣತೆಯನ್ನು ಪಡೆಯಬಹುದು. ●

ತುಮಕೂರು: ರಸ್ತೆ, ನೀರು ಆಗ್ರಹಿಸಿ ರಸ್ತೆ ತಡೆ



ತುಮಕೂರು ಮಹಾನಗರಪಾಲಿಕೆಯ ವ್ಯಾಪ್ತಿಗೆ ಬರುವ 6ನೇ ವಾರ್ಡ್‌ನ ದಿಬ್ಬೂರು ಜನತಾ ಕಾಲೋನಿಯಲ್ಲಿ ವಾಸ ಮಾಡುವ ಜನತೆಗೆ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ರಸ್ತೆ, ಚರಂಡಿ, ಬೀದಿದೀಪ ಸೇರಿದಂತೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡುವಂತೆ ಆಗ್ರಹಿಸಿ ಹಾಗೂ ಜನಪ್ರತಿನಿಧಿಗಳು ಆಗಮಿಸಿ ಬಡಾವಣೆಯಲ್ಲಿನ ಜನತೆ ಅನುಭವಿಸುತ್ತಿರುವ ಸಮಸ್ಯೆಗಳನ್ನು ಕಣ್ಣಾರೆ ನೋಡಬೇಕು ಎಂದು ಆಗ್ರಹಿಸಿ ದಿಬ್ಬೂರು ಜನತಾ ಕಾಲೋನಿ ನಾಗರೀಕ ಹೋರಾಟ ಸಮಿತಿ ನೇತೃತ್ವದಲ್ಲಿ ದಿಬ್ಬೂರು ಜನತಾ ಕಾಲೋನಿಗೆ ಹೋಗುವ ಮುಖ್ಯ ರಸ್ತೆಯನ್ನು ತಡೆದು ಧರಣಿ ನಡೆಸಿದರು.

ಧರಣಿ ನಡೆಸುತ್ತಿದ್ದ ಸ್ಥಳಕ್ಕೆ ಆಗಮಿಸಿದ ಮಹಾನಗರಪಾಲಿಕೆಯ ಎ.ಇ.ಇ ಚನ್ನಬಸವರಾಧ್ಯ ಮತ್ತು ಇತರೆ ಅಧಿಕಾರಿಗಳನ್ನು ಅರ್ಧಗಂಟೆಗೂ ಹೆಚ್ಚು ಕಾಲ ಬಡಾವಣೆಯನ್ನು ಸುತ್ತಾಡಿಸಿ ಇಲ್ಲಿನ ಜನ ಅನುಭವಿಸುತ್ತಿರುವ ಸಮಸ್ಯೆಗಳನ್ನು ಕಣ್ಣಾರೆ ತಿಳಿಯಿರಿ ಎಂದು ಸುತ್ತಾಡಿಸಿದರು ವಾಸ್ತವತೆಯನ್ನು ಅರಿತ ಅಧಿಕಾರಿಗಳು ಧರಣಿ ಸ್ಥಳಕ್ಕೆ ಬಂದು ಮನವಿ ಸ್ವೀಕರಿಸಿ ಮಾತನಾಡಿದ ಎ.ಇ.ಇ. ಚನ್ನಬಸವರಾಧ್ಯರವರು ಮಾತನಾಡಿ ಇಲ್ಲಿನ ಸಮಸ್ಯೆಗಳು ವಿಪರೀತವಿದ್ದು ಜನರು ವಾಸಮಾಡುವ ಸ್ಥಿತಿ ಇಲ್ಲ, ನಾಳೆಯಿಂದಲೆ ಕೆಲಸವನ್ನು ಆರಂಭಿಸಿ ಇನ್ನೂ ಒಂದು ವಾರದಲ್ಲಿ ಚರಂಡಿ, ರಸ್ತೆ, ಕುಡಿಯುವ ನೀರು ಬೀದಿ ದೀಪಗಳನ್ನು ಅಳವಡಿಸಲಾಗುವುದು ಎಂದು ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಸಿಐಟಿಯು ತಾಲ್ಲೂಕು ಮುಖಂಡ ರಾಮಚಂದ್ರು, ಡಿ.ವೈ.ಎಫ್.ಐ ಜಿಲ್ಲಾಧ್ಯಕ್ಷ ಎಸ್. ರಾಘವೇಂದ್ರ, ಹೋರಾಟ ಸಮಿತಿಯ ಸಹ ಸಂಚಾಲಕ ಮಂಜುನಾಥ್ ಎಸ್,. ಪರಮೇಶ್, ರಾಜು, ಯೋಗೀಶ್, ವೆಂಕಟೇಶ್, ಗೋವಿಂದರಾಜು, ಹರೀಶ್, ಜಯಮ್ಮ, ನರಸಮ್ಮ, ರಾಧೀಕಾ, ಗಂಗಮ್ಮ, ಚಂದ್ರಶೇಖರ್, ಗಂಗಾರಾಜು ಸೇರಿದಂತೆ ಮುಂತಾದವರು ನೇತೃತ್ವವಹಿಸಿದ್ದರು.

ತುಮಕೂರು: ಸಿಐಟಿಯು ಪ್ರತಿಭಟನೆ

ಮಹದಾಯಿ ಬಿಕ್ಕಟ್ಟು ಮತ್ತು ದಲಿತರ ಮೇಲಿನ ದೌಜನ್ಯ ಖಂಡಿಸಿ 29 ಜುಲೈ 2016 ರಂದು ಸಿಐಟಿಯು ತುಮಕೂರು ಜಿಲ್ಲಾ ಸಮಿತಿಯು ನಗರದ ಟೌನ್ ಹಾಲ್ ಮುಂಭಾಗ ಪ್ರತಿಭಟನೆಯನ್ನು ನಡೆಸಿದರು. ಸಿಐಟಿಯುನ ಜಿಲ್ಲಾ ಕಾರ್ಯದರ್ಶಿ ಎನ್.ಕೆ. ಸುಬ್ರಮಣ್ಯ ಮತ್ತು ತುಮಕೂರು ಪೌರ ಕಾರ್ಮಿಕರ ಸಂಘದ ವೆಂಕಟೇಶ್ ಮಾತನಾಡಿದರು ಚಂದ್ರಪ್ಪ, ನಗರಾಧ್ಯಕ್ಷರಾದ ರಾಮಕೃಷ್ಣಪ್ಪ, ನರಸಿಂಹರಾಜು, ದೇವರಾಜ ಜೂನಿ ಮುಂತಾದವರು ಮುಂದಾಳತ್ವ ವಹಿಸಿದ್ದರು.

ಶಾಲೆಗೆ ನುಗ್ಗಿದ ರಾಮಸೇನೆ–ಡಿವೈಎಫ್ಐ ಖಂಡನೆ

ಮಂಗಳೂರು ನಗರದ ನೀರ್‌ಮಾರ್ಗ ಸಮೀಪದ ಪಡು ಬೊಂಡಂತಿಲ ಸೈಂಟ್ ಥೋಮಸ್ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಅರೇಬಿಕ್ ಭಾಷೆಯನ್ನು ಕಲಿಸುವುದನ್ನು ಸಹಿಸಲಾಗದ ರಾಮಸೇನೆ ಕಾರ್ಯಕರ್ತರು ಶಾಲೆಗೆ ನುಗ್ಗಿ ದಾಂಧಲೆ ನಡೆಸಿರುವ ಘಟನೆಯನ್ನು ಡಿವೈಎಫ್ಐ ವಾಮಂಜೂರು ಪ್ರದೇಶ ಸಮಿತಿ ತೀವ್ರವಾಗಿ ಖಂಡಿಸುತ್ತದೆ.

ಡಿವೈಎಫ್ಐನ ನಿಯೋಗವು ಶಾಲೆಗೆ ಭೇಟಿ ನೀಡಿದ್ದು ಪರಿಸ್ಥಿತಿಯ ಕುರಿತು ಪರಾಮರ್ಶಿಸಲಾಯಿತು. ಶಾಲೆಯ ಆಸಕ್ತ ವಿದ್ಯಾರ್ಥಿಗಳಿಗೆ ಈಗಾಗಲೇ ಜರ್ಮನ್, ಫ್ರೆಂಚ್ ಭಾಷಾ ತರಬೇತಿಯನ್ನು, ಕರಾಟೆ ತರಬೇತಿಯನ್ನು ಉಚಿತವಾಗಿ ನೀಡಿದ್ದು ನಂತರದಲ್ಲಿ ಈಗ ಶಾಲಾ ಸಮಯಕ್ಕೆ ಮುಂಚಿತವಾಗಿ ಅರೇಬಿಕ್ ಭಾಷೆಯನ್ನು ಕಲಿಸಲಾಗುತ್ತಿದೆ. ಶಾಲಾ 160 ವಿದ್ಯಾರ್ಥಿಗಳ ಪೈಕಿ ಹಲವು ಆಸಕ್ತ ವಿದ್ಯಾರ್ಥಿಗಳಿಗೆ ಮಾತ್ರ ಈ ತರಗತಿಯನ್ನು ನೀಡಲಾಗುತ್ತಿದೆ. ಭಾರತದಲ್ಲಿ ಕಾಡುವ ನಿರುದ್ಯೋಗದಿಂದ ಬೇಸತ್ತ ಯುವಜನರು ವಿದೇಶಗಳಿಗೆ ಕೆಲಸಕ್ಕೆ ತೆರಳುವ ಸಂದರ್ಭದಲ್ಲಿ ಸಹಕಾರಿಯಾಗಲೆಂದು ಭವಿಷ್ಯದ ಕಣ್ಣೋಟದಿಂದ ಮಕ್ಕಳಿಗೆ ಅರೇಬಿಕ್ ಕಲಿಸುತ್ತಿದ್ದು ತಾನು ಬಯಸಿದ ಭಾಷೆಯನ್ನು ಕಲಿಯುವ ಹಕ್ಕನ್ನು ಭಾರತ ಸಂವಿಧಾನವು ನೀಡಿದೆ.

ಹಾಗಾಗಿ ಅರೇಬಿಕ್ ಭಾಷಾ ಕಲಿಕೆಯನ್ನು ವಿರೋಧಿಸಿ ಶ್ರೀರಾಮ ಸೇನೆಯ ಜಿಲ್ಲಾ ಮುಖಂಡ ಅಡ್ಯಾರ್ ಆನಂದ ಶೆಟ್ಟಿಯ ನೇತೃತ್ವದಲ್ಲಿ ಈ ದಾಳಿಯು ನಡೆದಿದ್ದು ಈಗ ತಲೆಮರೆಸಿಕೊಂಡಿರುವ ಅಡ್ಯಾರ್ ಆನಂದ ಶೆಟ್ಟಿ ಮತ್ತು ಇತರರನ್ನು ತಕ್ಷಣ ಬಂಧಿಸಬೇಕೆಂದು ಡಿವೈಎಫ್ಐ ಒತ್ತಾಯಿಸುತ್ತದೆ.

ನಿಯೋಗದಲ್ಲಿ ಡಿವೈಎಫ್ಐನ ಜಿಲ್ಲಾ ಜೊತೆ ಕಾರ್ಯದರ್ಶಿಯಾದ ಮನೋಜ್ ವಾಮಂಜೂರು, ಕಾರ್ಮಿಕ ಮುಖಂಡರಾದ ಕೆ. ಗಂಗಯ್ಯ ಅಮೀನ್, ಡಿವೈಎಫ್ಐನ ವಾಮಂಜೂರು ಪ್ರದೇಶ ಸಮಿತಿಯ ಅಧ್ಯಕ್ಷರಾದ ಕೆ. ಹರೀಶ್ ಅಮೀನ್, ಕಾರ್ಯದರ್ಶಿಯಾದ ದಿನೇಶ್ ಬೊಂಡಂತಿಲ ಹಾಗೂ ಡಿವೈಎಫ್ಐ ಮುಖಂಡರಾದ ಅಶೋಕ್ ತಾರಿಗುಡ್ಡ, ಪ್ರವೀಣ್ ತಾರಿಗುಡ್ಡ ನಿಯೋಗದಲ್ಲಿದ್ದರು.

ದಿನೇಶ್ ಬೊಂಡಂತಿಲ

ಮಹಾದಾಯಿ ಮಹಾದೌರ್ಜ್ಯನ್ಯ........

ಪುಟ 9 ರಿಂದ

ಸನ್ನಿವೇಶವಾಗಿತ್ತು. ಪೋಲಿಸ್ ದೌರ್ಜನ್ಯಕ್ಕೆ ಹೆದರಿ ಅಳಗವಾಡಿಯಲ್ಲಿ ಸುಮಾರು 300–350 ಜನರು ಜಮೀನುಗಳಲ್ಲಿ ವಾಸಮಾಡುತ್ತಿದ್ದಾರೆ. ನೆರೆಯ ಗ್ರಾಮಗಳ ಪ್ರಜ್ಞಾವಂತರು ಅವರಿಗೆ ರೊಟ್ಟಿ ತಂದು ಕೊಟ್ಟಿದ್ದಾರೆ. ಅವರು ಭಯದಿಂದ ತತ್ತರಿಸಿದ್ದಾರೆ. ಯುವಕರನ್ನು ಗುರಿಯಾಗಿಸಿಕೊಂಡು ಯಮನೂರಲ್ಲಿ 50–65, ಅಳಗವಾಡಿಯಲ್ಲಿ 70 ಹಾಗೂ ಅರೆಕುರಹಟ್ಟಿಯಲ್ಲಿ 11 ಮತ್ತು ನವಲಗುಂದದಲ್ಲಿ ಹೀಗೆ ಸುಮಾರು 150–160 ಜನರನ್ನು ಬಂಧಿಸಿ ಜೈಲಿಗೆ ಅಟ್ಟಲಾಗಿದೆ. ಅವರಿಗೂ ಸಾಕಷ್ಟು ಹೊಡೆಯಲಾಗಿದೆ. ಮಹಿಳೆಯರು ಮಕ್ಕಳು, ಹಾಗೂ ವೃದ್ದರ ಮೇಲೆ ಹಲ್ಲೆ, ಕದ ತೆರೆಯುವದು ತಡವಾದದ್ದಕ್ಕೂ ಅವರ ಮಕ್ಕಳನ್ನು ಹೊಡೆಯುವುದು, ಬಿಡಿಸೋಕೆ ಹೋದಾಗ ಮಹಿಳೆಯರನ್ನು ಲಾಠಿಯಿಂದ ಹೊಡೆಯಲಾಗಿದೆ. ವೃದ್ದನ ಕೈಮುರಿದಿದೆ. ವೃದ್ಧ ಮಹಿಳೆಯರನ್ನು ಹೊಡೆಯಲಾಗಿದೆ. ಯಾವ ತಪ್ಪಿಗಾಗಿ ಯಾವ ಅಪರಾಧಕ್ಕಾಗಿ ಇವರನ್ನು ಥಳಿಸಲಾಗಿದೆ ಎಂಬುದಕ್ಕೆ ಜಿಲ್ಲಾಡಳಿತ ಉತ್ತರ ಕೊಡಬೇಕು. ಇದೊಂದು ಅತ್ಯಂತ ಕ್ರೌರ್ಯ ಮತ್ತು ಅಮಾನವೀಯತೆಯಿಂದ ಕೂಡಿದ ಕೃತ್ಯವಾಗಿದ್ದು ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದರು.

ಮೂರು ಎಡಪಕ್ಷಗಳ ಜಿಲ್ಲಾ ಸಮಿತಿ ನಿಯೋಗ ಸಿಪಿಐ(ಎಂ) ಕಾರ್ಯದರ್ಶಿ ಶ್ರೀ ಬಿ.ಎಸ್.ಸೊಪ್ಪಿನ, ಎಸ್‌ಯುಸಿಐ(ಸಿ) ಕಾರ್ಯದರ್ಶಿ ಶ್ರೀ ರಾಮಾಂಜನಪ್ಪ ಆಲ್ದಳ್ಳಿ ಅವರ ನೇತೃತ್ವದಲ್ಲಿ ನವಲಗುಂದ ತಾಲೂಕಿನ ಯಮನೂರು, ಅಳಗವಾಡಿ, ಅರೇಕುರಹಟ್ಟಿ ಗ್ರಾಮಗಳಿಗೆ ದಿನಾಂಕ: 31–07–2016 ರಂದು ಭೇಟಿ ನೀಡಿ ಮಹದಾಯಿ ನ್ಯಾಯಾಧಿಕರಣದ ಮಧ್ಯಂತರ ತೀರ್ಪು ಕರ್ನಾಟಕದ ವಿರುದ್ಧ ಬಂದ ಹಿನ್ನೆಲೆಯಲ್ಲಿ ನಡೆದ ಹೋರಾಟದ ನಂತರ ನಡೆದ ಪೋಲೀಸ್ ದೌರ್ಜನ್ಯಕ್ಕೆ ಒಳಗಾದ ಕುಟುಂಬಗಳ ಮನೆಗಳಿಗೆ ಭೇಟಿ ನೀಡಿ ನೈಜ ಸಂಗತಿಗಳನ್ನು ಅಧ್ಯಯನ ಮಾಡಿತು. ಸ್ಥಳೀಯ ಅರೇ ಕುರಹಟ್ಟಿಯ ಮುಖಂಡರಾದ ಯಜಮಾನ ಶ್ರೀ ಕೆ.ಎಚ್. ಲಕ್ಕಣ್ಣವರ ಸೇರಿದಂತೆ 8 ಜನ ಮುಖಂಡರನ್ನೊಳಗೊಂಡ ನಿಯೋಗ ಕಂಡುಕೊಂಡ ಕೆಲವು ಸಂಗತಿಗಳನ್ನು ತಮ್ಮ ಅವಗಾಹನೆಗೆ ತರಬಯಸುತ್ತೇವೆ ಮತ್ತು ಸೂಕ್ತ ನ್ಯಾಯ ಸಮ್ಮತ ಕ್ರಮ ಕೈಗೊಳ್ಳಬೇಕೆಂದು ಧಾರವಾಡದ ಜಿಲ್ಲಾಧಿಕಾರಿಗಳಿಗೆ ಆಗ್ರಹಿಸಿತು.

ಈ ಹಿನ್ನೆಲೆಯಲ್ಲಿ ಎಡಪಕ್ಷಗಳು ಕೆಳಗಿನ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿವೆ.

1. ಈ ಕೂಡಲೇ ಬಂಧಿತ ಎಲ್ಲರನ್ನು ಬೇಷರತ್ತಾಗಿ ಬಿಡುಗಡೆ ಮಾಡಬೇಕು. ಮತ್ತೆ ಅದರ ಮೇಲೆ ಹಾಕಲಾದ ಪ್ರಕರಣಗಳನ್ನು ವಾಪಸ್ಸತೆಗೆದುಕೊಳ್ಳಬೇಕು.
2. ಮೂರು ಗ್ರಾಮಗಳಲ್ಲಿ ಭಯದಿಂದ ಓಡಿಹೋಗಿರುವ ಪುರುಷರು ಮರಳಿ ಬಂದು ಸಹಜ ಬದುಕು ನಡೆಸುವಂತ ವಾತಾವರಣ ನಿರ್ಮಿಸಬೇಕು. ಹಲ್ಲೆಗೊಳಗಾದ ಮಹಿಳೆ ಮಕ್ಕಳು ಹಾಗೂ ಪುರುಷರಿಗೆ ಯೋಗ್ಯ ಉಚಿತ ಚಿಕಿತ್ಸೆ ನೀಡಬೇಕು.
3. ಪೋಲಿಸ ದೌರ್ಜನ್ಯದ ಸಮಗ್ರ ಘಟನೆಯನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು. ಮತ್ತು ತಪ್ಪಿತಸ್ಥ ಪೋಲಿಸರನ್ನು, ಅಧಿಕಾರಿಗಳನ್ನು ಶಿಕ್ಷೆಗೆ ಗುರಿಪಡಿಸಬೇಕು.
4. ನವಲಗುಂದದಲ್ಲಿ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಜಿಲ್ಲಾಡಳಿತ ಸಂಪೂರ್ಣ ವಿಫಲವಾಗಿದೆ. ಈಗ ಅಲ್ಲಿ ಶಾಂತಿ ಸಭೆ ನಡೆಸಿದಂತೆ ಮಾಡಿ ಜನರಿಗೆ ಮತ್ತೊಮ್ಮೆ ವಂಚನೆ ಮಾಡುವುದು ಬೇಡ. ಅಲ್ಲಿ ಈಗ ಆಗಬೇಕಾದದ್ದು ಮೂರು ಹಳ್ಳಿಗಳಿಗೆ ಜಿಲ್ಲಾಧಿಕಾರಿಗಳು, ಜಿಲ್ಲಾ ಪೋಲಿಸ ವರಿಷ್ಠರು ಹೋಗಿ ಜನರಲ್ಲಿ ಮೂಡಿರುವ ಭಯ ನಿವಾರಿಸುವ ಕೆಲಸ ಮಾಡಬೇಕು. ಜಿಲ್ಲಾಡಳಿತ ಮತ್ತು ಸರಕಾರ ಆ ಜನರ ಕ್ಷಮೆ ಕೇಳಬೇಕು.

ಈ ಮೇಲಿನ ಬೇಡಿಕೆಗಳ ಪರಿಹಾರಕ್ಕೆ ಜಿಲ್ಲಾಧಿಕಾರಿಗಳು ಸೂಕ್ತ ಮತ್ತು ನ್ಯಾಯಯುತ ಕ್ರಮಕೈಗೊಳ್ಳಬೇಕು. ನಿಧಾನ ಮಾಡಿದಷ್ಟು ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದೆ ಎಂಬುದನ್ನು ಒತ್ತಿ ಹೇಳಲಾಗಿದೆ,

ಪ್ರತಿಭಟನೆಯಲ್ಲಿ:

ಮಹೇಶ ಪತ್ತಾರ, ಭವಾನಿಶಂಕರ, ಹೇಮಲತಾ, ಬಿ.ಎನ್.ಪೂಜಾರಿ, ಕೆ.ಎಚ್.ಪಾಟೀಲ,ಎನ್.ಎ.ಖಾಜಿ, ಎಚ್.ಜಿ.ಕರೆಯಣ್ಣವರ, ಇನಾಮದಾರ, ಮಾರುತಿ ಅಂಬಿಗೇರ, ಬಿ.ಈ.ಈಳಿಗೇರ ಮುಂತಾದವರು ಪಾಲುಗೊಂಡಿದ್ದರು. ■

ದಲಿತರ ಮೇಲಿನ ದೌರ್ಜನ್ಯ ಖಂಡಿಸಿ ಪ್ರತಿಭಟನೆಗಳು:



ಗುಜರಾತ್ ರಾಜ್ಯದ ಊನಾ ತಾಲೂಕಿನಲ್ಲಿ ಸತ್ತ ಹಸುವಿನ ಚರ್ಮ ಸುಳಿಯುತ್ತಿದ್ದ ದಲಿತರಲ್ಲಿ ನಾಲ್ವರನ್ನು ಅಮಾನುಷವಾಗಿ ಥಳಿಸಿದ ಘಟನೆ, ಮುಂಬಯಿಯ ಚಾರಿತ್ರಿಕ ಅಂಬೇಡ್ಕರ್ ಭವನ ಹಾಗೂ ಬುದ್ಧಭೂಷಣ ಮುದ್ರಣಾಲಯವನ್ನು ಜೂನ್ 25ರಂದು ಮಹಾರಾಷ್ಟ್ರ ಸರಕಾರವೇ ಕೆಡವಿಸಿ ಹಾಕಿದ್ದು, ಉತ್ತರ ಪ್ರದೇಶದ ಬಿಜೆಪಿ ಉಪಾಧ್ಯಕ್ಷರೊಬ್ಬರು ನಾಲ್ಕು ಬಾರಿ ಉತ್ತರ ಪ್ರದೇಶ ರಾಜ್ಯದ ಮುಖ್ಯಮಂತ್ರಿಯಾಗಿದ್ದ ದಲಿತ ಮಹಿಳೆ ಮಾಯಾವತಿಯವರನ್ನು ವೇಶ್ಯೆಗೆ ಹೋಲಿಸಿ ಮಾತನಾಡಿರುವುದು, ಕರ್ನಾಟಕ ರಾಜ್ಯದ ಇತ್ತೀಚಿನ ದಿನಗಳಲ್ಲಿ ಮರಕುಂಬಿ ಚಾಮರಾಜ ನಗರಗಳಲ್ಲಿ ನಡೆದ ದಲಿತರ ಕಗ್ಗೊಲೆಗಳು ಅಲ್ಲದೆ ದಲಿತರಿಗೆ ಹಾಸನ ಜಿಲ್ಲೆಯ ಸಿಗರನಹಳ್ಳಿಯಲ್ಲಿ ದೇವಸ್ಥಾನಕ್ಕೆ ಪ್ರವೇಶ ನಿರಾಕರಿಸಿರುವುದು ಇವೇ ಮೊದಲಾದ ದಲಿತ ವಿರೋಧಿ ಹಾಗೂ ದಲಿತ ದೌರ್ಜನ್ಯದ ಘಟನೆಗಳನ್ನು ಖಂಡಿಸಿ ದ.ಕ.ಜಿಲ್ಲೆಯಲ್ಲಿ ವಿವಿದೆಡೆ ಪ್ರತಿಭಟನೆಗಳು ದಲಿತ ಹಕ್ಕುಗಳ ಸಮಿತಿಯ ನೇತೃತ್ವದಲ್ಲಿ ಇತರ ಪ್ರಗತಿಪರ ಸಂಘಟನೆಗಳ ಸಹಭಾಗಿತ್ವದಲ್ಲಿ ನಡೆದವು.

ಬೆಳ್ತಂಗಡಿಯಲ್ಲಿ ಜುಲಾಯಿ 28 ರಂದು ಬೆಳ್ತಂಗಡಿ ತಾಲೂಕು ಕಚೇರಿ ಎದುರು ನಡೆದ ಪ್ರತಿಭಟನೆಯಲ್ಲಿ ದಲಿತ ಹಕ್ಕುಗಳ ಸಮಿತಿ, ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ, ಡಿವೈಎಫ್‌ಐ, ಸಿಪಿಐ(ಎಂ)ಬೆಳ್ತಂಗಡಿ ತಾಲೂಕು ಸಮಿತಿಗಳು ಭಾಗವಹಿಸಿದ್ದವು. ಪ್ರತಿಭಟನೆಯನ್ನುದ್ದೇಶಿಸಿ ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಸಮಿತಿ ಕಾರ್ಯದರ್ಶಿ ಬಿ.ಎಂ.ಭಟ್, ಡಿವೈಎಫ್‌ಐ ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಸಂತೋಷ್ ಬಜಾಲ್, ಸಮಾಜ ಪರಿವರ್ತನಾ ವೇದಿಕೆಯ ಡೀಕಯ್ಯ ಮಾತನಾಡಿದರು. ದಲಿತ ಹಕ್ಕುಗಳ ಸಮಿತಿಯ ಈಶ್ವರಿ, ಲಾರೆನ್ಸ್ ಭಾಗವಹಿಸಿದ್ದರು.

ಮೂಡಬಿದರೆಯಲ್ಲಿ ದಲಿತ ಹಕ್ಕುಗಳ ರಕ್ಷಣಾ ಜಂಟಿ ಸಮಿತಿಯ ವತಿಯಿಂದ ಜುಲಾಯಿ 25 ರಂದು ನಡೆದ ಪ್ರತಿಭಟನೆಯಲ್ಲಿ ಸಿಪಿಐ(ಎಂ) ಮೂಡಬಿದ್ರೆ ವಲಯ ಕಾರ್ಯದರ್ಶಿ ಯಾದವ ಶೆಟ್ಟಿ ಮಾತನಾಡಿದರು. ದಲಿತ ಹಕ್ಕುಗಳ ಸಮಿತಿ, ಸಿಐಟಿಯು, ಅಖಿಲ ಭಾರತ ದಲಿತ ಕ್ರಿಯಾ ಸಮಿತಿ, ಬಹುಜನ ವಿದ್ಯಾರ್ಥಿ ಸಂಘ, ದಸಂಸ ಅಂಬೇಡ್ಕರ್‌ವಾದ ಇತ್ಯಾದಿ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು. ಪ್ರತಿಭಟನೆಯ ಬಳಿಕ ಮೆರವಣಿಗೆಯಲ್ಲಿ ತಹಶೀಲ್ದಾರ್ ಕಚೇರಿವರೆಗೆ ತೆರಳಿ ಮನವಿ ಸಲ್ಲಿಸಲಾಯಿತು.

ಕರಾವಳಿ ಕಥೆ

ವರದಿ: ವಾ.ಉಚ್ಚಿಲ

ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಆಗಸ್ಟ್ 2 ರಂದು ದಲಿತ ಹಕ್ಕುಗಳ ಸಮಿತಿ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಪ್ರದರ್ಶನವನ್ನುದ್ದೇಶಿಸಿ ಸಮುದಾಯ ಸಂಘಟನೆಯ ವಾಸುದೇವ ಉಚ್ಚಿಲ, ವಿಚಾರವಾದಿ ರಾಷ್ಟ್ರೀಯ ಒಕ್ಕೂಟದ ಅಧ್ಯಕ್ಷ ಪ್ರೊ.ನರೇಂದ್ರ ನಾಯಕ್, ದಲಿತ ಹಕ್ಕುಗಳ ಸಮಿತಿ ಜಿಲ್ಲಾ ಸಂಚಾಲಕ ಲಿಂಗಪ್ಪ ನಂತೂರು ಮಾತನಾಡಿದರು. ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾದ ಕೃಷ್ಣಪ್ಪ ಸಾಲಿಯಾನ್, ಯೋಗೀಶ್ ಜಪ್ಪಿನಮೊಗರು, ಸಾಮಾಜಿಕ ಚಿಂತಕರಾದ ಐ.ವಿ.ಪ್ರಸನ್ನ ಮೊದಲಾದವರು ಭಾಗವಹಿಸಿದ್ದರು.



ಸಿಐಟಿಯು ನೇತೃತ್ವದಲ್ಲಿ ಮನೆಗೆಲಸಗಾರರ ನಗರಮಟ್ಟದ ಸಮಾವೇಶ:



ಉತ್ತಮ ಬದುಕು– ಸಾಮಾಜಿಕ ಭದ್ರತೆಗಾಗಿ ಎಂಬ ಧ್ಯೇಯವಾಕ್ಯದೊಂದಿಗೆ ಮನೆ ಕೆಲಸ ಮಾಡುವ ಕಾರ್ಮಿಕರಿಗೂ ಸಾಮಾಜಿಕ ಭದ್ರತೆ ಒದಗಿಸುವಂತೆ ಆಗ್ರಹಿಸಿ ಸಿಐಟಿಯು ನೇತೃತ್ವದಲ್ಲಿ ಜುಲೈ 31 ರಂದು ಮಂಗಳೂರಿನಲ್ಲಿ ಮನೆಕೆಲಸಗಾರರ ನಗರ ಮಟ್ಟದ ಸಮಾವೇಶ ಜರಗಿತು.

ಮನೆಕೆಲಸಗಾರರು ಅಸಂಘಟಿತ ಕ್ಷೇತ್ರದ ಕಾರ್ಮಿಕರಾಗಿದ್ದು, ಸಾಮಾಜಿಕ ಭದ್ರತೆ ಇಲ್ಲದೆ ದುಡಿಯುವವರಾಗಿದ್ದಾರೆ. ಶ್ರಮ ಜೀವಿಗಳಾದ ಇವರು ಆರ್ಥಿಕವಾಗಿಯೂ ತೀರಾ ಹಿಂದುಳಿದವರಾಗಿದ್ದಾರೆ ರಾಜ್ಯ ಸರಕಾರವು ಇವರಿಗೆ ವಿಶೇಷ ನಿಯಮಾವಳಿ ರೂಪಿಸಿ, ಸಾಮಾಜಿಕ ಭದ್ರತೆ ಒದಗಿಸಬೇಕೆಂದು ಸಮಾವೇಶ ಆಗ್ರಹಿಸಿತು.

ಸಮಾವೇಶವನ್ನುದ್ದೇಶಿಸಿ ಸಿಐಟಿಯು ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ನಗರ ಸಮಿತಿ ಕಾರ್ಯದರ್ಶಿ ಯೋಗೀಶ್ ಜಪ್ಪಿನಮೊಗರು, ಸಿಪಿಐ(ಎಂ) ಮಂಗಳೂರು ನಗರ ಉತ್ತರ ಕಾರ್ಯದರ್ಶಿ ಕೃಷ್ಣಪ್ಪ ಕೊಂಚಾಡಿ, ನಿವೇಶನ ರಹಿತರ ಹೋರಾಟ ಸಮಿತಿಯ ನಗರ ಕಾರ್ಯದರ್ಶಿ ಸಂತೋಷ್ ಶಕ್ತಿನಗರ, ಡಿವೈಎಫ್‌ಐನ ನವೀನ್ ಕೊಂಚಾಡಿ ಮಾತನಾಡಿದರು.

ಸಮಾವೇಶವು ಮಂಗಳೂರು ನಗರ ಮನೆಗೆಲಸಗಾರರ ಸಂಘವನ್ನು ರಚಿಸಿ 34 ಮಂದಿ ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯ್ಕೆ ಮಾಡಿರುತ್ತದೆ. ಜಯಂತಿ ಬಿ.ಶೆಟ್ಟಿ ಅಧ್ಯಕ್ಷರಾಗಿ, ಭಾರತಿ ಬೋಳಾರ್ ಕಾರ್ಯದರ್ಶಿಯಾಗಿ ಆಶಾ ಕೊಂಚಾಡಿ ಖಜಾಂಚಿಯಾಗಿ ಆಯ್ಕೆಯಾಗಿರುತ್ತಾರೆ.

ಮೆಸ್ಕಾಂ ಕಚೇರಿ ಎದುರು ಉಳ್ಳಾಲದಲ್ಲಿ ಸಿಪಿಐ(ಎಂ) ಪ್ರತಿಭಟನೆ:

ಮೆಸ್ಕಾಂ ವಿದ್ಯುತ್ ಬಳಕೆದಾರರಿಂದ ಹೆಚ್ಚಿಸಿದ ಡಿಪಾಸಿಟ್ ವಸೂಲಿ ಮಾಡುತ್ತಿರುವುದು ಹಾಗೂ ವಿದ್ಯುತ್ ದರ ಏರಿಕೆ ವಿರುದ್ಧ ಉಳ್ಳಾಲ ವಲಯ ಸಿಪಿಐ(ಎಂ) ನೇತೃತ್ವದಲ್ಲಿ ತೊಕ್ಕೊಟಿನಲ್ಲಿ ಮೆಸ್ಕಾಂ ಕಚೇರಿ ಎದುರು ಪ್ರದರ್ಶನ ನಡೆಸಿತು.

ಪ್ರತಿಭಟನಾ ಪ್ರದರ್ಶನವನ್ನುದ್ದೇಶಿಸಿ ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಉಳ್ಳಾಲ ವಲಯ ಸಿಪಿಐ(ಎಂ) ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್ ಮಾತನಾಡಿದರು. ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾದ ಪದ್ಮಾವತಿ ಶೆಟ್ಟಿ, ಜಯಂತ ನಾಯ್ಕ್, ಮತ್ತಿತರರು ಭಾಗವಹಿಸಿದ್ದರು.



ಈ ವಾರ ಚರಿತ್ರೆಯಲ್ಲಿ

5 ಅಗಸ್ಟ್ 1889



ಮುಜಫ್ಫರ್ ಅಹಮದ್ ಜನ್ಮದಿನ

ಕಾಮ್ರೆಡ್ ಮುಜಫ್ಫರ್ ಅಹಮದ್ ಭಾರತದ ಕಮ್ಯುನಿಸ್ಟ್ ಚಳುವಳಿ ಮತ್ತು ಪಕ್ಷದ ಸ್ಥಾಪಕರಲ್ಲಿ ಒಬ್ಬರು. 1922ರಲ್ಲಿ ಭಾರತ ಸ್ವಾತಂತ್ರ್ಯತಾ ಸಮಿತಿ ಸ್ಥಾಪಿಸಿ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದ ಮುಜಫ್ಫರ್ 'ಕಮ್ಯುನಿಸ್ಟ್' ಚಟುವಟಿಕೆಗಳಿಗಾಗಿ ಕಾನ್ಪುರ್ ಮತ್ತು ಮೀರತ್ ಪಿತೂರಿ ಮೊಕದ್ದಮೆಗಳಲ್ಲಿ ಆಪಾದಿತರಾಗಿ ದೀರ್ಘ ಕಾಲ ಜೈಲುವಾಸ ಮಾಡಬೇಕಾಯಿತು. 1925ರಲ್ಲಿ ಅವರು ಬಂಗಾಳದಲ್ಲಿ ಲೇಬರ್ ಸ್ವರಾಜ್ ಪಾರ್ಟಿ ಸಂಘಟಿಸಿದರು. ಬಂಗಾಳದಲ್ಲಿ ಕಮ್ಯುನಿಸ್ಟ್ ಚಳುವಳಿಯ ಅಡಿಪಾಯ ಹಾಕಿದ 'ಕಾಕಾಬಾಬು' ಎಂದು ಜನಪ್ರಿಯರಾದ ಅವರನ್ನು ಸ್ವತಂತ್ರ ಭಾರತದ ಕಾಂಗ್ರೆಸ್ ಸರಕಾರಗಳು ಸಹ ಬಂಧಿಸಿ 1948ರಲ್ಲಿ (3 ವರ್ಷಗಳ ಕಾಲ), 1962 ಮತ್ತು 1965ರಲ್ಲಿ 2 ವರ್ಷಗಳ ಕಾಲ ಜೈಲಿಗೆ ಹಾಕಿದ್ದವು. 1973ರವರೆಗೆ ತಮ್ಮ 84 ನೇ ವಯಸ್ಸಿನ ವರೆಗೆ ಕಮ್ಯುನಿಸ್ಟ್ ಚಳುವಳಿಯಲ್ಲಿ ಸಕ್ರಿಯರಾಗಿದ್ದ ಅವರು ಭಾರತದ ಆದರ್ಶ ಕಮ್ಯುನಿಸ್ಟರಲ್ಲಿ ಒಬ್ಬರು. ಪ.ಬಂಗಾಳ ಸಿಪಿಐ(ಎಂ) ರಾಜ್ಯ ಸಮಿತಿಯ ಮುಖ್ಯ ಕಚೇರಿಗೆ ಅವರ ಹೆಸರಿಡಲಾಗಿದೆ.

ಹೆಚ್ಚುವರಿ ಶಿಕ್ಷಕರ ವರ್ಗಾವಣೆ ವಿರೋಧಿಸಿ ಎಸ್‌ಎಫ್‌ಐ ನಿಂದ ಅಲ್ಲಲ್ಲಿ ಪ್ರತಿಭಟನೆಗಳು:

ವಿದ್ಯಾರ್ಥಿಗಳ ಪ್ರಮಾಣ ಕಡಿಮೆ ಇದೆ; ಸರಕಾರ ನಿಗದಿಗೊಳಿಸಿದ ಸಂಖ್ಯೆಗಿಂತ ಕಡಿಮೆ ವಿದ್ಯಾರ್ಥಿಗಳಿರುವಲ್ಲಿ ಶಿಕ್ಷಕರು ಹೆಚ್ಚುವರಿಯಾಗಿದ್ದಾರೆ ಎಂದು ಪರಿಗಣಿಸಿ ರಾಜ್ಯ ಸರಕಾರವು ಹೆಚ್ಚುವರಿ ಶಿಕ್ಷಕರನ್ನು ವರ್ಗಾವಣೆ ಮಾಡುವುದನ್ನು ಪ್ರತಿಭಟಿಸಿ, ಎಸ್‌ಎಫ್‌ಐ ಜಿಲ್ಲಾ ಸಮಿತಿ ಹಾಗೂ ಘಟಕಗಳ ನೇತೃತ್ವದಲ್ಲಿ ಮಂಗಳೂರು ತಾಲೂಕಿನ ವಿವಿಧ ಪ್ರಾಥಮಿಕ ಶಾಲೆಗಳಲ್ಲಿ ಎಸ್‌ಎಫ್‌ಐ ಶಾಲಾಭಿವೃದ್ಧಿ ಸಮಿತಿಗಳು ಹಾಗೂ ವಿದ್ಯಾರ್ಥಿಗಳು ಜತೆಗೂಡಿ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಲಾಗಿದೆ.

ಅಕ್ಷರ ಸಂತ ಹರೇಕಳ ಹಾಜಬ್ಬನವರ ಪರಿಶ್ರಮದ ಫಲವಾಗಿ ನಿರ್ಮಾಣಗೊಂಡ ಹರೇಕಳ ನ್ಯೂಪಡ್ಪುವಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿಯನ್ನು ಹೆಚ್ಚುವರಿ ಎಂದು ಬೇರೆಡೆಗೆ ವರ್ಗಾಯಿಸಿರುವುದನ್ನು ಜುಲಾಯಿ 30ರಂದು ವಿದ್ಯಾರ್ಥಿಗಳು ಹಾಗೂ ಪೋಷಕರು ಎಸ್‌ಎಫ್‌ಐ ನೇತೃತ್ವದಲ್ಲಿ ಪ್ರತಿಭಟಿಸಿರುವುದು ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಗಿದೆ.

ಪ್ರತಿಭಟನೆ ನಡೆಸಿದಲ್ಲೆಲ್ಲಾ ಆ ದಿನ ವಿದ್ಯಾರ್ಥಿಗಳು ತಮ್ಮ ಪೋಷಕರ ಬೆಂಬಲದೊಂದಿಗೆ ಶಾಲೆಯನ್ನು ಬಹಿಷ್ಕರಿಸಿ ಪ್ರದರ್ಶನ ನಡೆಸಿದರು.

ಜುಲಾಯಿ 28 ರಂದು ಮರಕಡ, ಕುತ್ತಾರ್(ಮುನ್ನೂರು) ಕಸಬಾ ಬೆಂಗ್ರೆ ಪ್ರಾಥಮಿಕ ಶಾಲೆಗಳ ಎದುರು, ಜುಲಾಯಿ 29 ರಂದು ಕಣ್ಣೂರು, ಕಿನ್ಯಾ, ಬೆಳರೆಂಗೆ, ಕಿನ್ಯಾ ರಹಮತ್ ನಗರ ಪ್ರಾಥಮಿಕ ಶಾಲೆಗಳ ಎದುರು, ಜುಲಾಯಿ 30 ರಂದು ಹರೇಕಳ ಹಾಜಬ್ಬರ ಶಾಲೆಯ ಎದುರು, ಆಗಸ್ಟ್ 1 ರಂದು ಅಂಬ್ಲಮೊಗರು ಮತ್ತು ಎಲಿಯಾರ್‌ಪದವು ಪ್ರಾಥಮಿಕ ಶಾಲೆಗಳ ಎದುರು ಪ್ರತಿಭಟನಾ ಪ್ರದರ್ಶನಗಳನ್ನು ಏರ್ಪಡಿಸಲಾಗಿದೆ.



4ನೇ ಕೋಲಾರ ಸಿಐಟಿಯು ಜಿಲ್ಲಾ ಸಮ್ಮೇಳನ

‘ಕಾರ್ಮಿಕರ ಗೋರಿ ತೋಡಲು ಮೋದಿ ಸರ್ಕಾರ ಮುಂದಾಗಿದೆ’

ವರದಿ : ವಿಜಯಕೃಷ್ಣ

ದಿನ ಬೆಳಗಾದರೆ ದೇಶಪ್ರೇಮದ ಪಾಠ ಹೇಳುವ ಪ್ರಧಾನಮಂತ್ರಿ ನರೇಂದ್ರಮೋದಿಗೆ ದೇಶದ ಆರ್ಥಿಕತೆಯ ಬೆನ್ನೆಲುಬಾಗಿರುವ ಕಾರ್ಮಿಕರ ದೈನಂದಿನ ಸಂಕಷ್ಟಗಳ ನಿವಾರಣೆಗೆ ಕಾಳಜಿ ತೋರದೆ ಕಾರ್ಪೋರೇಟ್ ಕಂಪನಿಗಳಿಗೆ ಅನುಕೂಲಕರ ವಾತಾವರಣವನ್ನು ನಿರ್ಮಾಣ ಮಾಡುತ್ತಿದ್ದಾರೆ ಎಂದು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ॥ಎಸ್.ವರಲಕ್ಷ್ಮೀ ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಮಿಕರ ಪರವಾದ ನೀತಿಗಳನ್ನು ಜಾರಿಗೊಳಿಸಬೇಕು, ಕೃಷಿಯಾಧಾರಿತ ಕೈಗಾರಿಕೆಗಳ ಸ್ಥಾಪನೆಗಾಗಿ, ಶಾಶ್ವತ ನೀರಾವರಿ ಯೋಜನೆಗಳ ಜಾರಿಗಾಗಿ ಒತ್ತಾಯಿಸಿ 31 ಜುಲೈ ಮತ್ತು 1 ಆಗಸ್ಟ್ 2016 ರಂದು ಕೋಲಾರ ನಗರದಲ್ಲಿ ನಡೆದ ಸಿಐಟಿಯು ಕೋಲಾರ ಜಿಲ್ಲಾ 4ನೇ ಸಮ್ಮೇಳನವನ್ನು ಅವರು ಉದ್ಘಾಟಿಸಿ ಮಾತನಾಡುತ್ತಿದ್ದರು. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ರಚನೆಯಾದರೆ ಭಾರತಕ್ಕೆ ಅಚ್ಛೇ ದಿನ್ ಬರಲಿದೆ ಎಂದು ಬಡಾಯಿ ಕೊಚ್ಚಿಕೊಂಡಿದ್ದ ಮೋದಿ, ಬಂಡವಾಳಗಾರರ ಪರ ನೀತಿಗಳನ್ನು ಜಾರಿಗೆ ತರುವ ಮೂಲಕ ಗೋಸುಂಬೆತನ ಪ್ರದರ್ಶಿಸುತ್ತಿದ್ದಾರೆ ಎಂದು ಆರೋಪಿಸಿದರು.



ಕಾರ್ಮಿಕರಿಗೆ ಸ್ವಲ್ಪ ಮಟ್ಟಿಗೆ ಅನುಕೂಲಕರವಾಗಿದ್ದ ಕಾನೂನುಗಳನ್ನು ಮೋದಿ ಪ್ರಧಾನಿಯಾದ ನಂತರ ಸಾರಾಸಗಟಾಗಿ ಮಾಲೀಕರಿಗೆ ಪರವಾಗಿ ತಿದ್ದುಪಡಿ ಮಾಡುತ್ತಿದ್ದಾರೆ. ಕಾರ್ಮಿಕರು ಕಾನೂನು ರೀತ್ಯಾ ಸಂಘ ರಚಿಸಿಕೊಳ್ಳಲು ಸಾಧ್ಯವಾಗದಂತ ಪರಿಸ್ಥಿತಿಯನ್ನು ಉಂಟು ಮಾಡಿದ್ದಾರೆ. ಮಾಲೀಕರು ಸರ್ಕಾರಕ್ಕೆ ತಿಳಿಸದೇ ಮತ್ತು ಕಾರ್ಮಿಕರಿಗೆ ಯಾವುದೇ ಪರಿಹಾರ ನೀಡದೇ ತಮ್ಮ ಕಂಪನಿಯನ್ನು ಮುಚ್ಚಿಕೊಂಡು ಹೋಗಬಹುದಾಗಿದೆ. ಕೇಂದ್ರದಲ್ಲಿ ಈ ಹಿಂದೆ ಅಧಿಕಾರ ನಡೆಸಿದ ಕಾಂಗ್ರೆಸ್ ಸರ್ಕಾರ ಸಹ ಆರ್ಥಿಕ, ಕೈಗಾರಿಕೆಗಳನ್ನು ನೀತಿಗಳನ್ನು ಜಾರಿಗೆ ತಂದು ಕಾರ್ಮಿಕರಿಗೆ ಮರಣ ಶಾಸನ ಬರೆದರೆ, ಇಂದಿನ ಬಿಜೆಪಿ ನೇತೃತ್ವದ ಸರ್ಕಾರ ಕಂಪನಿಗಳ ಪರವಾಗಿ ನೀತಿಗಳನ್ನು ರೂಪಿಸಿ ಕಾರ್ಮಿಕರ ಗೋರಿ ತೋಡಲು ಮುಂದಾಗಿದೆ ಎಂದು ವಿವರಿಸಿದರು.

ಈ ಹಿಂದೆ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ವಿರೋಧಿಸಿದ್ದ ಮೋದಿ ಇಂದು ರಕ್ಷಣೆ, ಆರೋಗ್ಯ, ಚಿಲ್ಲರೆ ಸೇರಿದಂತೆ ಹಲವಾರು ಕ್ಷೇತ್ರದಲ್ಲಿ ಶೇ.100 ರಷ್ಟು ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅವಕಾಶ ಕಲ್ಪಿಸಿದ್ದಾರೆ. ಇದರಿಂದ ಮುಂದಿನ ದಿನಗಳಲ್ಲಿ ದೇಶದಲ್ಲಿ ದೊಡ್ಡ ಮಟ್ಟದ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿದೆ ಎಂದು ಬೊಬ್ಬೆ ಹಾಕಲಾಗುತ್ತಿದೆ. ದೇಶದ ಹಿತಾಸಕ್ತಿಯನ್ನು ಬಲಿಕೊಟ್ಟು ವಿದೇಶಿ ನೇರ ಬಂಡವಾಳಕ್ಕೆ ಅವಕಾಶ ಕಲ್ಪಿಸಿದ್ದಾರೆ. ಇದರಿಂದ ಮುಂದಿನ ದಿನಗಳಲ್ಲಿ ದೇಶಕ್ಕೆ ಮಾರಕವಾಗಲಿದೆ ಎಂದು ವಿವರಿಸಿದರು.

ಚುನಾವಣೆ ಮುಂಚೆ ಪ್ರತಿ ವರ್ಷ 2 ಕೋಟಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಾಗುವುದು ಎಂದು ಬಿಜೆಪಿ ಭರವಸೆ ನೀಡಿತ್ತು. ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಇರುವ ಉದ್ಯೋಗಗಳು ಕಡಿತವಾಗುತ್ತಿದೆ. ಬಹುತೇಕ ಉದ್ಯೋಗಗಳು ಗುತ್ತಿಗೆ, ಅರೆಗುತ್ತಿಗೆ, ಹೊರ ಗುತ್ತಿಗೆ ಹೆಸರಿನಲ್ಲಿ ಯಾವುದೇ ಭದ್ರತೆ ಇಲ್ಲದೇ ದುಡಿಯುವಂತ ಪರಿಸ್ಥಿತಿ ದೇಶದಲ್ಲಿ ನಿರ್ಮಾಣವಾಗಿದೆ. ದೇಶದಲ್ಲಿ ಶೇ.90 ರಷ್ಟು ಕಾರ್ಮಿಕರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದು, ಇವರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುತ್ತಿಲ್ಲ. ಅಂಗನವಾಡಿ, ಬಿಸಿಯೂಟ, ಆಶಾ ಕಾರ್ಯಕರ್ತೆ–ಯರು ಗ್ರಾಮೀಣ ಪ್ರದೇಶದಲ್ಲಿ ಗಮನಾರ್ಹ ಸೇವೆ ಸಲ್ಲಿಸುತ್ತಿದ್ದರೂ, ಈ ಯೋಜನೆಗಳಿಗೆ ನೀಡುತ್ತಿರುವ ಅನುದಾನವನ್ನು ಕಡಿತಗೊಳಿಸಿ, ಈ ಯೋಜನೆಗಳನ್ನು ಖಾಸಗೀಕರಣ ಮಾಡಲು ತುದಿಗಾಲಿನಲ್ಲಿ ನಿಂತಿ–ದ್ದಾರೆ ಆರೋಪಿಸಿದರು.

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಕನಿಷ್ಠ ವೇತನ ನೀತಿ ಕಾರ್ಮಿಕರನ್ನು ಮತ್ತಷ್ಟು ಶೋಷಣೆಗೆ ಗುರಿಪಡಿಸಿದೆ. ಕಾರ್ಮಿಕರ ಭವಿಷ್ಯ ನಿಧಿ ವಿಚಾರದಲ್ಲೂ ಮೋದಿ ಸರ್ಕಾರ ಅನ್ಯಾಯವೆಸಗುತ್ತಿದೆ. ಅನೇಕ ವರ್ಷಗಳಿಂದ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಹೆಚ್ಚಿನ ಅನುಕೂಲ ಮಾಡಿ, ದೇಶದ ಅಭಿವೃದ್ಧಿಗೆ ಚಿಂತನೆ ಮಾಡುವ ಬದಲು ಗುತ್ತಿಗೆ ಆಧಾರದ ಮೇಲೆ ಕಾರ್ಮಿಕರನ್ನು ನೇಮಿಸಿಕೊಂಡು ಕಂಪನಿಗಳು ಲೂಟಿ ಮಾಡಲು ಅವಕಾಶ ಕಲ್ಪಿಸಿದ್ದಾರೆ. ದೇಶದಲ್ಲಿನ ಕಾರ್ಮಿಕರ ದಮನ ವಿರೋಧಿಸಿ ಕಾರ್ಮಿಕರ ಪರವಾಗಿ ನೀತಿ ಜಾರಿಗೆ ಆಗ್ರಹಿಸಿ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಜಂಟಿಯಾಗಿ ಸೆಪ್ಟೆಂಬರ್ 2 ರಂದು ದೇಶವ್ಯಾಪಿ ಮುಷ್ಕರಕ್ಕೆ ಕರೆ ನೀಡಿದ್ದು, ಜಿಲ್ಲೆಯ ಎಲ್ಲಾ ಕಾರ್ಮಿಕರು ಹೋರಾಟದಲ್ಲಿ ತೊಡಗಿಸಿಕೊಳ್ಳುವಂತೆ ಮನವಿ ಮಾಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸಿಐಟಿಯು ರಾಜ್ಯ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಮಾತನಾಡಿ ಕಾರ್ಮಿಕರು ತಮ್ಮ ದುಡಿಮೆ, ಶ್ರಮದ ಆಧಾರದಲ್ಲಿ ವೇತನ ನೀಡಿ ಎನ್ನುತ್ತಿದ್ದಾರೆ. ಅದು ಅವರ ಹಕ್ಕು ಆಗಿದೆ. ಆದರೆ ಕೇಂದ್ರ ಸರ್ಕಾರ ಅನುಸರಿಸುತ್ತಿರುವ ನೀತಿಗಳ ಪರಿಣಾಮ ಕಾರ್ಮಿಕರು ದುಡಿಮೆ ತಕ್ಕ ವೇತನ ಸಿಗದಂತ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಟೀಕಿಸಿದರು.

ಜನಸಾಮಾನ್ಯರು ಬ್ಯಾಂಕಿನಲ್ಲಿ ಠೇವಣಿ ಇಟ್ಟ ಹಣದಲ್ಲಿ ಸಾವಿರಾರು ಕೋಟಿ ಸಾಲವನ್ನು ಕೆಲ ಉದ್ಯಮಿಗಳು ಪಡೆದು ಮರು ಪಾವತಿಸದೇ ದೇಶ ಬಿಟ್ಟು ಹೋದರೂ ಕೇಳುವವರಿಲ್ಲ. ಅಲ್ಪಸ್ವಲ್ಪ ಸಾಲ ಪಡೆಯುವ ರೈತರನ್ನು ಮಾತ್ರ ಕಾಡುತ್ತಾರೆ. ಶ್ರೀಮಂತರು ಪಾವತಿಸಬೇಕಾಗಿದ್ದ 1.75 ಲಕ್ಷ ಕೋಟಿ ತೆರಿಗೆ ವಿನಾಯಿತಿಯನ್ನು ಸರ್ಕಾರ ನೀಡಿದೆ. ಆದರೆ ಜನಸಾಮಾನ್ಯನ ಮೇಲೆ ವಿಪರೀತ ತೆರಿಗೆ ವಿಧಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಮ್ಮೇಳನಕ್ಕೂ ಮುನ್ನ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ನಂತರ ಸಮ್ಮೇಳನವು ಕಾಂ॥ಎಸ್.ಪ್ರಸನ್ನಕುಮಾರ್ ವೇದಿಕೆಯಲ್ಲಿ ನಡೆಯಿತು. ಸಮ್ಮೇಳನ ಸುಸೂತ್ರ ನಡೆಯಲು ಅಧ್ಯಕ್ಷಿಣಿ ಮಂಡಳಿ, ನಿರ್ಣಯ ಮಂಡಳಿ, ಪರಿಚಯ ಪತ್ರ, ದಾಖಲಾತಿ ಸಮಿತಿಗಳನ್ನು ರಚಿಸಲಾಯಿತು. ಜಿಲ್ಲಾ ಪ್ರದಾನ ಕಾರ್ಯದರ್ಶಿ ಬಿ.ಎಸ್.ನಾಗರತ್ನರವರು ಮಂಡಿಸಿದ ಕರಡು ವರದಿಯ ಮೇಲೆ ಮೂರು ಗಂಟೆಗಳ ಕಾಲ 19 ಮಂದಿ ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದ್ದರು.

ಕೋಲಾರ ಜಿಲ್ಲೆಗೆ ಶಾಶ್ವತ ನೀರಾವರಿ ಯೋಜನೆಗಳನ್ನು ಜಾರಿಗೊಳಿಸಬೇಕು, ಗುತ್ತಿಗೆ ಪದ್ಧತಿಯನ್ನು ರದ್ದು ಮಾಡಬೇಕು, ಸೆಪ್ಟೆಂಬರ್ 2ರ ಅಖಿಲ ಭಾರತ ಮುಷ್ಕರ ಯಶಸ್ವಿ ಮಾಡಲು, ಮಹಿಳೆಯರ ಮೇಲಿನ ದೌರ್ಜನ್ಯ ಖಂಡಿಸಿ, ಕನಿಷ್ಠ ವೇತನ 18,000 ನಿಗದಿಪಡಿಸಲು, ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಮಿಕ ನ್ಯಾಯಾಲಯಗಳ ಸ್ಥಾಪನೆಗಾಗಿ, ಜಿಲ್ಲೆಗೆ ಕೃಷಿಯಾಧಾರಿತ ಕೈಗಾರಿಕೆಗಳ ಸ್ಥಾಪನೆಗಾಗಿ, ಬಿಜಿಎಂಎಲ್ ಚಿನ್ನದ ಗಣಿಯನ್ನು ರಾಜ್ಯ ಸರ್ಕಾರದ ನೇತೃತ್ವದಲ್ಲಿ ಪುನರ್ ಆರಂಭಿಸಲು ಒತ್ತಾಯಿಸಿ ಮತ್ತಿತರರ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ನಂತರ ನೂತನ ಜಿಲ್ಲಾ ಸಮಿತಿಯನ್ನು ರಚಿಸಲಾಯಿತು. ಜಿಲ್ಲಾ ಗೌರವಾಧ್ಯಕ್ಷರಾಗಿ ಗಾಂಧಿನಗರ ನಾರಾಯಣಸ್ವಾಮಿ, ಅಧ್ಯಕ್ಷರಾಗಿ ಜಿ.ಅರ್ಜುನನ್, ಉಪಾಧ್ಯಕ್ಷರಾಗಿ ಪಿ.ಶ್ರೀನಿವಾಸ್, ಆನಂದರಾಜ್, ಜಿ.ಈಶ್ವರಮ್ಮ, ಪ್ರಧಾನ ಕಾರ್ಯದರ್ಶಿ ಬಿ.ಎಸ್.ನಾಗರತ್ನ, ಕಾರ್ಯದರ್ಶಿಗಳಾಗಿ ಎ.ಆರ್.ಬಾಬು, ಮುನಿರಾಜಮ್ಮ, ತಂಗರಾಜ್, ಎಂ.ವಿಜಯಕೃಷ್ಣ, ಶಿವಾನಂದ್, ಅಮರನಾರಾಯಣ, ಕೇಶವರಾವ್ ಸೇರಿದಂತೆ 34 ಮಂದಿಯ ಜಿಲ್ಲಾ ಸಮಿತಿಯನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ●



ಫೇಸ್ ಬುಕನಲ್ಲ

ಮುಖ್ಯಮಂತ್ರಿಯವರ ಮಗನ ಸಾವಿನ ಕುರಿತು ಕೆಟ್ಟಾಕೊಳಕಾಗಿ ಫೇಸ್ ಬುಕ್ ನಲ್ಲಿ ಬರೆದುಕೊಂಡಿದ್ದ ಸುರೇಶ್ ಪೂಜಾರಿ ಎಂಬಾತನಿಗೆ ಚಿಕ್ಕೋಡಿಯ ರಾಯಭಾಗದಲ್ಲಿ ಜನರೇ ಒದ್ದು, ಪೊಲೀಸರಿಗೆ ಹಿಡಿದುಕೊಟ್ಟಿದ್ದಾರೆ. ಆತನ ಮೇಲೆ ಕೇಸು ವಗೈರೆ ಏನೋ ಸರಿ, ಆದರೆ ಈ ರೀತಿಯಲ್ಲಿ ಥಳಿಸುವ ‘ಬೀದಿನ್ಯಾಯ’ ಒಳ್ಳೆಯ ಬೆಳವಣಿಗೆಯಲ್ಲ. ಸುರೇಶ್ ಪೂಜಾರಿಯಂಥ ನೂರಾರು ಯುವಕರಿಗೆ ಧರ್ಮದ ಅಮಲು ಹಚ್ಚಿ, ಪ್ರಚೋದನೆ ಮಾಡಿದವರು ಆರಾಮಾಗೇ ಇರುತ್ತಾರೆ. ಅವರಿಗೇನೂ ಆಗದು. ಆದರೆ ಸುರೇಶನಂಥವರು ಬೀದಿನಾಯಿಯಂತೆ ಏಟು ತಿನ್ನುತ್ತಾರೆ. ಇನ್ನಾದರೂ ಪ್ರಚೋದನೆಗಳಿಗೆ ಒಳಗಾಗುವವರು ಒಂದು ಕ್ಷಣ ತನ್ನ ಮನೆಯಲ್ಲಿರುವ ತಂದೆ, ತಾಯಿ, ಕುಟುಂಬವನ್ನು ಒಮ್ಮೆ ನೆನಪಿಸಿಕೊಳ್ಳುವುದು ಒಳ್ಳೆಯದು. ಯಾಕೆಂದರೆ ಮಗ ಬೀದಿಯಲ್ಲಿ ಒದೆ ತಿಂದರೆ ಅವನಿಗಿಂತ ಹೆಚ್ಚಾಗಿ ನರಳುವವರು ಹೆತ್ತ ತಂದೆ ತಾಯಿಯರು ಮಾತ್ರ.

– ದಿನೇಶ ಕುಮಾರ ದಿನೂ

ಅಸ್ಸಾಂ ತೈಲ ಸಂಪತ್ತನ್ನು ಖಾಸಗಿಯವರ ಲೂಟಿಗೆ ತೆರೆಯುವ ವಿರುದ್ಧ ಸಾರ್ವತ್ರಿಕ ಅಸಂತೃಪ್ತಿ

ರಾಜ್ಯಗಳ ಸುತ್ತ

'ಹೈಡ್ರೋ ಕಾರ್ಬನ್ ಕಣ್ಣೋಟ-ಈಶಾನ್ಯ 2030' ಎಂಬ ಭವ್ಯ ಹೆಸರಲ್ಲಿ ಅಸ್ಸಾಂನ್ನು 'ಹೈಡ್ರೋ ಕಾರ್ಬನ್ ಕೇಂದ್ರ'ವಾಗುತ್ತದೆ ಎಂಬ ಕನಸನ್ನು ಜನರಿಗೆ ಮಾರಿ ಆ ಪ್ರದೇಶದ ತೈಲ ಸಂಪತ್ತನ್ನು ಖಾಸಗಿಯವರ ಲೂಟಿಗೆ ತೆರೆಯುವ ಕೇಂದ್ರ ಸರಕಾರದ ಹುನ್ನಾರದ ವಿರುದ್ಧ ಈಗ ಆ ರಾಜ್ಯದಲ್ಲಿ ಸಾರ್ವತ್ರಿಕ ಅಸಂತೃಪ್ತಿ ಬೆಳೆದು ಬರುತ್ತಿದೆ. ಈಗ ರಾಜ್ಯದಲ್ಲಿ ಮೊದಲ ಬಾರಿಗೆ ಅಧಿಕಾರ ವಹಿಸಿಕೊಂಡಿರುವ ಬಿಜೆಪಿ ಬಿಟ್ಟು ಬೇರೆಲ್ಲ ರಾಜಕೀಯ ಪಕ್ಷಗಳು, ವಿವಿಧ ವಿದ್ಯಾರ್ಥಿ-ಯುವಜನ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು ಮತ್ತಿತರ ಸಂಘಟನೆಗಳು ಅಸ್ಸಾಂನ ನೈಸರ್ಗಿಕ ಸಂಪನ್ಮೂಲಗಳ ಖಾಸಗೀಕರಣದ ಹುನ್ನಾರದ ವಿರುದ್ಧ ಬೀದಿಗಿಳಿಯಲು ಸಿದ್ಧವಾಗುತ್ತಿವೆ. ಬಿಜೆಪಿಯ ಮಿತ್ರ ಪಕ್ಷವಾದ ಅಶೊಂ ಗಣ ಪರಿಷದ್(ಎಜಿಪಿ) ಕೂಡ ಸಾರ್ವಜನಿಕವಾಗಿಯೇ ಇದಕ್ಕೆ ವಿರೋಧ ವ್ಯಕ್ತಪಡಿಸಿದೆ.

ರಾಜ್ಯಾದ್ಯಂತ ನಡೆಯುತ್ತಿರುವ ಪ್ರತಿಭಟನೆಗಳಲ್ಲಿ ಅಪಾರ ಸಂಖ್ಯೆಯಲ್ಲಿ ಜನ ಭಾಗವಹಿಸುತ್ತಿದ್ದಾರೆ. ಆದ್ದರಿಂದ ಕೇಂದ್ರ ಸರಕಾರ ತಕ್ಷಣವೇ ಈ ದಿಕ್ಕಿನಲ್ಲಿ ಸಾಗದೆ ಹಿಂದಕ್ಕೆ ಸರಿಯಬೇಕು, ರಾಜ್ಯದ ತೈಲ ಕ್ಷೇತ್ರಗಳನ್ನು ಖಾಸಗೀಕರಿಸುವ ನಿರ್ಧಾರವನ್ನು ಕೈಬಿಡಬೇಕು ಎಂದು ಹನ್ನೊಂದು ಪಕ್ಷಗಳ 'ಎಡ ಪ್ರಜಾಪ್ರಭುತ್ವ ವೇದಿಕೆ' ಪ್ರಧಾನ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಆಗ್ರಹಿಸಿದೆ. ಈ ವೇದಿಕೆಯಲ್ಲಿ ಎಡಪಕ್ಷಗಳಾದ ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್), ಫಾರ್ವರ್ಡ್ ಬ್ಲಾಕ್ ಮತ್ತು ಆರ್‌ಸಿಪಿಐ ಅಲ್ಲದೆ ಅಶೊಂ ಸಂಗ್ರಾಮಿ ಮಂಚ್, ಎನ್‌ಸಿಪಿ, ಸಮಾಜವಾದಿ ಪಾರ್ಟಿ, ಜನತಾದಳ-ಎಸ್, ಆಮ್ ಆದ್ಮಿ ಪಾರ್ಟಿಮತ್ತು ಲಿಬರಲ್ ಡೆಮಾಕ್ರೆಟಿಕ್ ಪಾರ್ಟಿ ಇವೆ.

ದೇಶದ ಲಾಭದಾಯಕ ಸಾರ್ವಜನಿಕ ಉದ್ದಿಮೆಗಳಲ್ಲಿ ಪ್ರಮುಖವಾದ ಒಎನ್‌ಜಿಸಿ(ತೈಲ ಮತ್ತು ನೈಸರ್ಗಿಕ ಅನಿಲ ನಿಗಮ) ಮತ್ತು ಒಐಎಲ್(ಆಯಿಲ್ ಇಂಡಿಯ ಲಿಮಿಟೆಡ್ ಒಡೆತನದಲ್ಲಿ ಇರುವ, ಅವು ಅಭಿವೃದ್ಧಿ ಪಡಿಸಿದ 12 ತೈಲ ಕ್ಷೇತ್ರಗಳನ್ನು ಆದಾಯ ಹಂಚಿಕೊಳ್ಳುವ ವಿಧಾನದಲ್ಲಿ ಹರಾಜಿನ ಮೂಲಕ ಖಾಸಗಿಯುವರಿಗೆ ವಹಿಸಿಕೊಡುವುದು ಮೋದಿ ಸರಕಾರದ ಈ ಯೋಜನೆಯ ಮುಖ್ಯ ಅಂಶ. ಹೀಗೆ ವಹಿಸಿಕೊಂಡ ಖಾಸಗೀ ಕಂಪನಿಗಳಿಗೆ ಬೆಲೆ ನಿರ್ಧರಿಸುವ ಮತ್ತು ಮಾರುಕಟ್ಟೆಯ ಸ್ವಾತಂತ್ರ್ಯ ಇರುತ್ತದಂತೆ.

ಒಎನ್‌ಜಿಸಿ ಮತ್ತು ಒಐಎಲ್ ಈ ಕ್ಷೇತ್ರಗಳು ಆರ್ಥಿಕವಾಗಿ ಪ್ರಯೋಜನಕಾರಿಯಲ್ಲ ಎಂದು ಇವನ್ನು ಹಾಗೆಯೇ ಬಿಟ್ಟಿರುವುದರಿಂದ ಈ ಆಕರ್ಷಕ ಶರತ್ತುಗಳೊಂದಿಗೆ ಅವನ್ನು ಹರಾಜು ಹಾಕಲಾಗುತ್ತಿದೆ ಎಂಬ ಸರಕಾರದ ದಾವೆ ಕೇವಲ ನೆಪ ಮಾತ್ರ, ಅದು ದೋಷಪೂರ್ಣವಾದ, ಸಮರ್ಥನೀಯವಲ್ಲದ ಕಾರಣ ಎಂದು ಪ್ರಧಾನ ಮಂತ್ರಿಗಳಿಗೆ ಈ ಪಕ್ಷಗಳು ಬರೆದಿರುವ ಪತ್ರ ಅಭಿಪ್ರಾಯ ಪಟ್ಟಿದೆ. ಒಎನ್‌ಜಿಸಿ ಮತ್ತು ಒಐಎಲ್‌ನ ಕೆಲವು ಉನ್ನತ ಅಧಿಕಾರಿಗಳು ಈ ಉದ್ದಿಮೆಯ ಪ್ರಯೋಜನಕ್ಕಿಂತ ತಮ್ಮ ವೈಯಕ್ತಿಕ ಪ್ರಯೋಜನಗಳಿಗೆ ಆದ್ಯತೆ ನೀಡಿರುವ ಉದಾಹರಣೆಗಳು ಈ ಹಿಂದೆಯೂ ಕಂಡು ಬಂದಿವೆ ಎಂಬ ಸಂಗತಿಯತ್ತ ಈ ಪತ್ರ ಪ್ರಧಾನಿಗಳ ಗಮನ ಸೆಳೆದಿದೆ ಎನ್ನಲಾಗಿದೆ.

ಗೃಹಮಂತ್ರಿಗಳಿಗೆ ಕಾಶ್ಮೀರ ಸಿಪಿಐ(ಎಂ) ನಿಯೋಗದ ಆಗ್ರಹ

ಕೊನೆಗೂ ಕೇಂದ್ರ ಗೃಹಮಂತ್ರಿಗಳು ಕಾಶ್ಮೀರಕ್ಕೆ ಭೇಟಿ ನೀಡುವ ಧೈರ್ಯ ತೋರಿದರು. ಶ್ರೀನಗರದಲ್ಲಿ ಅವರನ್ನು ಭೇಟಿಯಾದ ಸಿಪಿಐ(ಎಂ)ನ ರಾಜ್ಯ ನಿಯೋಗ ಕಾಶ್ಮೀರದ ಪರಿಸ್ಥಿತಿಯನ್ನು ವಿವರಿಸುತ್ತ ಅರ್ಥಪೂರ್ಣ ರಾಜಕೀಯ ಸಂವಾದಕ್ಕೆ ಧೈರ್ಯದಿಂದ ಹೆಜ್ಜೆಯಿಡಬೇಕಾದ ಸಮಯವಿದು ಎಂದು ಆಗ್ರಹಿಸಿತು. ಆದರೆ ಅವರು ಕಾಶ್ಮೀರದ ಜನತೆಯ ಆಕ್ರೋಶವನ್ನು ತಗ್ಗಿಸುವ ಕ್ರಮಗಳ ಬಗ್ಗೆ ಯೋಚಿಸುವ ಧೈರ್ಯ ತೋರಿದಂತೆ ಕಾಣುತ್ತಿಲ್ಲ.

ಸಿಆರ್‌ಪಿಎಫ್ ಮಹಾನಿರ್ದೇಶಕರ ಹೇಳಿಕೆಗೆ ಆಕ್ಷೇಪ

ಗೃಹಮಂತ್ರಿಗಳ ಭೇಟಿಯ ಮರುದಿನವೇ ಕೇಂದ್ರೀಯ ಮೀಸಲು ಪೋಲಿಸ್ ಪಡೆಯ ಮಹಾನಿರ್ದೇಶಕರು ಪೆಲೆಟ್ ಗನ್‌ಗಳ ಬಳಕೆ ಮುಂದುವರೆಯುತ್ತದೆ ಎಂದಿರುವುದು "ರಾಜಕೀಯ ಅಧಿಕಾರದ ಸವೆತ'ದ ಸಂಕೇತವಾಗುತ್ತದೆ ಎಂದು ಸಿಪಿಐ(ಎಂ) ಕಾಶ್ಮೀರ ಘಟಕ ತೀವ್ರವಾಗಿ ಟೀಕಿಸಿದೆ. ಈ ಪೆಲೆಟ್‌ಗನ್‌ಗಳ ಬಳಕೆ ಕಾಶ್ಮೀರ ಕಣಿವೆಯಲ್ಲಿ ಭಾರೀ ಆಕ್ರೋಶ ಉಂಟು ಮಾಡಿದೆ. ನೂರಾರು ಯುವಕರು ಕಣ್ಣು ಕಳಕೊಂಡಿದ್ದಾರೆ. ಭಾರತದ ಗೃಹಮಂತ್ರಿಗಳು ಇದನ್ನು ಒಪ್ಪಿಕೊಂಡಿದ್ದಾರೆ. ಆದರೂ ಭದ್ರತಾಪಡೆಗಳ ಅಧಿಕಾರಿ ಇವು ಪ್ರಾಣಾಂತಿಕವೋ ಅಲ್ಲವೋ ಎಂಬ ಚರ್ಚೆಗೆ ಇಳಿದಿರುವುದು ನಮಗೆ ಸರ್ವತಾ ಒಪ್ಪಿಗೆಯಿಲ್ಲ ಎಂದು ಮಹಮ್ಮದ್ ತರಿಗಾಮಿ ಹೇಳಿದ್ದಾರೆ.

ಈ ಪೆಲೆಟ್‌ಗನ್‌ಗಳು ಕಾಶ್ಮೀರದ ಮನಸ್ಸನ್ನು ಘಾಸಿಗೊಳಿಸಿವೆ ಎಂದು ಅವರು ಪುನರುಚ್ಚರಿಸಿದರು.

ಗುಜರಾತ್: ದಲಿತರ ಬೃಹತ್ ರ್‍ಯಾಲಿ



ಉನಾ ಅತ್ಯಾಚಾರದ ವಿರುದ್ಧ ಗುಜರಾತಿನಾದ್ಯಂತ ಭುಗಿಲೆದ್ದ ಆಕ್ರೋಶ ಜುಲೈ 31 ರಂದು ಅಹಮದಾಬಾದಿನಲ್ಲಿ ಬೃಹತ್ ಪ್ರಮಾಣದಲ್ಲಿ ಅಭಿವ್ಯಕ್ತಗೊಂಡಿತು. ಅ ದಿನ ನಡೆದ ಬೃಹತ್ ರ್‍ಯಾಲಿಯಲ್ಲಿ 15 ರಿಂದ 20 ಸಾವಿರ ಜನರು ಭಾಗವಹಿಸಿದ್ದರು ಎಂದು ಮಾಧ್ಯಮ ವರದಿಗಳು ಹೇಳುತ್ತವೆ.

ಈಗ ಕೇಸರಿ ಪಡೆಗಳ ದಾಳಿಗಳಿಗೆ ತುತ್ತಾಗಿರುವ ದಲಿತರು ಮತ್ತು ಮುಸ್ಲಿಮರ ಐಕ್ಯತೆಯ ಕರೆ ಈ ರ್‍ಯಾಲಿ ನೀಡಿದ ಒಂದು ಮುಖ್ಯ ಸಂದೇಶ ಎಂದೊಬ್ಬರು ತಮ್ಮ ಫೇಸ್‌ಬುಕ್ ಟಿಪ್ಪಣಿಯಲ್ಲಿ ಹೇಳಿದ್ದಾರೆ. ಕಳೆದ ಸುಮಾರು ಒಂದೂವರೆ ದಶಕದಿಂದ ದಲಿತರು ಕೇಸರೀ ಪಡೆಗಳ ಕಾಲಾಳುಗಳಾಗಿದ್ದರು. 'ಹಿಂದೂ ಐಕ್ಯತೆ'ಯ ಘೋಷಣೆಯ ಅಡಿಯಲ್ಲಿ ಅವರನ್ನು ವೋಟ್ ಬ್ಯಾಂಕ್ ಮಾಡಲಾಗಿತ್ತು. 2002ರಲ್ಲಿ ಅವರನ್ನು ಮುಸ್ಲಿಮರ ವಿರುದ್ಧ ಛೂ ಬಿಡಲಾಗಿತ್ತು. ಆದ್ದರಿಂದಲೇ ಈ ಕೋಮು ದಳ್ಳುರಿಯಲ್ಲಿ ಪ್ರಾಣ ಕಳಕೊಂಡವರಲ್ಲಿ ಮುಸ್ಲಿಮರ ನಂತರ ದಲಿತರದ್ದೇ ಅತಿ ದೊಡ್ಡ ಸಂಖ್ಯೆ ಎನ್ನಲಾಗಿದೆ. ಕೇಸುಗಳೂ ಅವರ ಮೇಲೆಯೇ ಹೆಚ್ಚು. ಈ ಬಡ ದಲಿತರು ಕಳೆದ 14 ವರ್ಷಗಳಿಂದ ತಮ್ಮ ದಿನಗೂಲಿಗಳನ್ನು ಕಳೆದುಕೊಂಡು ಕೋರ್ಟುಗಳಿಗೆ ಅಲೆದಾಡಬೇಕಾಗಿ ಬಂದಿದೆ.

ಆದರೆ ಇತ್ತೀಚೆನ ವರ್ಷಗಳಲ್ಲಿ, ವಿಶೇಷವಾಗಿ ಗುಜರಾತಿನ ಮುಖ್ಯಮಂತ್ರಿ ದೇಶದ ಪ್ರಧಾನ ಮಂತ್ರಿಯಾದ ಮೇಲೆ ಕೇಸರೀ ಪಡೆಗಳ ನಿಜ ಬಣ್ಣ ದಲಿತರ ಅನುಭವಕ್ಕೆ ಬರುತ್ತಿದೆ. ಉನಾ ಅತ್ಯಾಚಾರ ಅದರ ಇತ್ತೀಚಿನ ಉದಾಹರಣೆಯಷ್ಟೇ.

ದಲಿತ-ಮುಸ್ಲಿಂ ಐಕ್ಯತೆಯ ಮಾತು ಬಿಜೆಪಿ ಮುಖಂಡರ ನಿದ್ದೆಗೆಡಿಸುತ್ತಿದೆಯಂತೆ. ಇದರ ಫಲವೇ ಗುಜರಾತಿನ ಮುಖ್ಯಮಂತ್ರಿಗಳ ರಾಜೀನಾಮೆಯ ಪ್ರಸ್ತಾಪ. ನವಂಬರಿನಲ್ಲಿ 75 ವರ್ಷ ದಾಟುತ್ತಿರುವುದರಿಂದಾಗಿಯಷ್ಟೇ ಈ ರಾಜೀನಾಮೆ ಎಂಬುದು ಕೇವಲ ನೆಪ ಎಂಬುದು ಹೆಚ್ಚಿನ ವಿಶ್ಲೇಷಕರ ಅಭಿಪ್ರಾಯವಾಗಿದೆ.

ಮುಖ್ಯಮಂತ್ರಿಗಳ ರಾಜೀನಾಮೆಯ 'ಆಫರ್' ಅರ್ಥಹೀನ- ಸೀತಾರಾಮ್ ಯೆಚೂರಿ

ಅಪರಾಧಿಗಳ ವಿರುದ್ಧ ನಾಡಿನ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳದೆ ಯಾವುದೇ ರಾಜೀನಾಮೆಯ 'ಆಫರ್' ಅಥವ 'ಮುಖ' ಬದಲಾವಣೆ ಜನರ ಗಮನವನ್ನು ನಿಜ ಪ್ರಶ್ನೆಯಿಂದ ಬೇರೆಡೆಗೆ ತಿರುಗಿಸುವ ಹುನ್ನಾರ ಮಾತ್ರ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಟಿಪ್ಪಣಿ ಮಾಡಿದ್ದಾರೆ. ಹಿಂದಿನ ದಿನ ದಲಿತರ ಮಹಾರ್‍ಯಾಲಿ ಆಗ್ರಹಿಸಿದಂತೆ ತಕ್ಷಣವೇ ಕ್ರಮಗಳನ್ನು ಏಕೆ ಕೈಗೊಳ್ಳುತ್ತಿಲ್ಲ ಎಂದು ಅವರು ಪ್ರಶ್ನಿಸಿದ್ದಾರೆ.

ಸಮಾಜದ ಕೆಲವು ವಿಭಾಗಗಳವರಿಗೆ ತಮ್ಮ ಆಯ್ಕೆಯ ಆಹಾರ ಸೇವಿಸಲು ಬಿಡುತ್ತಿಲ್ಲ ಏಕೆ? ಕೇಂದ್ರ ಮಂತ್ರಿಗಳು ಬಹಿರಂಗವಾಗಿಯೇ 'ನಾವು' ಮತ್ತು 'ಅವರು' ಎನ್ನುತ್ತ ಸಮಾಜವನ್ನು ವಿಭಜಿಸುತ್ತಿದ್ದಾರೆ. ಅಲ್ಪಸಂಖ್ಯಾತರು ಮತ್ತು ದಲಿತರ ವಿರುದ್ಧ ಹಗೆ ಹುಟ್ಟಿಸುವ ಭಾಷಣಗಳು ಕೇಳಬರುತ್ತಿವೆ.

ಮೇಲಿನಿಂದಲೇ ಮೂಡಿರುವ ಒಂದು ಸಮಸ್ಯೆಗೆ ಒಂದು ಮುಖದ ಬದಲಾವಣೆ ಹೇಗೆ ಉತ್ತರವಾಗಬಲ್ಲದು? ನಾವು ಮೂರ್ತ ಕ್ರಿಯೆಗೆ ಕಾಯುತ್ತಿದ್ದೇವೆ ಎಂದು ಸೀತಾರಾಮ್ ಯೆಚೂರಿಯವರು ಹೇಳಿದ್ದಾರೆ.

ಎಎಪಿ ದಿಲ್ಲಿ ಶಾಸಕರ ಮೇಲೆ ಗುರಿಯಿಡುವ ಸರ್ವಾಧಿಕಾರಿಶಾಹಿ ಧೋರಣೆ ನಿಲ್ಲಿಸಿ-ಮೋದಿ ಸರಕಾರಕ್ಕೆ ಸಿಪಿಐ(ಎಂ) ಆಗ್ರಹ

ಮೋದಿ ಸರಕಾರ ಮತ್ತು ಪೋಲಿಸರು ದಿಲ್ಲಿಯ ಆಮ್ ಆದ್ಮಿ ಪಾರ್ಟಿಯ ಶಾಸಕರ ಮೇಲೆ ಗುರಿಯಿಟ್ಟಿದೆ ಎಂದು ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿ ಖಂಡಿಸಿದೆ. ಎಎಪಿ ಶಾಸಕರ ಮೇಲೆ ಪ್ರತಿದಿನ ಎಂಬಂತೆ ಕೇಸುಗಳನ್ನು ಹಾಕಲಾಗುತ್ತಿದೆ. ಅವರಲ್ಲಿ ಕೆಲವರು ಜೈಲಿನಲ್ಲಿದ್ದಾರೆ, ಜಾಮೀನು ನಿರಾಕರಿಸಲಾಗುತ್ತಿದೆ. ದಿಲ್ಲಿ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಸ್ವಾತಿ ಮಲಿವಾಲ್ ಮೇಲಂತೂ ಸುಳ್ಳು ಕೇಸನ್ನೇ ಹಾಕಲಾಗಿದೆ.

ಚುನಾಯಿತ ದಿಲ್ಲಿ ರಾಜ್ಯ ಸರಕಾರವನ್ನು ಬುಡಮೇಲು ಮಾಡಲು ಮೋದಿ ಸರಕಾರ ಪ್ರಯತ್ನಿಸುತ್ತಿದೆ. ಇದು ಅದರ ಸರ್ವಾಧಿಕಾರಶಾಹೀ ಸ್ವರೂಪಕ್ಕೆ ಅನುಗುಣವಾಗಿಯೇ ಇದ್ವೆಂದಿರುವ ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿ ಬಿಜೆಪಿ ರಾಜಕೀಯ ಪ್ರಯೋಜನಕಕಾಗಿ ದಿಲ್ಲಿಯ ಉಪರಾಜ್ಯಪಾಲ ಮತ್ತು ಪೋಲಿಸ್‌ನ ಬಳಕೆ ಯಾಗುತ್ತಿದೆ ಎಂದು ಆಪಾದಿಸಿದೆ. ಇದು ದಿಲ್ಲಿಗೆ ಪೂರ್ಣ ರಾಜ್ಯದ ಸ್ಥಾನಮಾನವನ್ನು ಕೊಡುವ ಅಗತ್ಯವನ್ನು ಎತ್ತಿ ತೋರಿಸುತ್ತದೆ ಎಂದಿದೆ.

ಸಿಪಿಐ(ಎಂ) ನಿರ್ದಿಷ್ಟ ಎಎಪಿ ಶಾಸಕರ ತಪ್ಪುಗಳನ್ನೇನೂ ಸಮರ್ಥಿಸುತ್ತಿಲ್ಲ. ಆದರೆ ಚುನಾಯಿತ ಪ್ರತಿನಿದಿಗಳನ್ನು ಸಾರಾಸಗಟಾಗಿ ಗುರಿ ಮಾಡುತ್ತಿರುವುದನ್ನು ಸಆಧ್ಯವಿಲ್ಲ, ಮೋದಿ ಸರಕಾರ ತಕ್ಷಣವೇ ಇದನ್ನು ನಿಲ್ಲಿಸಬೇಕು ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಆಗ್ರಹಿಸಿದೆ. ಎಎಪಿ ಕೂಡ ತಮ್ಮ ನ್ಯೂನ್ಯತೆಗಳಿಗೆಲ್ಲ ಕೇಂದ್ರ ಸರಕಾರವನ್ನು ದೂಷಿಸುವ ತಂತ್ರವನ್ನೂ ನಿಲ್ಲಿಸಬೇಕು ಎಂದಿದೆ.

ಪಶ್ಚಿಮ ಬಂಗಾಲದಲ್ಲಿ ಪ್ರಜಾಪ್ರಭುತ್ವದ ಮೇಲೆ ದಾಳಿಗೆ ದೇಶವ್ಯಾಪಿ ಪ್ರತಿಭಟನೆ

ಸಂಸದ್ ಭವನದಲ್ಲಿ ಎಡಪಕ್ಷಗಳ ಸದಸ್ಯರ ಧರಣಿ



ಪಶ್ಚಿಮ ಬಂಗಾಲದಲ್ಲಿ ಪ್ರಜಾಪ್ರಭುತ್ವದ ಮೇಲಿನ ದಾಳಿಯನ್ನು ಖಂಡಿಸಿ ಮತ್ತು ಅದರ ವಿರುದ್ಧ ಹೋರಾಡುತ್ತಿರುವ ಅಲ್ಲಿಯ ಜನತೆಯೊಂದಿಗೆ ಸೌಹಾರ್ದ ವ್ಯಕ್ತಪಡಿಸಬೇಕೆಂಬ ಕರೆಯ ಮೇರೆಗೆ ಆಗಸ್ಟ್ 1 ರಿಂದ 7ರ ವರೆಗೆ ದೇಶಾದ್ಯಂತ ಮತಪ್ರದರ್ಶನಗಳು ಮತ್ತು ಧರಣಿಗಳು ನಡೆಯುತ್ತಿವೆ. ಇದರ ಭಾಗವಾಗಿ ಆಗಸ್ಟ್ 2ರಂದು ಸಂಸದ್ ಭವನದ ಮುಂದೆ ಎಡಪಕ್ಷಗಳ ಸದಸ್ಯರು ಧರಣಿ ನಡೆಸಿದರು. ಇದರಲ್ಲಿ ಸೀತಾರಾಮ್ ಯೆಚೂರಿ, ಡಿ.ರಾಜ, ತಪನ್ ಸೆನ್, ಪಿ.ಕರುಣಾಕರನ್‌ರಂತಹ ಹಿರಿಯ ಮುಖಂಡರು ಭಾಗವಹಿಸಿದ್ದರು.


ಆ ಸಂದರ್ಭದಲ್ಲಿ ಪತ್ರಿಕಾ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತ ಸೀತಾರಾಮ್ ಯೆಚೂರಿಯವರು ಈ ಕುರಿತ ಪುಸ್ತಿಕೆ 'ಡೆಮಾಕ್ರಸಿ ಅಂಡರ್ ಸೀಜ್' (ಮುತ್ತಿಗೆಗೊಳಗಾಗಿರುವ ಪ್ರಜಾಪ್ರಭುತ್ವ) ಬಿಡುಗಡೆ ಮಾಡಿದರು. ಇದು ಅಲ್ಲಿ ಆಳುವ ಪಕ್ಷ ನಡೆಸುತ್ತಿರುವ ಹಿಂಸಾಚಾರದ ಒಂದು ಪಕ್ಷಿನೋಟವನ್ನು ಕೊಡುತ್ತದೆ. ಇದನ್ನು ಲಕ್ಷ-ಲಕ್ಷ ಸಂಖ್ಯೆಯಲ್ಲಿ ಹಂಚುತ್ತೇವೆ, ಇತರ ರಾಜಕೀಯ ಪಕ್ಷಗಳ ಪ್ರಜ್ಞೆಗೂ ನಾವು ಮನವಿ ಮಾಡಿಕೊಳ್ಳುತ್ತೇವೆ ಎಂದ ಯೆಚೂರಿ ಎಪ್ಪತ್ತರ ದಶಕದಲ್ಲಿ ಪಶ್ಚಿಮ ಬಂಗಾಲದಲ್ಲಿ ಇದೇ ರೀತಿಯ ಅರೆ-ಫ್ಯಾಸಿಸ್ಟ್ ದಬ್ಬಾಳಿಕೆಯ ಬೆನ್ನ ಹಿಂದೆಯೇ ಆಂತರಿಕ ತುರ್ತು ಪರಿಸ್ಥಿತಿ ಬಂದು ಜನತೆಯ ಪ್ರಜಾಪ್ರಭುತ್ವ ಹಕ್ಕುಗಳ ಹರಣವಾಗಿದ್ದನ್ನು ನೆನಪಿಸಿದರು. ರಾಜಕೀಯ ಪಕ್ಷಗಳು ಆ ಅನುಭವದಿಂದ ಪಾಠ ಕಲಿಯಬೇಕು ಎಂದು ಅವರು ಹೇಳಿದರು.

ತುಮಕೂರು ಜಿಲ್ಲೆಯ ದುಡಿಯುವ ಜನರ ಸಂಘಟನೆಯಲ್ಲಿ ಎಡಪಂಥೀಯರು

ಇತರ ಹಲವೆಡೆಗಳಲ್ಲಿ ನಡೆದಂತೆ ತುಮಕೂರು ಜಿಲ್ಲೆಯಲ್ಲೂ ವಿವಿಧ ವಿಭಾಗಗಳಲ್ಲಿ ದುಡಿಯುತ್ತಿರುವ ಕಾರ್ಮಿಕರನ್ನು ಮತ್ತು ಬಡ ರೈತ ವಿಭಾಗಗಳನ್ನು ಸಂಘಟಿಸಿದವರು, ಅವರ ಹೋರಾಟಗಳಿಗೆ ನೇತೃತ್ವ ನೀಡಿ ಹಲವು ಸೌಲಭ್ಯಗಳನ್ನು ಗಳಿಸಿಕೊಳ್ಳಲು ನೆರವಾದವರು ಎಡ ಪಂಥೀಯರು, ಅದರಲ್ಲೂ ರಷ್ಯಾದಲ್ಲಿ ಕಾರ್ಮಿಕರ ಕ್ರಾಂತಿಗೆ ನೇತೃತ್ವ ನೀಡಿದ ಲೆನಿನ್ ಮತ್ತು ಅವರ ಸೈದ್ಧಾಂತಿಕ ಸ್ಫೂರ್ತಿ ಸೆಲೆಯಾದ ಮಾರ್ಕ್ಸ್‌ವಾದದಿಂದ ಪ್ರೇರಿತರಾದವರು ಎಂದು ಈ ಜಿಲ್ಲೆಯ ಬೆಳವಣಿಗೆಯನ್ನು ಹತ್ತಿರದಿಂದ ನೋಡಿರುವ ಪತ್ರಕರ್ತ ಎಂ.ಎಸ್. ಕೋಟೆ ನಾಗಭೂಷಣ ಅಭಿಪ್ರಾಯ ಪಡುತ್ತಾರೆ. ಮಹಮ್ಮದ್ ದಸ್ತಗೀರ್, ಟಿ.ಆರ್.ರೇವಣ್ಣ, ಕೆ.ಆರ್.ನಾಯಕ್, ಟಿ.ಎಲ್.ತಿಮ್ಮಪ್ಪ, ಕೆ.ವಿ.ಕೃಷ್ಣಸ್ವಾಮಿ, ಹಾಗಲವಾಡಿ ಚೆನ್ನಪ್ಪ, ಪಾವಗಡದ ನಾರಾಯಣ ರೆಡ್ಡಿ ಮುಂತಾದವರನ್ನು ಅವರು ಹೆಸರಿಸುತ್ತಾರೆ.

1949–50ರ ಯಶಸ್ವಿ ಹೋರಾಟದೊಂದಿಗೆ ಆರಂಭವಾದ ಬೀಡಿ ಕಾರ್ಮಿಕರ ಚಳುವಳಿ, ನಂತರ ಬದುಕಿನ ಕನಿಷ್ಟ ಆವಶ್ಯಕತೆಗಳಿಗಾಗಿಯೂ ಹೋರಾಟಕ್ಕಿಳಿಯಬೇಕಾಗಿದ್ದ ಅಂಗನವಾಡಿ ನೌಕರರು ಮತ್ತು ಗ್ರಾಮ ಪಂಚಾಯ್ತಿ ನೌಕರರಿಗೆ ನೇತೃತ್ವ, ದಲಿತರೇ ಹೆಚ್ಚಾಗಿರುವ ಪೌರ ಕಾರ್ಮಿಕರು, ಪಿಡಬ್ಲ್ಯುಡಿ ದಿನಗೂಲಿ ನೌಕರರು, ಇತ್ತೀಚಿನ ವರ್ಷಗಳಲ್ಲಿ ಕಟ್ಟಡ ಕಾರ್ಮಿಕರು, ಅಕ್ಷರ ದಾಸೋಹ ಮತ್ತು ಆಶಾ ಕಾರ್ಯಕರ್ತೆಯರು, ಹಮಾಲಿ ಕಾರ್ಮಿಕರು, ಗ್ರಂಥಾಲಯ ನೌಕರರು, ಬಡ ಫುಟ್‌ಪಾತ್ ವ್ಯಾಪಾರಿಗಳು, ಗ್ಯಾಸ್ ವಿತರಣಾ ಕಾರ್ಮಿಕರು, ಖಾಸಗಿ ವಾಹನ ಚಾಲಕರು ಮುಂತಾದ ಹಲವು ವಿಭಾಗಗಳ ಜನರನ್ನು, ಅಲ್ಲದೆ ಜಿಲ್ಲೆಯ ಕೈಗಾರಿಕಾ ರಂಗದಲ್ಲಿ ಕಾಣಿಸಿಕೊಂಡು ಮರೆಯಾದ ಹಲವು ಸಣ್ಣ–ದೊಡ್ಡ ಉದ್ದಿಮೆಗಳಲ್ಲೂ(ಉದಾ: ಹೆಚ್‌ಎಂಟಿ, ಚಾಮುಂಡಿ ಮೋಪೆಡ್ಸ್, ಟಿವಿಎಸ್ ಎಲೆಕ್ಟ್ರಾನಿಕ್ಸ್ ಮುಂತಾದವುಗಳಲ್ಲಿ) ದುಡಿಯುತ್ತಿದ್ದ ಕಾರ್ಮಿಕರನ್ನು ಸಂಘಟಿಸುವ ಪ್ರಯತ್ನಗಳನ್ನು ಮತ್ತು ಹಲವು ಭೂಹೋರಾಟಗಳಲ್ಲಿ ಬಡ ರೈತರನ್ನು ಸಂಘಟಿಸುವ ಪ್ರಯತ್ನಗಳನ್ನು ಎಡಪಂಥೀಯ ಸಿದ್ಧಾಂತಗಳಿಂದ ಪ್ರೇರಿತರಾಗಿರುವವರು ಮಾಡಿರುವುದು ಈ ಜಿಲ್ಲೆಯ ಜನ ಇತಿಹಾಸದಲ್ಲಿ ದಾಖಲಾಗಿರುವ ಮೈಲಿಗಲ್ಲುಗಳು.

ಈ ಕುರಿತು 2010ರಲ್ಲಿ ಪ್ರಕಟವಾದ ಒಂದು ಸ್ಮರಣ ಸಂಪುಟ 'ಸಂಚಲನ'ದಲ್ಲಿ ಪ್ರಕಟವಾಗಿದ್ದ ಜಿಲ್ಲೆಯ ಪತ್ರಕರ್ತ **ಎಂ.ಎಸ್.ಕೋಟೆ ನಾಗಭೂಷಣ** ಅವರ ಲೇಖನದ ಉಪಸಂಹಾರ ಭಾಗವನ್ನು ಇಲ್ಲಿ ನಮ್ಮ ಓದುಗರ ಮುಂದಿಡುತ್ತಿದ್ದೇವೆ. ಸದಾ ವಿವಿಧ ಜನವಿಭಾಗಗಳ ನೋವಿಗೆ ಕೊರಳಾಗಿರುವವರು ಚುನಾವಣೆಗಳು ಬಂತೆಂದರೆ ನಮ್ಮ ಜನಕ್ಕೆ ಏಕೆ ಬೇಡವಾಗುತ್ತಾರೆ ಎಂಬ ಪ್ರಜಾಪ್ರಭುತ್ವವಾದಿಗಳ ನೋವನ್ನು ಓದುಗರು ಇಲ್ಲಿ ಗಮನಿಸಬಹುದು:



ಕಳೆದ ಎರಡೂವರೆ ದಶಕಗಳಿಂದ ತುಮಕೂರು ಜಿಲ್ಲೆಯ ಪತ್ರಿಕಾ ಕ್ಷೇತ್ರದಲ್ಲಿ ಬರವಣಿಗೆಯನ್ನು ಮಾಡಿಕೊಂಡಿರುವ ನಾನು ಸಾರ್ವಜನಿಕ ಬದುಕಿನ ಅಥವ ಸಮಷ್ಟಿ ನಿಷ್ಠೆಯನ್ನು ಕುರಿತಂತೆ ನಿರಂತರ ಹೋರಾಟ ಮಾಡಿಕೊಂಡು ಬಂದಿರುವ ಹಾಗೂ ಬರುತ್ತಿರುವ ಪಕ್ಷವಾಗಿ ಸಿಪಿಐ ಮತ್ತು ಸಿಪಿಐ(ಎಂ)ನ್ನು ಕಂಡಿದ್ದೇನೆ. ಅವರ ಅನೇಕ ಹೋರಾಟಗಳ ಪ್ರತ್ಯಕ್ಷದರ್ಶಿಯಾಗಿಯೂ ಇದ್ದೇನೆ. ದಿವಂಗತರುಗಳಾದ ಕಾಂ. ಕೆ.ಆರ್.ನಾಯಕ್, ಪ್ರಸಿದ್ಧ ಕವಿ ವೀಚಿ, ಕಾಂ. ಚನ್ನಪ್ಪನವರು ನನ್ನ ಬರವಣಿಗೆಯ ಮೇಲೆ ಅಪಾರ ಪ್ರಭಾವವನ್ನು ಬೀರಿದ್ದಾರೆ.

ಮೂರು ದಶಕಗಳ ಹಿಂದೆಯೇ ಹೇಮಾವತಿ ನಾಲೆಯ ಮೂಲಕ ಜಿಲ್ಲೆಗೆ ನೀರಾವರಿಯನ್ನು ಸಾಧ್ಯವಾಗಿಸಬಹುದು ಎಂದು ತಮ್ಮದೇ ದಾಟಿಯಲ್ಲಿ ಮಾತನಾಡುತ್ತ ಬಂದಿದ್ದವರು ಹಾಗಲವಾಡಿ ಚೆನ್ನಪ್ಪನವರು. ಪ್ರಾಯಶಃ ಈ ಹೊತ್ತಿನ ನೀರಾವರಿ ಹೋರಾಟದ ಮೂಲ ಆಗರ ಅವರು ಪ್ರಾರಂಭ ಮಾಡಿರುವ ಹೋರಾಟವೇ ಕಾರಣವಾಗಿದೆ.

ತುಮಕೂರು ಜಿಲ್ಲೆಯ ಕಮ್ಯುನಿಸ್ಟ್ ಮುಖಂಡರಿಗೆ ಒಂದು ರೀತಿಯಲ್ಲಿ ಗಟ್ಟಿಯಾದ ತಾತ್ವಿಕ ನೆಲೆಗಟ್ಟನ್ನು ನೀಡುವಲ್ಲಿ ನಾವು ನೆನಪಿಸಿಕೊಳ್ಳಲೇ ಬೇಕಾದ ವ್ಯಕ್ತಿಯೆಂದರೆ ಅವರು ಪ್ರೊ.ಹೆಚ್.ಜಿ.ಸಣ್ಣಗುಡ್ಡಯ್ಯ. ಅವರು ಬೀದಿಗಿಳಿದು ಹೋರಾಟ ಮಾಡಿದ್ದು ಕಡಿಮೆ. ಆದರೆ ಎಡಪಂಥೀಯ ಹೋರಾಟಗಾರರ ತಾತ್ವಿಕ ಗೊಂದಲಗಳನ್ನು ನಿರಾಯಾಸವಾಗಿ ಪರಿಹರಿಸುತ್ತಿದ್ದ ಅವರ ಬುದ್ಧಿಶಕ್ತಿ ಈಗಲೂ ನನಗೆ ಆಶ್ಚರ್ಯಕರವಾದದ್ದು. ಸಾವಿನ ಕೊನೆಯ ಸಂದರ್ಭದಲ್ಲೂ ಅವರು ತಮ್ಮ ಎಡಪಂಥೀಯ ಧೋರಣೆಗಳಿಂದ ಹೊರಬಂದವರಲ್ಲ. ತಮ್ಮ ನಡವಳಿಕೆಯಲ್ಲಿ ಅತ್ಯಂತ ಸೌಜನ್ಯಶೀಲವಾಗಿ ಇತರರ ಅಭಿಪ್ರಾಯವನ್ನು ಸ್ವೀಕರಿಸುತ್ತಾ ತಮ್ಮ ನಿಲುವನ್ನು ನಿಷ್ಠುರವಾಗಿ ಹೇಳಿಬಿಡುವ ತಾಕತ್ತಿದ್ದ ಹೆಚ್.ಜಿ.ಎಸ್. ತುಮಕೂರಿನ ಎಡಪಂಥೀಯ ಹೋರಾಟಗಾರರ 'ಬ್ರೈನ್ ಬಾಕ್ಸ್'ನಂತೆ ಕೆಲಸ ಮಾಡಿದರು ಎನ್ನುವುದರಲ್ಲಿ ನನಗೆ ಸಂದೇಹವಿಲ್ಲ.

ಕಮ್ಯುನಿಸ್ಟ್ ಗೆಳೆಯರು ಅತ್ಯಂತ ನಿಷ್ಠೆ ಹಾಗೂ ಪಕ್ಷಕ್ಕಾಗಿ ತಮ್ಮನ್ನು ತಾವು ತೆತ್ತುಕೊಂಡು ಕೆಲಸ ಮಾಡುತ್ತಿದ್ದಾರೆ. ಹಿರಿಯ ಹೋರಾಟದ ಚೇತನಗಳಾದ ಕೆ.ಆರ್.ನಾಯಕ್, ಮಹಮದ್ ದಸ್ತಗೀರ್, ಕಾಂ.ಟಿ.ಆರ್.ರೇವಣ್ಣ, ಹಾಗಲವಾಡಿ ಚನ್ನಪ್ಪ, ಕವಿ ವೀಚಿ ಅವರುಗಳು ತಮ್ಮ ತತ್ವನಿಷ್ಠೆಯನ್ನು ಎಂದೂ ಪಣಕ್ಕಿಟ್ಟವರಲ್ಲ. ಹಾಗೆಯೇ ಎಲ್ಲಾ ಕಾರ್ಮಿಕ ಮುಖಂಡರ ಬಗ್ಗೆಯೂ ಈ ಮಾತುಗಳನ್ನು ಹೇಳಲು ಸಾಧ್ಯವಿಲ್ಲ. ಇತ್ತೀಚಿನ ತಲೆಮಾರಿನ ಯುವ ಹೋರಾಟಗಾರರಲ್ಲಿ ಕೆಲವರು ಅತ್ಯಂತ ಪ್ರಭಾವಿಯಾಗಿ ರೂಪುಗೊಳ್ಳುತ್ತಿರುವುದು ನನ್ನ ಮಟ್ಟಿಗೆ ಈ ನಿರಾಶೆಯ ಕಡಲಲ್ಲಿಯೂ ಸಮಾಧಾನಕರ ಅಂಶ. ಅವರುಗಳಲ್ಲಿ ಕಾಂ. ಸೈಯದ್ ಮುಜೀಬ್, ಕಾಂ.ಸುಬ್ರಮಣ್ಯ, ಕಾಂ.ಬಿ.ಉಮೇಶ್, ಕಾಂ. ರಾಘವೇಂದ್ರ ಹಾಗೂ ಇತರರು ನಿರಂತರ ಹೋರಾಟಗಳ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಲೇ ಇರುತ್ತಾರೆ. ಈ ಹೋರಾಟಗಳೊಂದಿಗೆ ಅವರ ಬದುಕು ಧನ್ಯವಾಗುತ್ತಿರುವಂತೆ ಕಾಣುತ್ತದೆ. ಇಂದಿಗೂ ಸಾರ್ವಜನಿಕ ಹಿತದೃಷ್ಟಿಯಿಂದ ತಾರ್ಕಿಕವಾಗಿ ಹೋರಾಟ ನಡೆಸುತ್ತಿರುವವರು ಕಮ್ಯೂನಿಸ್ಟ್ ಗೆಳೆಯರೇ. ಅವರಿಗೆ ಈ ತಕ್ಷಣಕ್ಕೆ ತುಮಕೂರು ಜಿಲ್ಲೆಯಲ್ಲಿ ಯಾವುದಾದರೂ ಅಧಿಕಾರ ಪ್ರಾಪ್ತವಾಗಿ ಬಿಡುತ್ತದೆ ಎನ್ನುವ ಅವಕಾಶ ನನಗೇನೂ ಕಾಣುತ್ತಿಲ್ಲ. ಈ ವಾಸ್ತವ ಅವರಿಗೂ ಗೊತ್ತು. ಆದರೂ ತಮ್ಮ ಸಾಮಾಜಿಕ ಬದ್ಧತೆ ಹಾಗೂ ಪಕ್ಷ ನಿಷ್ಠೆಯಿಂದ ಅವರು ವಿಚಲಿತರಾಗಿಲ್ಲ.

ಪಡಿತರ ಚೀಟಿ ಇಲ್ಲದಿದ್ದರೆ ಅದಕ್ಕಾಗಿ ಹೋರಾಟ ಮಾಡುವವರು ಇವರೇ. ಸೀಮೆಎಣ್ಣೆ ಸಿಗದೇ ಹೋದರೆ ತಹಶಿಲ್ದಾರ್ ಕಛೇರಿಯ ಮುಂದೆ ನಿಂತು ಘೋಷಣೆ ಹಾಕುವವರು ಇವರೇ. ಪೌರ ಕಾರ್ಮಿಕರಿಗೆ ವೇತನ ಬಟವಾಡೆ ಆಗದಿದ್ದರೆ ಗಂಟಲು ಹರಿಯುವಂತೆ ಕೂಗಿಕೊಳ್ಳುವವರೂ ಇವರೇ. ಬೆಲೆ ಏರಿಕೆಯ ವಿರುದ್ಧ ಹಾಗೂ ಕೇಂದ್ರದ ಯು.ಪಿ.ಎ.(ಈಗ ಎನ್‌ಡಿಎ–ಸಂ.) ಸರ್ಕಾರದ ವಿರುದ್ಧದ ಲಾಭಕೋರ ನೀತಿಗಳನ್ನು ಪ್ರತಿಭಟಿಸುವವರು ಇವರೇ. ಅಸಹಾಯಕ ರೈತಾಪಿ ವರ್ಗದ ನೋವಿಗೆ ಕೊರಳಾಗುವವರು ಇವರೇ. ವಿದ್ಯಾರ್ಥಿಗಳಿಗೆ ತೊಂದರೆಯಾದರೂ ಬಹುಪಾಲು ಇವರೇ ಧ್ವನಿ ಮಾಡಬೇಕು. ಆದರೆ ಚುನಾವಣೆಗಳು ಬಂತೆಂದರೆ ಇವರು ನಮ್ಮ ಜನಕ್ಕೆ ಬೇಡವಾಗಿ ಬಿಡುತ್ತಾರೆ. ನಾನು ಯಾವಾಗಲೂ ಯೋಚಿಸುತ್ತಿರುತ್ತೇನೆ– ಕಾಂ. ಮುಜೀಬ್ ಅಥವಾ ಕಾಂ.ಉಮೇಶ್ ಅಂಥವರು ನಮ್ಮ ನಗರಸಭಾ ಅಥವಾ ಗ್ರಾಮ ಪಂಚಾಯ್ತಿ ಚುನಾವಣೆಗಳಲ್ಲಿ ಗೆಲ್ಲಲು ಏಕೆ ಸಾಧ್ಯವಾಗುವುದಿಲ್ಲ? ತಮಗೆ ಕೆಲಸ ಮಾಡಿ ಕೊಟ್ಟವರ ಬಗ್ಗೆ ನಮ್ಮ ಜನರಿಗೆ ಕೃತಜ್ಞತೆ ಇಲ್ಲವೇ? ಹಾಗೆ ನೋಡ ಹೋದರೆ ತುಮಕೂರು ಜಿಲ್ಲೆಯಲ್ಲಿ, ಒಂದು ಕಾಲಕ್ಕೆ ಪರ್ಯಾಯ ಪಕ್ಷವಾಗಿ ಕಮ್ಯೂನಿಸ್ಟ್ ಪಕ್ಷ ರೂಪುಗೊಳ್ಳುತ್ತಿತ್ತು. ಆಹೊತ್ತು ಟಿ.ಎಲ್.ತಿಮ್ಮಪ್ಪ ಪುರಸಭೆಯ ಉಪಾಧ್ಯಕ್ಷರಾಗಿದ್ದರು. ಪ್ರಸಿದ್ಧ ಕವಿ ವೀಚಿ ಪುರಸಭೆಯ ಅಧ್ಯಕ್ಷರಾಗಿದ್ದರು. ಕೆ.ಮಲ್ಲಣ್ಣ ತಮ್ಮ ಪ್ರಾರಂಭಿಕ ರಾಜಕೀಯದ ದಿನಗಳಲ್ಲಿ ಕಮ್ಯೂನಿಸ್ಟ್ ಪಕ್ಷದ ಮೂಲಕವೇ ಪುರಸಭಾ ಸದಸ್ಯರಾಗಿದ್ದರು. ಆ ಹೊತ್ತಿನ ರಾಜಕೀಯ ಪರಿಸ್ಥಿತಿ ಇಂದು ಮರುಕಳಿಸಬಾರದೇಕೆ? ಇದು ನನ್ನೊಬ್ಬನ ಆಪೇಕ್ಷೆಯಷ್ಟೇ ಅಲ್ಲ. ನನ್ನಂಥ ಬಹಳಷ್ಟು ಜನರ ನಿರೀಕ್ಷೆ ಕೂಡಾ. ●

ತುಮಕೂರು ಕೈಗಾರಿಕಾ ಮತ್ತು ಕಾರ್ಮಿಕರ ಪರಿಸ್ಥಿತಿ....

ಪುಟ 16 ರಿಂದ

ಮಾನ್ಯತೆಗಾಗಿ, ಕಾರ್ಮಿಕರ ಬೇಡಿಕೆ ಈಡೇರಿಕೆಗಾಗಿ ಕೆಲಸದ ಖಾಯಮಾತಿಗಾಗಿ ಹಲವು ಮುಷ್ಕರಗಳು ಹಾಗೂ ಹೋರಾಟಗಳು ನಡೆದಿವೆ. ಆದರೆ ಸ್ಪಂದನೆ, ಫಲಿತಾಂಶ ಬಹಳ ಸ್ಪೂರ್ತಿದಾಯಕವಾಗಿಲ್ಲ. ನ್ಯಾಯೋಚಿತ ವೇತನ, ಬಲಿಪಶುಮಾಡುವುದನ್ನು ವಿರೋಧಿಸಿದ್ದಕ್ಕೆ ವಿನಾಯಕ ಸಿಎನ್‌ಸಿಯ ಮಾಲೀಕ ಬೀಗಮುದ್ರೆ ಹಾಕಿದ್ದು, ಸರ್ಕಾರ ಬೀಗಮುದ್ರೆಯನ್ನು ಕಾನೂನುಬಾಹಿರ ಎಂದು ಘೋಷಣೆ ಮಾಡದೆ ಮಾಲೀಕರ ಜೊತೆ ನಿಂತಿದೆ.

ಆರೋಗ್ಯ:

ಜಿಲ್ಲೆಯಲ್ಲಿ ಕೈಗಾರಿಕಾ ಕಾರ್ಮಿಕರಿಗೆ ಇಎಸ್‌ಐ ವ್ಯಾಪ್ತಿಗೆ ಒಳಪಟ್ಟಿದ್ದರೂ ಸ್ಥಳೀಯವಾಗಿ ಸೂಕ್ತ ಸೌಲಭ್ಯಗಳಿರುವ ಸುವ್ಯವಸ್ಥಿತ ಆಸ್ಪತ್ರೆಯ ಕೊರತೆ ಇದೆ. ಬಹುತೇಕ ಕಾರ್ಖಾನೆಗಳಲ್ಲಿ ಅಗತ್ಯ ಸುರಕ್ಷತೆಯನ್ನು ನೀಡಲಾಗುತ್ತಿಲ್ಲ. ಕಾರ್ಮಿಕರು ಅಫಘಾತವಾದ ಸಂಧರ್ಭಕ್ಕೆ ತುರ್ತುಗಿ ಉತ್ತಮ ಚಿಕಿತ್ಸೆ ಪಡೆಯಲು ಬೆಂಗಳೂರಿಗೆ ಪ್ರಯಾಣಿಸಲೇಬೇಕಾದ ಪರಿಸ್ಥಿತಿ ಇದೆ. ಜಿಲ್ಲಾ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೆರಿಸುವ ಹಾಗೂ ತುಮಕೂರು ಜಿಲ್ಲೆಗೊಂದು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಕೇಂದ್ರವನ್ನು ಮಂಜುರು ಮಾಡುವ ಪ್ರಕ್ರಿಯೆ ಆಮೆಗತಿಯಲ್ಲಿ ಸಾಗುತ್ತಿದೆ.

ಸುರಕ್ಷತೆ:

ಕೈಗಾರಿಕೆಗಳಲ್ಲಿ ಸುರಕ್ಷತೆಗೆ ಬಂಡವಾಳಗಾರರು ಅಗತ್ಯ ಗಮನ ನೀಡುತ್ತಿಲ್ಲ. ಈ ಅವದಿಯಲ್ಲಿ ಹಲವು ಕೈಗಾರಿಕಾ ಅಪಘಾತಗಳು ಸಂಭವಿಸಿವೆ. ರೈಸ್‌ಮಿಲ್‌ನಲ್ಲಿ ಕಾರ್ಮಿಕರ ಮಗುವೊಂದು ಯಂತ್ರವೊಂದಕ್ಕೆ ಸಿಲುಕಿ ಸಾವನ್ನಪ್ಪಿತು. ರೈಸ್‌ಮಿಲ್‌ಗಳಲ್ಲಿ ಹಾಗೂ ಇತರೆ ಕೈಗಾರಿಕೆಗಳಲ್ಲಿ ದೊಡ್ಡ ಸಂಖ್ಯೆಯಲ್ಲಿರುವ ವಲಸೆ ಕಾರ್ಮಿಕರು ಅಪಘಾತಗಳಲ್ಲಿ ಸಾಯುತ್ತಿರುವುದನ್ನು ಸದ್ದಿಲ್ಲದೆ ಮುಚ್ಚಿಹಾಕಲಾಗುತ್ತಿದೆ.

ಅಸಂಘಟಿತ ಕಾರ್ಮಿಕರ ಸ್ಥಿತಿ:

ಅಸಂಘಟಿತ ಕಾರ್ಮಿಕರ ಪರಿಸ್ಥಿತಿಯೂ ದಯನೀಯವಾಗಿದೆ. ಹಮಾಲಿಗಳು, ಸಾರಿಗೆ ಕಾರ್ಮಿಕರು, ಬೀಡಿ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಬೀದಿ ಬದಿ ಮಾರಾಟಗಾರರು, ಮನೆಗೆಲಸಗಾರರು ಗ್ರಾಮಿಣ ಪ್ರದೇಶದಲ್ಲಿರುವ ಕೃಷಿಯಿಂದ ಹೊರದೂಡಲ್ಪಟ್ಟ ಕಾರ್ಮಿಕರ ಸಂಖ್ಯೆ ಲಕ್ಷಗಟ್ಟಲೆ ಇದೆ. ಈ ಕಾರ್ಮಿಕರಿಗೆ ವರ್ಷಪೂರ್ತಿ ಕೆಲಸವಿಲ್ಲದೆ ಅರೆ ಉದ್ಯೋಗಿಗಳಾಗಿದ್ದಾರೆ. ಕೃಷಿ ಬಿಕ್ಕಟ್ಟಿನಿಂದಾಗಿ ಗ್ರಾಮಂತರ ಕಾರ್ಮಿಕರ ಸಂಖ್ಯೆ ವಿಪರೀತ ಹೆಚ್ಚುತ್ತಿದೆಯಲ್ಲದೆ ಅವರು ಕೆಲಸಕ್ಕೆ ನಗರಗಳ ಕಡೆ ವಲಸೆ ಬರುತ್ತಿರುವ ಸಂಖ್ಯೆಯೂ ಹೆಚ್ಚುತ್ತಿದೆ. ಬಹುತೇಕ ಕೃಷಿಕೂಲಿಕಾರರು ಕಟ್ಟಡ ಕಾರ್ಮಿಕರಾಗಿ ಬದಲಾಗುತ್ತಿದ್ದಾರೆ.

ಅಸಂಘಟಿತರ ಆರೋಗ್ಯ ಮತ್ತು ಸುರಕ್ಷತೆ:

ಅಸಂಘಟಿತ ಕಾರ್ಮಿಕರ ಆರೋಗ್ಯದ ಸಂಬಂಧ ಜಿಲ್ಲೆಯಲ್ಲಿ ಆರ್‌ಎಸ್‌ಬಿವೈ ಯೋಜನೆಯನ್ನು ಸರ್ಕಾರ ಜಾರಿಮಾಡಿರುವುದಾಗಿ ಅಂಕಿ–ಅಂಶಗಳಲ್ಲಿ ಹೇಳಲಾಗುತ್ತಿದೆ ಆದರೆ ಇದರಿಂದ ಬಹಳಷ್ಟು ಕಾರ್ಮಿಕರಿಗೆ ಪ್ರಯೋಜನವಾಗುತ್ತಿಲ್ಲ. ಕೇಂದ್ರ ಸರ್ಕಾರ ಅಸಂಘಟಿತ ಕಾರ್ಮಿಕರ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಆರೋಗ್ಯ ಇಲಾಖೆಯೇ ಆರೋಗ್ಯ ಕಾರ್ಡ್‌ನ್ನು ನೀಡುವ ಕೆಲಸವನ್ನು ಮಾಡುವಂತೆ ಆದೇಶ ಹೊರಡಿಸಿದ್ದಾಗಿಯೂ ಈಗಾಗಲೇ ಆರೋಗ್ಯ ಕಾರ್ಡ್ ಪಡೆದವರಿಗೆ ಅದನ್ನು ಬಳಸಿ ಪ್ರಯೋಜನ ಪಡೆಯಲು ಸಾಧ್ಯವಾಗುತ್ತಿಲ್ಲ ಅದರ ಮಿತಿಯನ್ನು ವಾರ್ಷಿಕ 30 ಸಾವಿರದಿಂದ ಒಂದು ಲಕ್ಷಕ್ಕೆ ಹೆಚ್ಚಿಸುವ ಅಗತ್ಯವೂ ಇದೆ.

ಸುರಕ್ಷತೆ:

ಅಸಂಘಟಿತ ಕಾರ್ಮಿಕರಲ್ಲಿ ಸುರಕ್ಷತೆಗೆ ಯಾವುದೇ ಆದ್ಯತೆಯನ್ನೂ ನೀಡಲಾಗುತ್ತಿಲ್ಲ ಈ ಅವದಿಯಲ್ಲಿ ಕಟ್ಟಡ ನಿರ್ಮಾಣ ಹಂತದಲ್ಲಿದ ಹಲವು ಅಪಘಾತಗಳು ಸಂಬಂವಿಸಿವೆ. ತೀರ ಇತ್ತಿಚೇಗೆ ತುಮಕೂರು ನಗರದ ಪ್ರತಿಷ್ಠಿತ ಕಾಲೇಜೊಂದರ ಕಟ್ಟಡ ಕಟ್ಟುವಾಗ ಮೇಲ್ಛಾವಣಿ ಕುಸಿದು ಎರಡು ಕಂದಮ್ಮಗಳ ಸಾವು ಹಾಗೂ ಕಟ್ಟಡ ಕಾರ್ಮಿಕರ ಇಬ್ಬರ ಸಾವು ಕರಳು ಚುರ್ ಎನ್ನುವಂತೆ ಮಾಡಿತ್ತು. ಆದರೆ ಪೊಲೀಸರು ಗುತ್ತಿಗೆದಾರರ ಮೇಲೆ ಯಾವುದೇ ಹೊಣೆಯನ್ನು ಹೊರಿಸದೆ ಬಡಪಾಯಿ ಮೇಸ್ತ್ರಿಯನ್ನು ಆರೋಪಿಯನ್ನಾಗಿ ಮಾಡಿದ್ದು ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ. ಗುತ್ತಿಗೆ ಕಾರ್ಮಿಕರು ವಿದ್ಯುತ್ ತಂತಿ ಬದಲಿಸುವಾಗ ವಿದ್ಯುತ್ ಹರಿದು ಸಾವು, ಹಮಾಲಿ ಕಾರ್ಮಿಕ ನೀಟ್ ಹೊಡೆಯುವಾಗ ಮೂಟೆಗಳು ಕುಸಿದು ಬಿದ್ದು ಸಾವು .. ಹೀಗೆ ಪಟ್ಟಿಮಾಡುತ್ತಾ ಹೊದರೆ ನೂರಾರು ಘಟನೆಗಳು ನೂರಾರು ಅಮಾಯಕರ ಸಾವುಗಳು ಸಂಬಂವಿಸುತ್ತಲೆ ಇವೆ

ಸಾಮಾಜಿಕ ಭದ್ರತೆ:

ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಗೆ ಸಂಬಂದಿಸಿದಂತೆ ಕೇಂದ್ರ ರಾಜ್ಯ ಸರ್ಕಾರಗಳು ಸೂಕ್ತ ಸಮರ್ಪಕ ಯೋಜನೆಗಳನ್ನು ಇದುವರೆಗೂ ರೂಪಿಸಿಲ್ಲ. ಅಸಂಘಟಿತ ಕಾರ್ಮಿಕರಿಗೆ ಕೇರಳ ಹಾಗೂ ಪಶ್ಚಿಮ ಬಂಗಾಳದ ಕಮ್ಯೂನಿಸ್ಟ್ ಸರ್ಕಾರಗಳು ಜಾರಿಮಾಡಿದ ರೀತಿಯ ಭವಿಷ್ಯ ನಿಧಿ (ಪಿ.ಎಫ್) ಖಾತ್ರಿ ಪಿಂಚಣಿಗಾಗಿ ಪ್ರಬಲ ಚಳುವಳಿಯ ಅಗತ್ಯವಿದೆ. ಹಾಲಿ ಇರುವ ಅಟಲ್‌ಜೀ ಪೆನ್ಷನ್ ಮೊಸದ ನೂತನ ಪಿಂಚಣಿ ಯೋಜನೆಯ ಮರುನಾಮಕರಣ ಮಾತ್ರವೆಂದು ಜನತೆಗೆ ತಿಳಿ ಹೇಳಬೇಕಾಗಿದೆ. ●

JANASHAKTHI KANNADA VARA PATRIKE AUG 14, 2016 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ತುಮಕೂರು ಕೈಗಾರಿಕಾ ಮತ್ತು ಕಾರ್ಮಿಕರ ಪರಿಸ್ಥಿತಿ



2016ನೇ ಏಪ್ರಿಲ್ ನಲ್ಲಿ ತುಮಕೂರು ಜಿಲ್ಲಾ ಕೇಂದ್ರದಲ್ಲಿ ಸ್ವಯಂ ಪ್ರೇರಿತ ಗಾರ್ಮೆಟ್ಸ್ ಕಾರ್ಮಿಕರ ಹೋರಾಟ, ನಿರಂತರವಾಗಿ ನಡೆಯುತ್ತಿರುವ ಮುನಿಸಿಪಲ್ ಕಾರ್ಮಿಕರ ಹೋರಾಟ, ಅಂತರಸನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಸಮರಧೀರವಾಗಿ ಹೋರಾಟಕ್ಕೆ ಕಂಕಣ ಬದ್ಧರಾಗಿರುವ ಕಾಳೇಶ್ವರಿ ಕಾರ್ಮಿಕರ ಚಳುವಳಿ, ವಿನಾಯಕ ಸಿಎನ್‌ಸಿ, ಹಾಲಿ ನಡೆಯುತ್ತಿರುವ ತ್ರಿವೇಣಿ ಏರೋನಾಟಿಕ್ಸ್, ಅಂಗನವಾಡಿ ನೌಕರರ ಚಳುವಳಿ, ಫುಟ್‌ಪಾತ್ ವ್ಯಾಪಾರಿಗಳ ಚಳುವಳಿ, ಪರ್ಯಾಯ ಬದುಕಿಗಾಗಿ ನಡೆಯುತ್ತಿರುವ ಬೀಡಿ ಕಾರ್ಮಿಕರ ಚಳುವಳಿ, 2015 ಸೆಪ್ಟೆಂಬರ್ 2ರ ಸಾರ್ವತ್ರಿಕ ಮುಷ್ಕರ, ಸಾರಿಗೆ ನೌಕರರ ಮುಷ್ಕರ, ರಾಜ್ಯ ಸರ್ಕಾರಿ ನೌಕರರ ಮುಷ್ಕರಗಳು, ರಾಜ್ಯ ಪೋಲಿಸರ ಸಾಮೂಹಿಕ ರಜೆ ಕರೆಯ ಬೆಳೆವಣಿಗೆಗಳ ಹಿನ್ನೆಲೆಯಲ್ಲಿ 5ನೇ ಸಿಐಟಿಯು ತುಮಕೂರು ಜಿಲ್ಲಾ ಸಮ್ಮೇಳನ ನಡೆಯುತ್ತಿದೆ. ಈ ಸಂದರ್ಭದಲ್ಲಿ ಜಿಲ್ಲೆಯ ಕೈಗಾರಿಕಾ ಮತ್ತು ಕಾರ್ಮಿಕರ ಪರಿಸ್ಥಿತಿ ಬಗ್ಗೆ ವಿಶೇಷ ಲೇಖನ.

ಮುಜೀಬ್, ಸುಬ್ರಮಣ್ಯ

ಕೈಗಾರಿಕಾ ಪರಿಸ್ಥಿತಿ

ತುಮಕೂರು ಜಿಲ್ಲೆಯಲ್ಲಿ ಸರಿಸುಮಾರು 9800 ಎಕರೆಗೂ ಹೆಚ್ಚು ಜಮೀನನ್ನು ಹಾಲಿ ಕೈಗಾರಿಕಾ ಚಟುವಟಿಕೆಗಳಿಗಾಗಿ ಸರ್ಕಾರ ತೀವ್ರಗತಿಯಲ್ಲಿ ಅಭಿವೃದ್ಧಿ ಪಡಿಸುತ್ತಿದೆ. ಫುಡ್ ಪಾರ್ಕ್, ಟೆಕ್ಸ್‌ಟೈಲ್ ಪಾರ್ಕ್, ಇಂಡಸ್ತ್ರಿ ಪಾರ್ಕ್ ಹಾಗೂ ಎಲೆಕ್ಟ್ರಾನಿಕ್ಸ್ ವಸ್ತುಗಳ ಉತ್ಪಾದನಾ ಸಂಕೀರ್ಣವನ್ನು ಆರಂಭಿಸಲು ಸರ್ಕಾರ ಉದ್ದೇಶಿಸಿದೆ. ಜಿಲ್ಲೆಯಲ್ಲಿ 7 ಕೈಗಾರಿಕಾ ಪಾರ್ಕ್‌ಗಳು ಮತ್ತು 7 ಕೈಗಾರಿಕಾ ಪ್ರದೇಶಗಳಿದ್ದು 37 ಬೃಹತ್ ಹಾಗೂ ಮಧ್ಯಮ ಕೈಗಾರಿಕೆಗಳು ಸರಿಸುಮಾರು 11.4 ಸಾವಿರ ಕೋಟಿ ರೂ. ಹೂಡಿಕೆಯೊಂದಿಗೆ ಜಿಲ್ಲೆಯಲ್ಲಿ ಇವೆ. ಸಣ್ಣ ಪ್ರಮಾಣದ ಕೈಗಾರಿಕೆಗಳ ಸಂಖ್ಯೆಯೂ 27,322 ಕೈಗಾರಿಕೆಗಳು ಇದ್ದು ಸರಿಸುಮಾರು 45.7 ಸಾವಿರ ಕೋಟಿ ರೂ. ಬಂಡವಾಳವನ್ನು ಹೊಂದಿವೆ.

ಮುಚ್ಚಿದ ಹೆಚ್.ಎಂ.ಟಿ.:

ಹಲವು ವ಼ರ್ಷಗಳಿಂದ ಕೋಮಾ ಸ್ಥಿತಿಯಲ್ಲಿ ಇದ್ದ ಸರ್ವಾಜನಿಕ ಉದ್ಯಮವಾದ ಹೆಚ್.ಎಂ.ಟಿ.ಯನ್ನು ಅಂತಿಮವಾಗಿ 2016 ಮೇ ತಿಂಗಳಲ್ಲಿ ಮುಚ್ಚಲಾಗಿದೆ. ಸರ್ಕಾರಕ್ಕೆ ಇದನ್ನು ಉಳಿಸಿಕೊಳ್ಳಲು ಹಲವು ದಾರಿಗಳಿದ್ದರೂ ಅದರ ಬಗ್ಗೆ ಗಮನ ಹರಿಸದೆ ಸರ್ಕಾರ ಈ ತೀರ್ಮಾನಕ್ಕೆ ಬಂದಿರುವುದರ ಖಂಡನಿಯ, ಇಲ್ಲಿನ ಕಾರ್ಮಿಕರಿಗೆ ಇನ್ನು ನೀಡಬೇಕಾದ ಬಾಕಿಗಳನ್ನು ನೀಡದೆ ಅಲೆಯುವಂತೆ ಮಾಡಲಾಗಿದೆ.

ಉದ್ಯೋಗ ಸೃಷ್ಟಿಸದ ಪುಡ್ ಪಾರ್ಕ್:

ತುಮಕೂರು ಹೊರ ವಲಯದಲ್ಲಿ ವಸಂತ ನರಸಪುರದಲ್ಲಿನ ಕೈಗಾರಿಕಾ ಪ್ರದೇಶದಲ್ಲಿ ಹಲವು ಕೈಗಾರಿಕೆಗಳು, ವಿದೇಶಿ ಹೂಡಿಕೆದಾರರು ಬರುತ್ತಿದ್ದಾರೆ ಎಂಬ ಪ್ರಚಾರ ನಡೆದಿದೆ. ಸುಮಾರು 103 ಎಕರೆಯಲ್ಲಿ ಸ್ಥಾಪನೆಯಾದ ಅತ್ಯಾಧುನಿಕ ತಂತ್ರಜ್ಞಾನಗಳ ಆಹಾರ ಸಂಸ್ಕರಣಾ ಘಟಕವೂ ಸಾವಿರಾರು ಉದ್ಯೋಗಗಳನ್ನು ನೀಡಲಿದೆ ಎಂಬ ಮಾತು ಸುಳ್ಳಾಗಿದೆ ಕೆಲವೇ ನೂರು ಉದ್ಯೋಗಳು ಮಾತ್ರ, ಅದು ಸಹ ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಂಡಿರುವುದು ಕನಿಷ್ಟ ವೇತನವು ಪಾವತಿಸದೆ ದುಡಿಸುತ್ತಿರುವ ಬಗ್ಗೆ ದೂರುಗಳು ಬರುತ್ತಿವೆ.

ಬೆಳೆಯುತ್ತಿರುವ ಶಿಕ್ಷಣ ಕ್ಷೇತ್ರ:

ಹೆಚ್ಚು (ಶೇಕಡ 75.54) ಸಾಕ್ಷರತೆಯನ್ನು ಹೊಂದಿರುವ ಜಿಲ್ಲೆಗಳಲ್ಲಿ ಒಂದಾದ ತುಮಕೂರಿನಲ್ಲಿ, ದಿನದಿಂದ ದಿನಕ್ಕೆ ಜಿಲ್ಲೆಯಲ್ಲಿ ಶಿಕ್ಷಣ ಕೇತ್ರದಲ್ಲಿ ಅಂತರಾಷ್ಟ್ರಿಯ ಶಾಲೆಗಳ ಹೆಸರಲ್ಲಿ ಸಿ.ಬಿ.ಎಸ್.ಇ. ಪಠ್ಯಕ್ರಮದ ಶಾಲೆಗಳು/ಪಿಯು ಕಾಲೇಜುಗಳು ನಾಯಿ ಕೊಡೆಗಳಂತೆ ಹುಟ್ಟುತ್ತಿವೆ ಒಂದು ಕಡೆ ಪೋಷಕರಿಂದ ಅತೀ ಹೆಚ್ಚು ವಂತಿಗೆ ವಸೂಲಿ ಮಾಡಿ ಶೋಷಿಸುವ ಇಂತಹ ಸಂಸ್ಥೆಗಳು ಅಲ್ಲಿ ದುಡಿಯುವ ಸಿಬಂದಿಗೆ ಅಲ್ಪ ವೇತನ ಮಾತ್ರ ನೀಡಿ ವಂಚಿಸುತ್ತಿವೆ. ನಗರದಲ್ಲಿರುವ ಡೀಮ್ಡ್ ಯುನಿರ್ವಸಿಟಿಯಲ್ಲೇ ಕನಿಷ್ಟ ವೇತನ ನೀಡದೆ ದುಡಿಸಲಾಗುತ್ತಿದೆ.

ಉತ್ತಮಗೊಳ್ಳದ ಅಮ್ಮಸಂದ್ರ ಸಿಮೆಂಟ್: ಬಿರ್ಲಾ ಒಡೆತನದಲ್ಲಿದ್ದು ಸಾವಿರಾರು ಕಾರ್ಮಿಕರಿಗೆ ಉದ್ಯೋಗ ನೀಡಿದ್ದ ಡೈಮೆಂಡ್ ಸಿಮೆಂಟ್ ಬ್ರಾಂಡ್‌ನ ಅಮ್ಮಸಂದ್ರ ಸೀಮೆಂಟ್ ಕಾರ್ಖಾನೆಯಲ್ಲಿ ಜಾಗತಿಕ ಸಿಮೆಂಟ್ ಉತ್ಪಾದನೆಯಲ್ಲಿ ಹೆಸರು ಮಾಡಿರುವ ಹೈಡಲ್‌ಬರ್ಗ್ ಮಾಲೀಕತ್ವಕ್ಕೆ ಒಳಪಟ್ಟಿದ್ದು ಕಾರ್ಮಿಕರ ಸಂಖ್ಯೆ ಕ್ಷೀಣಿಸಿದೆ.

ಸಾವಿನಂಚಿನಲ್ಲಿರುವ ಬೀಡಿ ಉದ್ಯಮ:

ಜಿಲ್ಲೆಯಲ್ಲಿ ಉದ್ಯೋಗವನ್ನು ನೀಡಿದ್ದ ಬೀಡಿ ಉದ್ಯಮ ಸರ್ಕಾರದ ನೀತಿಗಳಿಂದಾಗಿ ಸಾವಿನಂಚಿನಲ್ಲಿದೆ. ಇದನ್ನೇ ನಂಬಿದ ಒಂಟಿ ಮಹಿಳೆಯರು, ವಿದವೆಯರು, ವಯೋವೃದ್ದರು, ಪರ್ಯಾಯ ಉದ್ಯೋಗಕ್ಕಾಗಿ ನಡೆಸುತ್ತಿರುವ ಹೋರಾಟ ಸರ್ಕಾರಗಳ ಕಿವಿಗೆ ತಟ್ಟದಂತಿದೆ.

ಬೆಳೆಯುತ್ತಿರುವ ಗಾರ್ಮೆಂಟ್ಸ್ ಕೈಗಾರಿಕೆ:

ತುಮಕೂರು ನಗರದ ಹೊರವಲಯಗಳಲ್ಲಿ ಗಾಂಮೆರ್ಟ್ಸ್‌ಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋಗುತ್ತಿದೆ. ತುಮಕೂರು ಜಿಲ್ಲೆಯ ಹಲವು ಗ್ರಾಮಾಂತರ ಪ್ರದೇಶಗಳ ವಿಶೇಷವಾಗಿ ಮಹಿಳೆಯರಿಗೆ ಸಾವಿರಾರು ಉದ್ಯೋಗಗಳನ್ನು ಇದು ಸೃಷ್ಟಿಸಿದೆ.


ವಿನಾಯಕ ಸಿಎನ್‌ಸಿ ಕಾರ್ಮಿಕರ ಅನಿರ್ಧಿಷ್ಠ ಹೋರಾಟ

ಕ್ಷೀಣಿಸಿದ ಗಣಿಗಾರಿಕೆ:

ಜಿಲ್ಲೆಯಲ್ಲಿ ಗ್ರಾನೈಟ್ ಕೈಗಾರಿಕೆ, ಮರಳು ಗಣಿಗಾರಿಕೆ, ಕಲ್ಲುಗಣಿಗಾರಿಕೆಗಳು ನಿರಂತರವಾಗಿ ನಡೆ–ಯುತ್ತಿದ್ದು ಇದರಲ್ಲಿ ವರಶಂಪಾರಂಪರಿಕ ವೃತ್ತಿಗಳನ್ನು ಅವಲಂಬಿಸಿದ ಸಮುದಾಯಗಳು ತೊಡಗಿಕೊಂಡಿವೆ. ಈ ಹಿಂದೆ ಬಾರಿ ಧೂಳನ್ನು ಎಬ್ಬಿಸಿದ್ದ ಗಣಿಗಾರಿಕೆಯೂ ಮ್ಯಾಂಗನಿಸ್ ಮತ್ತಿತರೆ ವಸ್ತುಗಳ ಗಣಿಗಾರಿಕೆಯೂ ಸರಿಸುಮಾರು ಇಲ್ಲದಂತಾಗಿದೆ. ತುಮಕೂರು ನಗರದ ಹೊರವಲಯಗಳಲ್ಲಿ ಹಾಗೂ ವಸಂತನರಸಾಪುರ ಮತ್ತು ಕುಣಿಗಲ್ ಪಟ್ಟಣದ ಹೊರವಲಯಗಳಲ್ಲಿ ಕೈಗಾರಿಕೆಗಳು ಕೇಂದ್ರಿಕೃವಾಗುತ್ತಿರುವುದನ್ನು ಗಮನಿಸ ಬಹುದಾಗಿದೆ.

ಬೆಳೆಯುತ್ತಿರುವ ಕಟ್ಟಡ ಕೈಗಾರಿಕೆ:

ಜಿಲ್ಲೆಯಲ್ಲಿ ಬೆಳೆಯುತ್ತಿರುವ ಕಟ್ಟಡ ಕೈಗಾರಿ–ಕೆಯೂ ಹಲವು ಸಾವಿರ ವಲಸೆ ಕಾರ್ಮಿಕರನ್ನು ಹೊಂದಿದ್ದು ಉತ್ತುಂಗದಲ್ಲಿದೆ. ಆಧುನಿಕ ಯಂತ್ರಗಳ ಬಳಕೆ, ಮಾನವನ ಕೆಲಸದ ದಿನಗಳನ್ನು ನುಂಗಿ ಹಾಕುತ್ತಿದೆಯಲ್ಲದೆ, ಇದನ್ನು ನಂಬಿದ ಕಾರ್ಮಿಕರನ್ನು ಸಂಕಷ್ಟಕ್ಕೆ ದೂಡುತ್ತಿದೆ.

ಗ್ರಾಮೀಣ ಉದ್ಯೋಗ ಖಾತ್ರಿ ಜಾರಿಯಲ್ಲಿ ವಿಫಲತೆ:

ಗ್ರಾಮೀಣ ಪ್ರದೇಶದ ಜನರಿಗೆ ಕನಿಷ್ಠ 100 ದಿನಗಳ ಉದ್ಯೋಗ ನೀಡುವ ಗ್ರಾಮಿಣ ಉದ್ಯೋಗ ಖಾತ್ರಿ ಯೋಜನೆಯನ್ನು ಜಿಲ್ಲೆಯಲ್ಲಿ ಪರಿಪೂರ್ಣವಾಗಿ ಜಾರಿಗೆ ತರಲು ಸಾಧ್ಯವಾಗಿಲ್ಲ. ಬಡಜನರಿಗೆ ಉದ್ಯೋಗ ಸೃಷ್ಠಿಸುವ ಮೂಲ ಆಶಯವನ್ನು ಬದಿಗಿರಿಸಿ ಯಂತ್ರಗಳಿಂದ ಕೆಲಸಮಾಡಿಸುವ ಹಾಗೂ ಬಡಜನರ ಪಾಸ್‌ಪುಸ್ತಕವನ್ನು ತಮ್ಮ ಬಳಿ ಇರಿಸಿಕೊಂಡು ಜನತೆಯ ಕೂಲಿಯನ್ನು ತಾವೇ ಪಡೆದುಕೊಳ್ಳುವ ಹಲವು ಪ್ರಕರಣಗಳು ಬೆಳಕಿಗೆ ಬಾರದೆ ಗುತ್ತಿಗೆದಾರರು ಹಣಮಾಡಿಕೊಳ್ಳುವ ದಂಧೆ ಇದಾಗಿದೆ. ಪಂಚಾಯ್ತಿ ಮಟ್ಟದಲ್ಲಿ ಅಧಿಕಾರಿಗಳ ಹಾಗೂ ಗುತ್ತಿಗೆದಾರರ ಅನೈತಿಕ ಮೈತ್ರಿ ಹಣಮಾಡಿಕೊಳ್ಳುವ ದಂಧೆ, ಸಮರ್ಪಕ ಜಾರಿಗೆ ಅಗತ್ಯವಾದ ಸಾಮಾಜಿಕ ಒತ್ತಡವಿಲ್ಲದ ಕಾರಣ ಇದು ಸೃಷ್ಟಿಸಿದ ಉದ್ಯೋಗಗಳು ಅಷ್ಟಕಷ್ಟೆ.

ರೈಸ್‌ಮಿಲ್‌ಗಳ ತವರು:

ತುಮಕೂರು ನಗರದಲ್ಲಿ ಸುಮಾರು 113ಕ್ಕೂ ಹೆಚ್ಚು ರೈಸ್‌ಮಿಲ್‌ಗಳಿದ್ದು ರಾಜ್ಯದ ಭತ್ತ ಬೆಳೆಯುವ ಹಲವು ಜಿಲ್ಲೆಗಳ ರೈತರು ಈ ರೈಸ್‌ಮಿಲ್‌ಗಳಿಗೆ ಕಚ್ಚಾ ಸಾಮಗ್ರಿಗಳನ್ನು ಒದಗಿಸುತ್ತಿದ್ದಾರೆ. ರಾಜ್ಯದ ಅಕ್ಕಿ ಪೂರೈಕೆಮಾಡುವ ಪ್ರಮುಖ ಕೇಂದ್ರಗಳಲ್ಲಿ ತುಮಕೂರು ಒಂದಾಗಿದೆ ಎಂಬುದನ್ನು ಗಮನಿಸಬೇಕಾಗಿದೆ.

ಹೊಸ ಕೈಗಾರಿಕೆಗಳು:

ಸರ್ಕಾರ ಅತ್ಯಂತ ಬರಪೀಡಿತ ತಾಲ್ಲೂಕು ಪಾವಗಡದಲ್ಲಿ ಸಾವಿರಾರು ಎಕರೆಗಳಲ್ಲಿ ಸೌರವಿದ್ಯುತ್ ಘಟಕವನ್ನು (ಏಷ್ಯದಲ್ಲೇ ಅತಿ–ದೊಡ್ಡ) ಕೇಂದ್ರವನ್ನು ಆರಂಭಿಸಿದೆ. ಕೇಂದ್ರ ಸರ್ಕಾರಿ ಸ್ವಾಮ್ಯದ ಎಚ್.ಎ.ಎಲ್ ಘಟಕವೊಂದನ್ನು ಸಹ ಗುಬ್ಬಿ ತಾಲ್ಲೂಕಿನಲ್ಲಿ ಆರಂಭಿಸಲು ಉದ್ದೇಶಿಸಿದ್ದು ಭೂಸ್ವಾಧಿನ ಪ್ರಕ್ರಿಯೇ ಈಗಷ್ಟೆ ಮುಗಿದಿದೆ. ಇದು ಸ್ವಲ್ಪ ಉದ್ಯೋಗಗಳನ್ನು ಸೃಷ್ಠಿಸುವ ಭರವಸೆಗಳನ್ನು ಮೂಡಿಸಿದೆ.

ಸ್ಮಾರ್ಟ್ ಸಿಟಿ:

ತುಮಕೂರು ಮಹಾನಗರವನ್ನು ಸ್ಮಾರ್ಟ್ ಸಿಟಿಯಾಗಿಸುವ ಪ್ರಯತ್ನವನ್ನು ಮಹಾನಗರಪಾಲಿಕೆ ಹಾಗೂ ಜಿಲ್ಲಾಡಳಿತ ಮುತುವರ್ಜಿ ವಹಿಸುತ್ತಿದೆ. ಸ್ಮಾರ್ಟ್ ಸಿಟಿ ಕೆಲವೇ ಜನರ ವೈಭವಯುತ ಸೌಲಭ್ಯಕ್ಕೆ ಜನಸಾಮಾನ್ಯರು ತೆರಿಗೆ ಕಟ್ಟುವಂತಹ ಪರಿಸ್ಥಿತಿ ನಿರ್ಮಾಣವಾಗಲಿದೆಯಲ್ಲದ; ಇಡೀ ನಗರದ ಜನತೆಗೆ ಯಾವುದೇ ಪ್ರಯೋಜನವಾಗುವುದಿಲ್ಲ. ಸ್ಮಾರ್ಟ್ ಸಿಟಿಯಾಗಲು ಹೊರಟ ನಗರದಲ್ಲಿ ಪಿಟ್‌ಗುಂಡಿ ಸ್ವಚ್ಚಗೊಳಿಸಲು ಹೋಗಿ ಇಬ್ಬರು ಪೌರಕಾರ್ಮಿಕರು ಸತ್ತದ್ದು ವಾಸ್ತವತೆಗೆ ಹಿಡಿದ ಕೈಗನ್ನಡಿಯಂತಿದೆ.

ತುಮಕೂರು ನಗರಕ್ಕೆ ಪವರ್‌ಗ್ರೀಡ್, ತುಮಕೂರು–ಮಧುಗಿರಿ, ತುಮಕೂರು–ರಾಯದುರ್ಗ, ತುಮಕೂರು–ದಾವಣಗೆರೆ ರೈಲ್ವೆ ಲೈನ್ ಕಾಮಗಾರಿ, ತುಮಕೂರು–ಅರಸಿಕೆರೆ ರೈಲ್ವೆ ಲೈನ್‌ನ ಎರಡುಪಥದ ಕಾಮಗಾರಿಗಳು ಭರದಿಂದ ಸಾಗಿವೆ.

ಕೈಗಾರಿಕಾ ಕಾರ್ಮಿಕರ ಪರಿಸ್ಥಿತಿ:

ಕೈಗಾರಿಕಾ ಕಾರ್ಮಿಕರ ಪರಿಸ್ಥಿತಿ ಬಹಳ ಉತ್ತಮವಾಗೆನೂ ಇಲ್ಲ. ಸಂಘಗಳಿಲ್ಲದ ಬಹುತೇಕ ಕಾರ್ಖಾನೆಗಳಲ್ಲಿ, ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ 12 ಗಂಟೆಯ ದುಡಿಮೆ ಕನಿಷ್ಠ ಕೂಲಿ ಇಲ್ಲದ ದುಡಿಮೆ ಸಾಮಾನ್ಯವಾಗಿದೆ. ವಿಪರೀತ ಕೆಲಸದ ಒತ್ತಡ ಹಾಗೂ ಕೆಲಸದ ಭದ್ರತೆಗಳಿಲ್ಲದ ಪರಿಸ್ಥಿತಿ ಎಲ್ಲೆಡೆ ಇದೆ. ಕಾರ್ಮಿಕರಿಗೆ ಕೈಗಾರಿಕಾ ಪ್ರದೇಶಗಳಿಗೆ ಸೂಕ್ತ ಸಾರಿಗೆ ವ್ಯವಸ್ಥೆ ಇಲ್ಲದೆ ದುಡಿಮೆಯ ಪ್ರಮುಖ ಭಾಗವೊಂದನ್ನು ಸಾರಿಗೆ ವೆಚ್ಚವಾಗಿ ವ್ಯಯಿಸಬೇಕಾದ ಸ್ಥಿತಿ ಇದೆ. ಅಲ್ಲದೆ ಕಾರ್ಮಿಕರಿಗೆ ಸೂಕ್ತ ವಸತಿಯೋಜನೆಯನ್ನು ರೂಪಿಸಲಾಗದ ಕಾರಣ ದುಡಿಮೆಯ ಅರ್ಧ ಭಾಗದಷ್ಟು ಹಣವನ್ನು ಮನೆ ಬಾಡಿಗೆಗೆ ವಿನಿಯೋಗಿಸಬೇಕಾದ ಸ್ಥಿತಿ ಇದೆ. ಕೈಗಾರಿಕೆಗಳಲ್ಲಿ ವಿಶೇಷವಾಗಿ ರೈಸ್‌ಮಿಲ್, ಗ್ರಾನೈಟ್ ಇಂಡಸ್ತ್ರಿ ಮತ್ತಿತರೆ ಕಡೆಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ವಲಸಿಗ ಕಾರ್ಮಿಕರನ್ನು ಗುತ್ತಿಗೆ ಆಧಾರದಲ್ಲಿ ದುಡಿಸಲಾಗುತ್ತಿದೆ.

ಕೈಗಾರಿಕಾ ಸಂಬಂಧ:

ಜಿಲ್ಲೆಯಲ್ಲಿ ಕೈಗಾರಿಕಾ ಕಾರ್ಮಿಕರು ಹಾಗೂ ಬಂಡವಾಳಗಾರರ ನಡುವಿನ ಸಂಬಂಧಗಳು ಮಿಶ್ರವಾದ ಅನುಭವಗಳನ್ನು ಹೊಂದಿದೆ. ಬಹುತೇಕ ಮಾಲೀಕರು ಕಾರ್ಮಿಕರು ಸಂಘಟಿತರಾಗುವುದನ್ನು ಹಾಗೂ ಸಾಮೂಹಿಕ ಚೌಕಾಸಿಗೆ ಮುಂದಾಗುವುದನ್ನು ಆರೋಗ್ಯಕರವಾಗಿ ಸ್ವೀಕರಿಸುತ್ತಿಲ್ಲ. ಇದೇ ಕಾರಣದಿಂದಾಗಿ ಮಾಲೀಕರ ಮತ್ತು ಕಾರ್ಮಿಕರ ನಡುವಿನ ತಿಕ್ಕಾಟಗಳು ಹೆಚ್ಚುತ್ತಿವೆ. ನ್ಯಾಯಯುತವಾಗಿ ಸಂವಿಧಾನಬದ್ಧವಾಗಿ ಶಾಂತಿಯುತವಾಗಿ ಕಾರ್ಮಿಕರು ನಡೆಸುವ ಹೋರಾಟಗಳಿಗೆ ಮಾಲೀಕರು, ಜಿಲ್ಲಾಡಳಿತ, ಸರ್ಕಾರಗಳ ಸ್ಪಂದನೆ ನಿರೀಕ್ಷಿತ ಮಟ್ಟಿಗಿಲ್ಲ. ತುಮಕೂರು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಂಘದ

ಪುಟ 15 ಕ್ಕೆ

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**